ಮೆಸ್ಕಾಂ

MESCOM

# ಮಂಗಳೂರು ವಿದ್ಯುಚ್ಛಕ್ತಿ ಸರಬರಾಜು ಕಂಪೆನಿ ನಿಯಮಿತ

# ವಿದ್ಯುಚ್ಛಕ್ತಿ ದರಗಳು-2016

## ಗೌರವಾನ್ವಿತ ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗದ ಆದೇಶ
## ದಿನಾಂಕ ೦೨-೦೩-೨೦೧೬

## ರೀಟೈಲ್ ಗ್ರಾಹಕ ವಿದ್ಯುಚ್ಛಕ್ತಿ ದರಗಳು

**ದಿನಾಂಕ ೦೧-೦೪-೨೦೧೬ ರಿಂದ ಅಥವಾ ನಂತರದ ಮೊದಲ ಮಾಪಕ ಓದುವ ದಿನಾಂಕದಿಂದ ಬಳಸುವ ವಿದ್ಯುತ್‌ಗೆ ಅನ್ವಯಿಸಿ ಜಾರಿಗೆ ಬರುತ್ತವೆ.**

# ವಿದ್ಯುಚ್ಛಕ್ತಿ ದರಗಳು – 2016

## ವಿದ್ಯುಚ್ಛಕ್ತಿ ದರಗಳ ಸಾಮಾನ್ಯ ಷರತ್ತುಗಳು ಹಾಗೂ ನಿಬಂಧನೆಗಳು

**(ಎಚ್.ಟಿ. ಮತ್ತು ಎಲ್.ಟಿ. ಎರಡಕ್ಕೂ ಅನ್ವಯಿಸುತ್ತವೆ)**

೧. ಬಳಕೆದಾರರು, ವಿದ್ಯುಚ್ಛಕ್ತಿ ಸರಬರಾಜಿಗಾಗಿ ನಿಗದಿಪಡಿಸಿರುವ ನಮೂನೆಯಲ್ಲಿ ಒಪ್ಪಂದ ಪತ್ರವನ್ನು ಸಲ್ಲಿಸಿ, ನಿಗದಿಪಡಿಸಿರುವ ಠೇವಣಿಯನ್ನು ಸಂದಾಯ ಮಾಡಿ ಮತ್ತು ಕರ್ನಾಟಕ ರಾಜ್ಯದಲ್ಲಿ ವಿದ್ಯುತ್ ಸರಬರಾಜಿಗಾಗಿ ವಿತರಣಾ ಲೈಸೆನ್ಸುದಾರರ ಷರತ್ತುಗಳು ಹಾಗೂ ಸರಬರಾಜು ಪಡೆಯುವ ಸಮಯದಲ್ಲಿ ಜಾರಿಯಲ್ಲಿರುವ ವಿದ್ಯುಚ್ಛಕ್ತಿ ಕಾಯಿದೆ ೨೦೦೩ ರ ಅಡಿಯಲ್ಲಿ ಹೊರಡಿಸಿರುವ ಷರತ್ತು ಹಾಗೂ ನಿಯಮಾವಳಿಗಳನ್ನು ಪಾಲಿಸಿದ್ದಲ್ಲಿ ಮಾತ್ರ ವಿದ್ಯುತ್ ಸರಬರಾಜನ್ನು ನೀಡಲಾಗುವುದು ಮತ್ತು ಕಾಲಕಾಲಕ್ಕೆ ಮಾಡುವ ತಿದ್ದುಪಡಿಯಂತೆ ಮೇಲಿನ ಷರತ್ತುಗಳನ್ನು ಪಾಲಿಸುವ ಷರತ್ತಿಗೆ ಒಳಪಟ್ಟು ವಿದ್ಯುತ್ ಸರಬರಾಜನ್ನು ಮುಂದುವರಿಸಲಾಗುವುದು.

೨. ಲೈಸೆನ್ಸುದಾರರು ಅನುಮೋದಿಸದ ಹೊರತು, ಈ ವಿದ್ಯುಚ್ಛಕ್ತಿ ದರಗಳು ಒಂದು ಬಿಂದುವಿನ ಸರಬರಾಜಿಗೆ ಮಾತ್ರ ಅನ್ವಯಿಸುತ್ತವೆ.

೩. ಬಳಕೆದಾರರು ಕನಿಷ್ಟ ಶುಲ್ಕದ ಪಾವತಿಗೆ ಖಾತರಿ ನೀಡದ ಹೊರತು ಯಾವುದೇ ಸ್ಥಾಪನಕ್ಕೆ ವಿದ್ಯುತ್ ಸಂಪರ್ಕ ನೀಡಲು ಲೈಸೆನ್ಸುದಾರ ಸಂಸ್ಥೆಯು ಬದ್ಧವಾಗಿರುವುದಿಲ್ಲ. ಕಾಲಕಾಲಕ್ಕೆ ಜಾರಿಯಲ್ಲಿರುವ ವಿದ್ಯುಚ್ಛಕ್ತಿ ಸರಬರಾಜು ಶುಲ್ಕವು ಕನಿಷ್ಟ ಶುಲ್ಕವಾಗಿರುತ್ತದೆ. ಸ್ಥಾಪನಕ್ಕೆ ವಿದ್ಯುತ್ ಸಂಪರ್ಕವಿರಲಿ ಅಥವಾ ಸಂಪರ್ಕ ನಿಲುಗಡೆಯಾಗಿರಲಿ, ವಿದ್ಯುತ್ ಸರಬರಾಜು ಒಪ್ಪಂದ ರದ್ದಾಗುವವರೆಗೂ ಬಳಕೆದಾರರು ಕನಿಷ್ಟ ಶುಲ್ಕವನ್ನು ಪಾವತಿ ಮಾಡಬೇಕಾಗುತ್ತದೆ.

೪. ಅನುಸೂಚಿಯಲ್ಲಿರುವ ವಿದ್ಯುಚ್ಛಕ್ತಿ ದರಗಳು ಕರ್ನಾಟಕ ರಾಜ್ಯದ ಒಳಗೆ ಮಾರುವ ವಿದ್ಯುತ್ ಸರಬರಾಜಿಗೆ ಮಾತ್ರ ಅನ್ವಯಿಸುತ್ತವೆ.

೫. ಈ ವಿದ್ಯುತ್ ದರಗಳು ಕಾಲಕಾಲಕ್ಕೆ ಸರ್ಕಾರವು ನಿರ್ಧರಿಸುವ ತೆರಿಗೆ ಮತ್ತು ಮೇಲುಕರಗಳ ನಿಬಂಧನೆಗೆ ಒಳಪಟ್ಟಿರುತ್ತವೆ.

೬. ಈ ವಿದ್ಯುತ್ ದರಗಳ ಉದ್ದೇಶಕ್ಕೆ ಈ ಕೆಳಗಿನ ಪರಿವರ್ತನಾ ಕೋಷ್ಟಕವನ್ನು ಬಳಸುವುದು.

೧ ಎಚ್.ಪಿ. = ೦.೭೪೬ ಕಿ.ವಾ.        ೧ ಎಚ್.ಪಿ. = ೦.೮೭೮ ಕೆ.ವಿ.ಎ.

೭. ಬಿಲ್ಲಿನ ಮೊಬಲಗನ್ನು ಹತ್ತಿರದ ರೂಪಾಯಿಗೆ ಪೂರ್ಣಾಂಕಗೊಳಿಸಬೇಕು. ಅಂದರೆ, ಬಿಲ್ಲಿನ ೫೦ ಪೈಸೆ ಹಾಗೂ ಹೆಚ್ಚಿನ ಮೊಬಲಗನ್ನು ಮುಂದಿನ ರೂಪಾಯಿಗೆ ಪೂರ್ಣಾಂಕಗೊಳಿಸಬೇಕು ಮತ್ತು ೫೦ ಪೈಸೆಗಿಂತ ಕಡಿಮೆ ಮೊಬಲಗನ್ನು ಗಣನೆಗೆ ತೆಗೆದುಕೊಳ್ಳಬಾರದು.

೮. ಮದುವೆ, ಹೋಟೆಲ್‌ಗಳಲ್ಲಿನ ಪ್ರದರ್ಶನ, ವ್ಯಾಪಾರ ಅಭಿವೃದ್ಧಿ ಇತ್ಯಾದಿ ಕಾರ್ಯಗಳಿಗೆ, ಈಗಾಗಲೇ ಖಾಯಂ ವಿದ್ಯುತ್ ಸರಬರಾಜು ಇರುವ ಸ್ಥಾಪನಗಳಲ್ಲಿ ತಾತ್ಕಾಲಿಕ ದೀಪಾಲಂಕಾರದ ಬಳಕೆಗಾಗಿ ವಿದ್ಯುತ್ತನ್ನು ಖಾಯಂ ವಿದ್ಯುತ್ ಸ್ಥಾಪನಗಳಿಗೆ ಹಾಲಿ ಜಾರಿಯಲ್ಲಿರುವ ದರದ ಪ್ರಕಾರ, ಖಾಯಂ ಆಗಿ ಮಂಜೂರಾದ ವಿದ್ಯುತ್‌ನ ಮಿತಿಯಲ್ಲಿ ಬಳಸಿಕೊಳ್ಳಬಹುದು. ಬಳಕೆಯ ವಿದ್ಯುತ್, ಮಂಜೂರಾದ ವಿದ್ಯುತ್ತಿನ ಮಿತಿಯನ್ನು ಮೀರಿದಾಗ ಕರ್ನಾಟಕ ರಾಜ್ಯದಲ್ಲಿ ವಿದ್ಯುತ್ ಸರಬರಾಜಿಗಾಗಿ ವಿತರಣಾ ಲೈಸೆನ್ಸುದಾರರ ಷರತ್ತುಗಳ ಪ್ರಕಾರ ತಾತ್ಕಾಲಿಕ ವಿದ್ಯುತ್ ಸರಬರಾಜಿನ ದರವನ್ನು ವಿಧಿಸಲಾಗುವುದು.

೯. ಮಂಜೂರಾದ ವಿದ್ಯುತ್ ಪ್ರಮಾಣವು ೫೦ಕಿ.ವಾ / ೬೭ಎಚ್.ಪಿ. ಮತ್ತು ಅದಕ್ಕಿಂತ ಹೆಚ್ಚಾಗಿ ಇದ್ದರೆ, ಎಲ್.ಟಿ. ವಿದ್ಯುತ್ ಸರಬರಾಜನ್ನು ನೀಡಲಾಗುವುದಿಲ್ಲ. ಕ.ವಿ.ನಿ.ಆ. (ವಿದ್ಯುತ್ ಸರಬರಾಜು ವೆಚ್ಚಗಳ ವಸೂಲಿ) ನಿಯಮಗಳು, ೨೦೦೪ ರ ಖಂಡಿಕೆ ೩.೧.೧ ಮತ್ತು ಕಾಲಕಾಲಕ್ಕೆ ತಿದ್ದುಪಡಿಗೊಳಪಡಬಹುದಾದ ಇದರ ನಿಯಮಗಳ ಅಡಿಯಲ್ಲಿ ಸಂಪರ್ಕ ಪಡೆದ ಸ್ಥಾಪನಗಳಿಗೆ ಈ ಷರತ್ತು ಅನ್ವಯಿಸುವುದಿಲ್ಲ. ಆದರೂ ಅರ್ಜಿದಾರರು ಕಡಿಮೆ ಹೊರೆಗೆ ಎಚ್.ಟಿ ಸರಬರಾಜನ್ನು ಪಡೆಯಲು ಅವಕಾಶವಿದೆ. ಎಚ್.ಟಿ ವಿದ್ಯುತ್ ಸರಬರಾಜಿಗೆ, ಕನಿಷ್ಟ ಒಪ್ಪಂದ (ಗುತ್ತಿಗೆ) ಬೇಡಿಕೆಯು, ೨೫ಕೆವಿಎ ಅಥವಾ ಕ.ವಿ.ನಿ. ಆಯೋಗದಿಂದ ಅನುಮೋದನೆ ಪಡೆದು ಲೈಸೆನ್ಸುದಾರರು ಕಾಲಕಾಲಕ್ಕೆ ತಿದ್ದುಪಡಿ ಮಾಡಿದ ಆದೇಶದಂತೆ ಇರತಕ್ಕದ್ದು.

೧೦. ಕೆಳಗಿನ ಷರತ್ತುಗಳನ್ನು ಹೊರತುಪಡಿಸಿದಂತೆ, ಲೈಸೆನ್ಸುದಾರರಿಂದ ಖರೀದಿಸಿದ ವಿದ್ಯುಚ್ಛಕ್ತಿಯನ್ನು ಬಳಕೆದಾರರು ಮೂರನೆಯವರಿಗೆ ಮರುಮಾರಾಟ ಮಾಡತಕ್ಕದ್ದಲ್ಲ.

ಎ) ಬಳಕೆದಾರರು, ವಿದ್ಯುಚ್ಛಕ್ತಿ ವಿತರಣೆಗೆ ಮತ್ತು ಮಾರಾಟಕ್ಕೆ ಮಂಜೂರಾತಿ ಅಥವಾ ವಿದ್ಯುತ್ ದರದ ಅವಕಾಶವನ್ನು ಪಡೆದಿದ್ದಲ್ಲಿ.

ಬಿ) ಬಳಕೆದಾರರು, ಒಪ್ಪಂದದ ಅವಕಾಶಗಳ ಪ್ರಕಾರ ವಿಶೇಷ ಅನುಮತಿಯ ಅಡಿಯಲ್ಲಿ ಮರು ಮಾರಾಟದ ಒಪ್ಪಂದವನ್ನು ಹೊಂದಿದ್ದಲ್ಲಿ.

೧೧. ವಿದ್ಯುಚ್ಛಕ್ತಿ ಬಿಲ್ಲು ಮೊಬಲಗನ್ನು ಸಂದಾಯ ಮಾಡದಿರುವುದಕ್ಕೆ ವಿದ್ಯುಚ್ಛಕ್ತಿ ಬಿಲ್ಲು ತಲುಪದಿರುವುದು ಸಮಂಜಸ ಕಾರಣವಲ್ಲ. ಮೀಟರ್ ಓದುವ ದಿನಾಂಕದಿಂದ ಏಳು ದಿನಗಳ ಒಳಗೆ ವಿದ್ಯುತ್ ಬಿಲ್ಲು ತಲುಪದಿದ್ದಲ್ಲಿ ಬಳಕೆದಾರರು, ಬಿಲ್ಲು ನೀಡುವ ಕಛೇರಿಗೆ ಬಿಲ್ಲು ತಲುಪದಿರುವ ಬಗ್ಗೆ ತಿಳಿಸತಕ್ಕದ್ದು. ಇಲ್ಲವಾದಲ್ಲಿ, ಬಳಕೆದಾರರಿಗೆ ಸಕಾಲದಲ್ಲಿ ಬಿಲ್ಲು ತಲುಪಿದೆ ಎಂದು ಭಾವಿಸಲಾಗುವುದು.

೧೨. ಬಳಕೆದಾರರ ಚೆಕ್ಕುಗಳು ತಿರಸ್ಕರಿಸಲ್ಪಟ್ಟ ಪ್ರತಿ ಚೆಕ್‌ಗೆ ಈ ಕೆಳಗೆ ತೋರಿಸಿರುವಂತೆ ಲೈಸೆನ್ಸುದಾರರು ಶುಲ್ಕಗಳನ್ನು ವಿಧಿಸುವರು.

| | | |
|---|---|---|
| ೧ | ಚೆಕ್‌ನ ಮೊತ್ತ ರೂ.೧೦,೦೦೦/-ಗಳ ವರೆಗೆ | ಕನಿಷ್ಠ ರೂ.೧೦೦/-ರ ಮಿತಿಯಲ್ಲಿ, ಬಿಲ್ಲಿನ ಮೊತ್ತದ ಶೇ.೫ ರಷ್ಟು. |
| ೨ | ಚೆಕ್‌ನ ಮೊತ್ತ ರೂ.೧೦,೦೦೧/- ರಿಂದ ರೂ.೧,೦೦,೦೦೦ ಗಳವರೆಗೆ | ಕನಿಷ್ಠ ರೂ.೫೦೦/-ರ ಮಿತಿಯಲ್ಲಿ, ಬಿಲ್ಲಿನ ಮೊತ್ತದ ಶೇ.೩ ರಷ್ಟು. |

| | | |
|---|---|---|
| ೩ | ಚೆಕ್‌ನ ಮೊತ್ತ ರೂ.೧,೦೦,೦೦೦ ಕ್ಕೂ ಮೇಲಿದ್ದಲ್ಲಿ | ಕನಿಷ್ಠ ರೂ.೩೦೦೦/- ದ ಮಿತಿಯಲ್ಲಿ, ಬಿಲ್ಲಿನ ಮೊತ್ತದ ಶೇ.೨ ರಷ್ಟು. |

೧೩. ವಿದ್ಯುತ್ ಸರಬರಾಜು ಶುಲ್ಕವನ್ನು ಮನಿ ಆರ್ಡರ್ ಮೂಲಕ ಅಥವಾ ಚೆಕ್ಕು/ಡಿ.ಡಿ. ಯನ್ನು ಅಂಚೆ ಮೂಲಕ ಕಳುಹಿಸಿದಾಗ ರಸೀತಿಯನ್ನು ಬರೆಯಲಾಗುವುದು; ಆದರೆ ರಸೀತಿಯನ್ನು ಬಳಕೆದಾರರೇ ಬಂದು ಪಡೆಯತಕ್ಕದ್ದು.

೧೪. ಬಿಲ್ಲಿನ ಮೊಬಲಗನ್ನು ಗಡುವಿನ ದಿನಾಂಕದ ನಂತರ ಸಂದಾಯ ಮಾಡಿದ ಪ್ರಕರಣಗಳಲ್ಲಿ, ಎಲ್.ಟಿ.ಸ್ಥಾಪನಗಳಿಗೆ ಕನಿಷ್ಠ ರೂ.೧/- (ರೂಪಾಯಿ ಒಂದು) ಮತ್ತು ಎಚ್.ಟಿ.ಸ್ಥಾಪನಗಳಿಗೆ ಕನಿಷ್ಟ ರೂ.೧೦೦.೦೦ (ರೂಪಾಯಿ ನೂರು) ಮಿತಿಗೆ ಒಳಪಟ್ಟು ತಿಂಗಳಿಗೆ ಶೇ.೧ ರಂತೆ ವಿಳಂಬವಾದ ವಾಸ್ತವಿಕ ದಿನಗಳಿಗೆ ಸರಳ ಬಡ್ಡಿ ವಿಧಿಸಲಾಗುತ್ತದೆ. ಆದರೆ ರೂ.೧೦.೦೦ ಮತ್ತು ಅದಕ್ಕಿಂತ ಕಡಿಮೆ ಮೊಬಲಗಿನ ಬಾಕಿಗೆ ಬಡ್ಡಿ ವಿಧಿಸುವುದಿಲ್ಲ.

೧೫. ಭಾಗ್ಯಜ್ಯೋತಿ ಮತ್ತು ಕುಟೀರಜ್ಯೋತಿ ಸ್ಥಾಪನಗಳನ್ನು ಹೊರತುಪಡಿಸಿ, ಉಳಿದ ಎಲ್ಲಾ ಎಲ್.ಟಿ. ಪ್ರವರ್ಗದ ಬಳಕೆದಾರರು ತಮಗೆ ಮಂಜೂರಾದ ಹೊರೆಯನ್ನು ಆಧರಿಸಿ, ಲೈಸೆನ್ಸುದಾರರು ನಿಗದಿಪಡಿಸಿರುವ ಕರೆಂಟ್ ಲಿಮಿಟರ್ / ಸರ್ಕ್ಯೂಟ್ ಬ್ರೇಕರನ್ನು ಅಳವಡಿಸತಕ್ಕದ್ದು.

೧೬. ಬಳಕೆದಾರರು ಸಂದಾಯ ಮಾಡಿದ ಮೊಬಲಗನ್ನು ಈ ಕೆಳಕಂಡ ಆದ್ಯತೆಯ ಮೇರೆಗೆ ಹೊಂದಾಣಿಕೆ ಮಾಡಲಾಗುವುದು :

(ಎ) ತೆರಿಗೆ ಬಾಕಿಯ ಮೇಲಿನ ಬಡ್ಡಿ
(ಬಿ) ತೆರಿಗೆ ಬಾಕಿ
(ಸಿ) ರೆವಿನ್ಯೂ ಬಾಕಿಯ ಮೇಲಿನ ಬಡ್ಡಿ
(ಡಿ) ರೆವಿನ್ಯೂ ಬಾಕಿ
(ಇ) ಪ್ರಸಕ್ತ ತಿಂಗಳ ವಿದ್ಯುತ್ ಸರಬರಾಜು ಶುಲ್ಕಗಳು

೧೭. ಬಿಲ್ ಮಾಡುವುದಕ್ಕೆ ಸಂಬಂಧಿಸಿದಂತೆ ,

(i) ಎಲೆಕ್ಟ್ರಾನಿಕ್ ಟ್ರೈವೆಕ್ಟರ್ ಮಾಪಕಗಳನ್ನು ಅಳವಡಿಸದಿರುವ ಎಲ್.ಟಿ. ಸ್ಥಾಪನಗಳಿಗೆ, ರೇಟ್ ಮಾಡಿದ ಗರಿಷ್ಠ ವಿದ್ಯುತ್ ಪ್ರಮಾಣ ಅಥವಾ ಮಂಜೂರಾದ ವಿದ್ಯುತ್ ಪ್ರಮಾಣ, ಇವೆರಡರಲ್ಲಿ ಯಾವುದು ಹೆಚ್ಚೋ ಅದು.

(ii) ಎಲೆಕ್ಟ್ರಾನಿಕ್ ಟ್ರೈವೆಕ್ಟರ್ ಮಾಪಕಗಳನ್ನು ಅಳವಡಿಸಿರುವ ಸ್ಥಾಪನಗಳಿಗೆ ಮಂಜೂರಾದ ವಿದ್ಯುತ್ ಪ್ರಮಾಣ ಅಥವಾ ದಾಖಲಾದ ಗರಿಷ್ಠ ಡಿಮ್ಯಾಂಡ್ ಇವೆರಡರಲ್ಲಿ ಯಾವುದು ಹೆಚ್ಚೋ ಅದನ್ನು ಪರಿಗಣಿಸಬೇಕು.

ಆದಾಗ್ಯೂ, ಮಂಜೂರಾದ ವಿದ್ಯುತ್ ಹೊರೆಯನ್ನು ಮೀರಿದಾಗ ದಂಡ ಹಾಗೂ ಷರತ್ತಿನ ಇತರೆ ನಿಯಮಗಳು ಅನ್ವಯವಾಗುತ್ತವೆ.

೧೮. ಬಿಲ್ಲು ನೀಡಿದ ೧೫ ದಿನಗಳ ಒಳಗಾಗಿ ಬಿಲ್ಲಿನ ಮೊಬಲಗನ್ನು ಪಾವತಿ ಮಾಡತಕ್ಕದ್ದು. ಇಲ್ಲವಾದಲ್ಲಿ ಬಡ್ಡಿಯನ್ನು ವಿಧಿಸಲಾಗುವುದು.

೧೯. ಒಂದು ಸ್ಥಾಪನಕ್ಕೆ, ಒಂದೇ ವಿದ್ಯುತ್ ದರದಲ್ಲಿ, ಒಂದಕ್ಕಿಂತ ಹೆಚ್ಚು ಮಾಪಕಗಳನ್ನು ಅಳವಡಿಸಬಾರದು. ಒಂದೇ ಸ್ಥಾಪನದಲ್ಲಿ ಎರಡು ಅಥವಾ ಅದಕ್ಕಿಂತ ಹೆಚ್ಚು ಮಾಪಕಗಳಿದ್ದಲ್ಲಿ ಅವುಗಳನ್ನು ವಿಲೀನಗೊಳಿಸುವವರೆಗೂ ಅಂತಹ ಮಾಪಕಗಳಲ್ಲಿ ದಾಖಲಾದ ವಿದ್ಯುತ್ ಬಳಕೆಯ ಯೂನಿಟ್ಟುಗಳನ್ನು ಕೂಡಿ ಬಿಲ್ ಮಾಡತಕ್ಕದ್ದು.

೨೦. ಒಂದೇ ಕಟ್ಟಡದಲ್ಲಿ ಅನೇಕ ವಿದ್ಯುತ್ ಸಂಪರ್ಕಗಳಿದ್ದಲ್ಲಿ, ಎಲ್ಲಾ ವಿದ್ಯುತ್ ಮಾಪಕಗಳನ್ನು ಒಂದೇ ಸ್ಥಳದಲ್ಲಿ ಸುಲಭವಾಗಿ ಮಾಪನ ಮಾಡಬಹುದಾದ ನೆಲಮನೆ (ಗ್ರೌಂಡ್ ಫ್ಲೋರ್) ನಲ್ಲಿ ಅಳವಡಿಸತಕ್ಕದ್ದು.

೨೧. **ಮರು ಸಂಪರ್ಕ ಶುಲ್ಕ:** ವಿದ್ಯುತ್ ಸಂಪರ್ಕವನ್ನು ನಿಲ್ಲಿಸಿದ ಸ್ಥಾಪನಗಳಿಗೆ ಮರು ಸಂಪರ್ಕ ನೀಡಲು, ಮರು ಸಂಪರ್ಕ ಶುಲ್ಕವನ್ನು ಈ ಕೆಳಕಂಡಂತೆ ವಿಧಿಸಿ ಮಾಸಿಕ ಬಿಲ್‌ನಲ್ಲಿ ಸೇರಿಸಲಾಗುವುದು.

| | | |
|---|---|---|
| ಎ) | ಎಲ್.ಟಿ.–೧ ಮತ್ತು ಎಲ್.ಟಿ.–೨(ಎ) ದರಸೂಚಿಯ ಅಡಿಯಲ್ಲಿ ಬರುವ ಸಿಂಗಲ್ ಫೇಸ್ ಗೃಹ ಬಳಕೆ ಸ್ಥಾಪನಗಳು | ಪ್ರತಿ ಸ್ಥಾಪನಕ್ಕೆ ರೂ.೨೦/– |
| ಬಿ) | ಎಲ್.ಟಿ.–೨(ಎ) ದರಸೂಚಿಯ ಅಡಿಯಲ್ಲಿ ಒಳಪಡುವ ಮೂರು ಫೇಸ್ ಗೃಹ ಬಳಕೆ ದೀಪ ಸ್ಥಾಪನಗಳು ಹಾಗೂ ಒಂದು ಫೇಸ್ ವಾಣಿಜ್ಯ ಮತ್ತು ಪವರ್ ಸ್ಥಾಪನಗಳು | ಪ್ರತಿ ಸ್ಥಾಪನಕ್ಕೆ ರೂ.೫೦/– |
| ಸಿ) | ಎಲ್.ಟಿ.–೨(ಎ) ಸ್ಥಾಪನಗಳನ್ನು ಹೊರತುಪಡಿಸಿ, ಉಳಿದ ಮೂರು ಫೇಸಿನ ಎಲ್ಲಾ ಎಲ್.ಟಿ. ಸ್ಥಾಪನಗಳು | ಪ್ರತಿ ಸ್ಥಾಪನಕ್ಕೆ ರೂ.೧೦೦/– |
| ಡಿ) | ಎಲ್ಲಾ ಎಚ್.ಟಿ. ಮತ್ತು ಇ.ಎಚ್.ಟಿ. ಸ್ಥಾಪನಗಳು | ಪ್ರತಿ ಸ್ಥಾಪನಕ್ಕೆ ರೂ.೫೦೦/– |

೨೨. ರೂ.೧೦,೦೦೦/– ಮತ್ತು ಅದಕ್ಕಿಂತ ಕಡಿಮೆ ಮೊತ್ತದ ವಿದ್ಯುತ್ ಬಿಲ್ಲುಗಳ ಪಾವತಿಯನ್ನು ನಗದು, ಚೆಕ್ ಅಥವಾ ಡಿ.ಡಿ. ಮೂಲಕ ಪಾವತಿಸಬಹುದಾಗಿದೆ. ರೂ.೧೦,೦೦೦/– ಕ್ಕೂ ಮೇಲ್ಪಟ್ಟ ವಿದ್ಯುತ್ ಬಿಲ್ಲುಗಳ ಪಾವತಿಯನ್ನು ಚೆಕ್ ಅಥವಾ ಡಿ.ಡಿ. ಮೂಲಕವೇ ಪಾವತಿ ಮಾಡತಕ್ಕದ್ದು. ಇತರ ಲೆಕ್ಕ ವರ್ಗಗಳಿಗೆ ಸಂಬಂಧಿಸಿದಂತೆ ರೂ.೧೦,೦೦೦/– ವನ್ನೊಳಗೊಂಡಂತೆ ಪಾವತಿಗಳನ್ನು ನಗದು ಅಥವಾ ಡಿ.ಡಿ. ಮೂಲಕವಾಗಿಯೂ ಮತ್ತು ರೂ.೧೦,೦೦೦/– ಕ್ಕೂ ಮೇಲ್ಪಟ್ಟ ಮೊತ್ತದ ಪಾವತಿಗಳನ್ನು ಡಿ.ಡಿ. ಮೂಲಕ ಮಾತ್ರ ಪಾವತಿಸತಕ್ಕದ್ದು.

ಟಿಪ್ಪಣಿ: ಬಳಕೆದಾರರು, ಭಾರತೀಯ ರಿಸರ್ವ್ ಬ್ಯಾಂಕ್ ನಿಗದಿಪಡಿಸಿರುವ ಮಿತಿಗೆ ಒಳಪಟ್ಟು ಮಾಸಿಕ ವಿದ್ಯುತ್ ಬಿಲ್ಲಿನ ಪಾವತಿಯನ್ನು ಎಲೆಕ್ಟ್ರಾನಿಕ್ ಕ್ಲಿಯರಿಂಗ್ ಸಿಸ್ಟಮ್(ಇ.ಸಿ.ಎಸ್) / ಕ್ರೆಡಿಟ್ ಕಾರ್ಡ್ / ಆನ್‌ಲೈನ್ ಇ–ಪೇಮೆಂಟ್ (www.billjunction.com) ಈ ಸೌಲಭ್ಯಗಳಿರುವ ಕಡೆಗಳಲ್ಲಿ ಉಪಯೋಗಿಸಿಕೊಂಡು ಪಾವತಿ ಮಾಡಬಹುದಾಗಿರುತ್ತದೆ.

೨೩. ವಿದ್ಯುತ್ ದರಸೂಚಿ ಪಟ್ಟಿಯಲ್ಲಿ ಸೂಚಿತವಾಗದೆ ಇರುವ ಸ್ಥಾಪನಗಳಿಗೆ ಸಂಬಂಧಿಸಿದಂತೆ, ಲೈಸೆನ್ಸುದಾರರು ಅಂತಹ ಸ್ಥಾಪನಗಳ ಬಗ್ಗೆ ಕ.ವಿ.ನಿ. ಆಯೋಗದ ಗಮನಕ್ಕೆ ತಂದು ಸೂಕ್ತ ವಿದ್ಯುತ್ ದರಪ್ರವರ್ಗದ ಅಡಿಯಲ್ಲಿ ತರಲು ಅನುಮತಿ ನೀಡಲಾಗಿದೆ.

**೨೪. ಋತುಕಾಲಿಕ ಕೈಗಾರಿಕೆಗಳು :**

**ಎಲ್ಲಾ ಋತುಕಾಲಿಕ ಕೈಗಾರಿಕೆಗಳಿಗೆ ಅನ್ವಯಿಸುತ್ತದೆ.**

i. ಋತುಕಾಲಿಕ ರಿಯಾಯಿತಿಯನ್ನು ಪಡೆಯಲು ಇಚ್ಛಿಸುವ ಕೈಗಾರಿಕೆಗಳು, ತಮ್ಮ ಸ್ಥಾಪನಕ್ಕೆ ಎಲೆಕ್ಟ್ರಾನಿಕ್ ಟ್ರೈವೆಕ್ಟರ್ ಮಾಪಕವನ್ನು ಅಳವಡಿಸಿಕೊಂಡಿರತಕ್ಕದ್ದು.

ii. ಬಳಕೆದಾರರ ಕೋರಿಕೆಯ ಮೇರೆಗೆ "ಕೆಲಸ ನಿರ್ವಹಿಸುವ ಅವಧಿ" ಮತ್ತು "ಅಕಾಲಿಕ ಅವಧಿ" ತಿಂಗಳುಗಳನ್ನು ಆಯಾ ಪ್ರದೇಶದ ಲೈಸೆನ್ಸುದಾರರಾದ ಕಾರ್ಯ ಮತ್ತು ಪಾಲನೆ ವಿಭಾಗದ ಕಾರ್ಯ ನಿರ್ವಾಹಕ ಇಂಜಿನಿಯರ್ (ವಿ) ರವರು ಆದೇಶದ ಮೂಲಕ ಗೊತ್ತುಪಡಿಸುತ್ತಾರೆ ಹಾಗೂ ಇದು ಬದಲಾವಣೆಗೊಳ್ಳದ ಹೊರತು, ವರ್ಷದಿಂದ ವರ್ಷಕ್ಕೆ ಮುಂದುವರೆಯುತ್ತಿರುತ್ತದೆ. ಬಳಕೆದಾರರು ತಮ್ಮ ಕೆಲಸ ನಿರ್ವಹಿಸುವ ಅವಧಿಯನ್ನು ಬದಲಾಯಿಸಲು ಇಚ್ಛಿಸಿದಲ್ಲಿ ಸ್ಪಷ್ಟವಾಗಿ ಒಂದು ತಿಂಗಳ ಪೂರ್ವ ತಿಳುವಳಿಕೆ ಪತ್ರವನ್ನು ನೀಡತಕ್ಕದ್ದು.

iii. ಅಕಾಲಿಕ ಅವಧಿ ಎಂದು ಘೋಷಿಸಿರುವ ಯಾವುದೇ ತಿಂಗಳಿನಲ್ಲಿ ವಿದ್ಯುತ್ ಬಳಕೆಯು, ಹಿಂದೆ ಕಾರ್ಯ ನಿರ್ವಹಿಸಿದ ಅವಧಿಯಲ್ಲಿನ ಬಳಕೆಯ ಶೇ. ೨೫ಕ್ಕಿಂತ ಅಧಿಕವಾಗಿರಕೂಡದು.

iv. "ಕೆಲಸ ನಿರ್ವಹಿಸುವ ಅವಧಿ" ಮತ್ತು "ಅಕಾಲಿಕ ಅವಧಿ"ಯು ಪೂರ್ಣ ಕ್ಯಾಲೆಂಡರ್ ತಿಂಗಳುಗಳಾಗಿರುತ್ತವೆ. ಯಾವುದೇ ಅಕಾಲಿಕ ಅವಧಿಯ ತಿಂಗಳಿನಲ್ಲಿ ಬಳಸಲಾದ ವಿದ್ಯುತ್ ಪ್ರಮಾಣವು, ಅಂತಹ ತಿಂಗಳಿಗೆ ನಿಗದಿಪಡಿಸಲಾದ ವಿದ್ಯುತ್ ಪ್ರಮಾಣವನ್ನು ಮೀರಿದಲ್ಲಿ ಕೆಲಸ ನಿರ್ವಹಿಸುವ ಅವಧಿಯೆಂದೇ ಪರಿಗಣಿಸಿ ಬಿಲ್ ಮಾಡತಕ್ಕದ್ದು.

v. ಬಳಕೆದಾರ/ಗ್ರಾಹಕರು, ಪ್ರತಿ ಕ್ಯಾಲೆಂಡರ್ ವರ್ಷದಲ್ಲಿ ಎರಡು ಹಂತಗಳನ್ನು ಮೀರದೆ ಆರು ತಿಂಗಳುಗಳವರೆಗೆ ಅಕಾಲಿಕ ಅವಧಿಯ ಸೌಲಭ್ಯವನ್ನು ಪಡೆದುಕೊಳ್ಳಬಹುದಾಗಿದೆ. ಈ ಅಕಾಲಿಕ ಅವಧಿಯಲ್ಲಿ ವಿದ್ಯುಚ್ಛಕ್ತಿ ಸರಬರಾಜನ್ನು ಆಡಳಿತ ಕಚೇರಿಗೆ, ಸ್ಥಾವರ ಮತ್ತು ಯಂತ್ರಗಳ ದುರಸ್ತಿಗೆ ಉಪಯೋಗಿಸಕೊಳ್ಳಬಹುದಾಗಿದೆ.

೨೫. ವಿದ್ಯುತ್ ಸರಬರಾಜು ಪಡೆಯುತ್ತಿರುವ ಸ್ಥಾಪನವು ಧರ್ಮದತ್ತಿಯದೇ ಅಥವಾ ಇಲ್ಲವೇ ಎಂಬುದನ್ನು, ಆ ಬಳಕೆದಾರರು ವರಮಾನ ತೆರಿಗೆ ಇಲಾಖೆಯಿಂದ ಪಡೆದ ನಮೂನೆ–೧೨ಎ ದೃಢೀಕರಣ ಪತ್ರವನ್ನು ಸಲ್ಲಿಸುವುದರ ಮೇರೆಗೆ ಲೈಸೆನ್ಸುದಾರ ಸಂಸ್ಥೆಯು ನಿರ್ಧರಿಸುತ್ತದೆ.

೨೬. **ಸಮಯಾಧಾರಿತ (ToD) ವಿದ್ಯುತ್ ದರ**: ಆಯೋಗವು, ಹಿಂದಿನ ಜಕಾತಿ ಆದೇಶದಲ್ಲಿ ನಿರ್ಧರಿಸಿದಂತೆ, ಕಡ್ಡಾಯ ಸಮಯಾಧಾರಿತ (ToD) ಜಕಾತಿಯನ್ನು ಹೆಚ್.ಟಿ.–೨(ಎ) ಮತ್ತು ಹೆಚ್.ಟಿ.–೨(ಬಿ) ಗ್ರಾಹಕರಿಗೆ ಮತ್ತು ೫೦೦ ಕೆ.ವಿ.ಎ. ಮತ್ತು ಮೇಲ್ಪಟ್ಟು ಕಾಂಟ್ರಾಕ್ಟ್ ಡಿಮಾಂಡ್ ಹೊಂದಿರುವ ಹೆಚ್.ಟಿ.–೨(ಸಿ) ಗ್ರಾಹಕರಿಗೂ ಅನ್ವಯಿಸಲು ನಿರ್ಧರಿಸಿರುತ್ತದೆ. ಮುಂದುವರೆದು, ೫೦೦ ಕೆ.ವಿ.ಎ. ಗಿಂತ ಕಡಿಮೆ ಕಾಂಟ್ರಾಕ್ಟ್ ಡಿಮಾಂಡ್ ಹೊಂದಿರುವ ಹೆಚ್.ಟಿ.–೨(ಎ),ಹೆಚ್.ಟಿ.–೨(ಬಿ) ಮತ್ತು ಹೆಚ್.ಟಿ.–೨(ಸಿ) ಗ್ರಾಹಕರಿಗೆ ಸಮಯಾಧಾರಿತ (ToD) ಐಚ್ಛಿಕ ವಿದ್ಯುತ್ ದರಗಳು ಈ ಹಿಂದೆ ಇದ್ದಂತೆಯೇ ಮುಂದುವರೆಯುತ್ತದೆ. ಅಲ್ಲದೇ, ಹೆಚ್.ಟಿ.–೧ ಗ್ರಾಹಕರಿಗೆ ಸಮಯಾಧಾರಿತ (ToD) ಐಚ್ಛಿಕ ವಿದ್ಯುತ್ ದರಗಳು ಈ ಹಿಂದೆ ಇದ್ದಂತೆಯೇ ಮುಂದುವರೆಯುತ್ತದೆ. ಐಚ್ಛಿಕ ದರದ ವಿವರಗಳನ್ನು ಆಯಾ ಪ್ರವರ್ಗದ ಅಡಿಯಲ್ಲಿ ನೀಡಲಾಗಿದೆ.

೨೭. **ನಿಸ್ತೇಜ ಕೈಗಾರಿಕೆಗಳು:** ಕರ್ನಾಟಕ ಸರ್ಕಾರವು, ಹೊಸ ಕೈಗಾರಿಕಾ ನೀತಿ ನಿಯಮಗಳ ಅಡಿಯಲ್ಲಿ ತನ್ನ ಆದೇಶ ಸಂಖ್ಯೆ: ಸಿಐ ೧೬೭ ಎಸ್‌ಪಿಐ ೨೦೦೧, ದಿನಾಂಕ ೩೦.೦೬.೨೦೦೧ ರ ಮೂಲಕ ನಿಸ್ತೇಜ ಕೈಗಾರಿಕೆಗಳಿಗೆ ಪುನರುಜ್ಜೀವನ / ಪುನಶ್ಚೈತನ್ಯಗೊಳ್ಳಲು ಕೆಲವೊಂದು ರಿಯಾಯಿತಿಗಳನ್ನು ನೀಡಲಾಗಿತ್ತು. ಸರ್ಕಾರದ ನೀತಿ ನಿಯಮಗಳ ಪ್ರಕಾರ ಕವಿನಿ ಆಯೋಗವು ತನ್ನ ವಿದ್ಯುತ್ ದರ ಆದೇಶ ೨೦೦೨ ರಲ್ಲಿ ಈ ರಿಯಾಯಿತಿಯನ್ನು ಅನುಮೋದಿಸಿದ್ದು, ಇದನ್ನು ವಿದ್ಯುತ್ ದರ ಆದೇಶ ೨೦೦೩ರಲ್ಲೂ ಸಹ ಮುಂದುವರಿಸಲಾಯಿತು. ಅಲ್ಲದೇ, ಕರ್ನಾಟಕ ಸರ್ಕಾರವು ತನ್ನ ಆದೇಶ ಸಂಖ್ಯೆ: ಸಿ ೧೨ ಬಿಐಎಫ್ ೨೦೧೦, ದಿನಾಂಕ ೨೧.೧೦.೨೦೧೦ ರಲ್ಲಿ ಸದರಿ ನಿಸ್ತೇಜ ಕೈಗಾರಿಕೆಗಳಿಗೆ ಪುನರುಜ್ಜೀವನ / ಪುನಶ್ಚೈತನ್ಯಗೊಳ್ಳಲು ಕೆಲವೊಂದು ರಿಯಾಯಿತಿಗಳನ್ನು ಮುಂದುವರೆಸಿದ್ದು, ಸರ್ಕಾರದ ನೀತಿ ನಿಯಮಗಳ ಪ್ರಕಾರ ಕವಿನಿ ಆಯೋಗವು ತನ್ನ ವಿದ್ಯುತ್ ದರ ಆದೇಶಗಳಲ್ಲಿ ಈ ರಿಯಾಯಿತಿಯನ್ನು ಅನುಮೋದಿಸಿದ್ದು, ಇದನ್ನು ಹಾಲಿ ವಿದ್ಯುತ್ ದರ ಆದೇಶಗಳಲ್ಲಿ ಸಹ ಮುಂದುವರಿಸಲಾಯಿತು. ಲೈಸೆನ್ಸುದಾರರು, ಈ ರಿಯಾಯಿತಿಯನ್ನು ಪಡೆಯಲು ಆಯುಕ್ತರು ಕೈಗಾರಿಕಾ ಅಭಿವೃದ್ಧಿ ಮತ್ತು ನಿರ್ದೇಶಕರು ಕೈಗಾರಿಕೆ ಮತ್ತು ವಾಣಿಜ್ಯ ಕರ್ನಾಟಕ ಸರ್ಕಾರ ಇವರು ನೀಡುವ ಆದೇಶದ ಷರತ್ತಿಗೆ ಒಳಪಡಿಸಿ ಆಯೋಗವು ಸದರಿ ರಿಯಾಯಿತಿಯ ಸೌಲಭ್ಯವನ್ನು ಮುಂದುವರೆಸಲು ಅನುಮೋದಿಸಿದೆ.

೨೮. **ಪ್ರಾಮಾಣಿಕ/ ಮುಂಗಡ ಪಾವತಿಗಾಗಿ ಪ್ರೋತ್ಸಾಹ** :

i. ಇ.ಸಿ.ಎಸ್ ಮೂಲಕ ಪಾವತಿಸುವ ಎಲ್ಲಾ ಪ್ರಕರಣಗಳಲ್ಲಿ

ii. ಮಾಸಿಕ ರೂ.೧,೦೦,೦೦೦/– (ರೂಪಾಯಿ ಒಂದು ಲಕ್ಷ) ಗಳಿಗೂ ಹೆಚ್ಚಿನ ಮೊಬಲಗಿರುವ ಬಿಲ್ಲುಗಳನ್ನು ಗಡುವು ದಿನಾಂಕದ ೧೦ ದಿನಗಳ ಒಳಗೆ ಪಾವತಿಸಿದರೆ, ಹಾಗೂ

iii. ಮಾಸಿಕ ಬಿಲ್ಲಿನ ಬಾಬ್ತು ರೂ.೧೦೦೦/- ವನ್ನು ಮೀರಿದ ಮುಂಗಡ ಪಾವತಿ ಮಾಡಿದಾಗ

ಮೇಲಿನ ೩ ಪ್ರಕರಣಗಳಲ್ಲಿ ಪಾವತಿಸುವ ಬಿಲ್ಲಿನ ಮೊಬಲಗಿನ ಮೇಲೆ ಶೇ.೦.೨೫ ರಷ್ಟು ರಿಯಾಯಿತಿಯನ್ನು ಪ್ರೋತ್ಸಾಹ ಧನವೆಂದು ಮುಂದಿನ ತಿಂಗಳ ಬಿಲ್ಲಿನಲ್ಲಿ ಹೊಂದಾಣಿಕೆ ಮಾಡತಕ್ಕದ್ದು.

೨೯. ಯಾವುದೇ ವಿವಾದಗಳ ಸಂದರ್ಭಗಳಲ್ಲಿ ಸಂಬಂಧಿಸಿದಂತೆ ಈ ವಿದ್ಯುಚ್ಛಕ್ತಿ ದರ ಪುಸ್ತಕದಲ್ಲಿ ನೀಡಿರುವ ಭಾಗಗಳು, ಕರ್ನಾಟಕ ರಾಜ್ಯದಲ್ಲಿ ವಿದ್ಯುತ್ ಸರಬರಾಜಿಗಾಗಿ ವಿತರಣಾ ಲೈಸೆನ್ಸುದಾರರ ಷರತ್ತುಗಳು, ಹಾಗೂ ಕಾಲಕಾಲಕ್ಕೆ ತಿದ್ದುಪಡಿಗೊಳಪಡಬಹುದಾದ ಇದರ ನಿಯಮಗಳು ಮತ್ತು ವಿದ್ಯುಚ್ಛಕ್ತಿ ಕಾಯಿದೆ ೨೦೦೩ ರ ಅಡಿಯಲ್ಲಿ ಹೊರಡಿಸಿರುವ ನಿಯಮಾವಳಿಗಳನ್ನು ಅವಲಂಬಿಸಿರುತ್ತವೆ.

೩೦. **ಮಾಪಕಗಳ ಸ್ವಯಂ ಓದುವಿಕೆ:**

ಗ್ರಾಹಕರು ತಮ್ಮ ತಮ್ಮ ಸ್ಥಾಪನದ ಮಾಪಕ ವಾಚನವನ್ನು ತಾವೇ ಮಾಡಿಕೊಳ್ಳುವುದಕ್ಕೆ, ಹಾಗೂ ಅಂತಹ ಮಾಪಕ ವಾಚನವನ್ನು ಆಧರಿಸಿ ಲೈಸೆನ್ಸುದಾರರು ವಿದ್ಯುತ್ ಬಿಲ್ಲನ್ನು ವಿತರಿಸುವುದಕ್ಕೆ ಆಯೋಗವು ಅನುಮೋದಿಸಿದೆ. ಆದರೆ ಲೈಸೆನ್ಸುದಾರರು ಇಂತಹ ಪ್ರಕರಣಗಳಲ್ಲಿ ಕನಿಷ್ಠ ಆರು ತಿಂಗಳಿಗೊಮ್ಮೆ ಅಂತಹ ಪ್ರತಿ ಸ್ಥಾಪನದ ಮಾಪಕ ವಾಚನವನ್ನು ಮಾಡಿ, ದಾಖಲಾದ ವಿದ್ಯುತ್ ಬಳಕೆಯ ರೀಡಿಂಗಿನ ಪ್ರಮಾಣದ ಜೊತೆ ಸಮನ್ವಯ ತಾಳೆ ಮಾಡಿ, ಕಂಡುಬರಬಹುದಾದ ವ್ಯತ್ಯಾಸದ ಪ್ರಮಾಣಕ್ಕೆ ಬಿಲ್ಲು ತಯಾರಿಸಿ, ಸಂಬಂಧಿತ ಗ್ರಾಹಕರಿಗೆ ಪರಿಷ್ಕೃತ ಬಿಲ್ಲನ್ನು ಜಾರಿಗೊಳಿಸಿ ಸ್ಥಾಪನದ ಲೆಕ್ಕದಲ್ಲಿ ಸೇರಿಸತಕ್ಕದ್ದು. ಕರ್ನಾಟಕ ರಾಜ್ಯದಲ್ಲಿ ವಿದ್ಯುತ್ ಸರಬರಾಜಿಗಾಗಿ ವಿತರಣಾ ಲೈಸೆನ್ಸುದಾರರ ಷರತ್ತುಗಳು, ಇದರ ಪರಿಚ್ಛೇದ ೨೬.೦೧ರಲ್ಲಿ ನಿರ್ದಿಷ್ಟಪಡಿಸಿರುವ ಕ್ರಮಗಳ ಪ್ರಕಾರ, ಲೈಸೆನ್ಸುದಾರರು ಅನುಷ್ಠಾನಗೊಳಿಸತಕ್ಕದ್ದು.

:-:-:-:

# ವಿದ್ಯುಚ್ಛಕ್ತಿ ದರಗಳು – ೨೦೧೬

## ಭಾಗ – ೧

## ಹೈ ಟೆನ್‌ಷನ್ ವಿದ್ಯುತ್ ಸರಬರಾಜು

ಗುತ್ತಿಗೆ ಬೇಡಿಕೆಯು ೫೦ ಕಿ.ವಾ / ೬೭ಎಚ್.ಪಿ ಮತ್ತು ಅದಕ್ಕಿಂತ ಹೆಚ್ಚಾಗಿದ್ದಾಗ ನಿರ್ಧಾರಿತ ಅಧಿಕ ವೋಲ್ಟೇಜು ಅಥವಾ ವಿಶೇಷ ಅಧಿಕ ವೋಲ್ಟೇಜು ಪ್ರಮಾಣದಲ್ಲಿ ೧೧ ಕೆ.ವಿ (೨.೩/೪.೬ ಕೆವಿಯೂ ಸೇರಿದಂತೆ) ಮತ್ತು ಹೆಚ್ಚು ವೋಲ್ಟೇಜಿನ ಅಧಿಕ ಪ್ರಮಾಣದ ವಿದ್ಯುತ್ ಸರಬರಾಜಿಗೆ ಅನ್ವಯಿಸುತ್ತದೆ.

# ವಿದ್ಯುಚ್ಛಕ್ತಿ ದರಗಳು – ೨೦೧೬

## ಭಾಗ – ೧

## ಹೈಟೆನ್ಷನ್ ವಿದ್ಯುತ್ ಸರಬರಾಜು

**ಗುತ್ತಿಗೆ ಬೇಡಿಕೆಯು ೫೦ ಕಿ.ವಾ/೬೭ಎಚ್.ಪಿ ಮತ್ತು ಅದಕ್ಕಿಂತ ಹೆಚ್ಚಾಗಿದ್ದಾಗ ನಿರ್ಧಾರಿತ ಅಧಿಕ ವೋಲ್ಟೇಜು ಅಥವಾ ವಿಶೇಷ ಅಧಿಕ ವೋಲ್ಟೇಜು ಪ್ರಮಾಣದಲ್ಲಿ ೧೧ಕೆ.ವಿ (೨.೩/೪.೬ ಕೆವಿಯೂ ಸೇರಿದಂತೆ) ಮತ್ತು ಅದಕ್ಕಿಂತ ಹೆಚ್ಚು ವೋಲ್ಟೇಜಿನ ಸಗಟು ವಿದ್ಯುತ್ ಸರಬರಾಜಿಗೆ ಅನ್ವಯಿಸುತ್ತದೆ.**

**ಎಚ್.ಟಿ. ಸ್ಥಾಪನಗಳು ಹಾಗೂ ಅವುಗಳ ಬಿಲ್ಲಿಂಗ್‌ಗೆ ಅನ್ವಯಿಸುವ ಷರತ್ತುಗಳು**

೧. **ಬಿಲ್ಲಿಂಗ್ ಡಿಮ್ಯಾಂಡ್**:

ಎ. ನಿರ್ಬಂಧಗಳಿಲ್ಲದ ಅವಧಿಯಲ್ಲಿ, ತಿಂಗಳಲ್ಲಿ ದಾಖಲಾಗಿರುವ ಗರಿಷ್ಠ ಡಿಮ್ಯಾಂಡ್ ಅಥವಾ ಒಪ್ಪಂದ (ಗುತ್ತಿಗೆ) ಡಿಮ್ಯಾಂಡಿನ ಶೇಕಡ ೭೫(ಶೇಕಡ ಎಪ್ಪತ್ತೈದು), ಇವುಗಳಲ್ಲಿ ಯಾವುದು ಅಧಿಕವೋ ಅದು ಬಿಲ್ಲಿಂಗ್ ಡಿಮ್ಯಾಂಡ್ ಆಗಿರತಕ್ಕದ್ದು.

ಬಿ. ಲೈಸೆನ್ಸುದಾರರು, ಒಪ್ಪಂದದ ಡಿಮ್ಯಾಂಡ್ ಮೇಲೆ ಶೇಕಡ ೨೫ (ಶೇಕಡ ಇಪ್ಪತ್ತೈದು) ಅಥವಾ ಅದಕ್ಕಿಂತ ಕಡಿಮೆ ಡಿಮ್ಯಾಂಡ್ ಕಡಿತ ವಿಧಿಸಿದಾಗ ಮೇಲೆ (ಎ) ನಲ್ಲಿ ಹೇಳಿರುವ ಷರತ್ತುಗಳು ಅನ್ವಯಿಸುತ್ತವೆ.

ಸಿ. ಡಿಮ್ಯಾಂಡ್ ಕಡಿತ ಶೇಕಡ ೨೫ಕ್ಕಿಂತ (ಶೇಕಡ ಇಪ್ಪತ್ತೈದು) ಹೆಚ್ಚು ಇದ್ದಾಗ ದಾಖಲಾದ ಗರಿಷ್ಠ ಡಿಮ್ಯಾಂಡ್ ಅಥವಾ ನಿರ್ಬಂಧಿತ ಡಿಮ್ಯಾಂಡ್‌ನ ಶೇಕಡ ೭೫ (ಶೇಕಡ ಎಪ್ಪತ್ತೈದು) ಇವುಗಳಲ್ಲಿ ಯಾವುದು ಅಧಿಕವೋ ಅದು ಬಿಲ್ಲಿಂಗ್ ಡಿಮ್ಯಾಂಡ್ ಆಗಿರುತ್ತದೆ.

ಡಿ. ವಿದ್ಯುತ್ ಬಳಕೆಯ ನಿರ್ಬಂಧವನ್ನು ಹೇರಿರುವ ಸಮಯದ ಯಾವುದೇ ಅವಧಿಯಲ್ಲಾಗಲೀ, ದಾಖಲಾದ ವಾಸ್ತವಿಕ ಗರಿಷ್ಠ ಬೇಡಿಕೆಯು ಒಪ್ಪಂದದ (ಗುತ್ತಿಗೆ) ಬೇಡಿಕೆಯನ್ನು ಮೀರಿದರೆ ಅಥವಾ ಬಳಕೆಯ ಹಕ್ಕಿನ ಬೇಡಿಕೆಯನ್ನು ಅಥವಾ ಪಡೆದ ಐಚ್ಛಿಕ ಬೇಡಿಕೆಯನ್ನು ಮೀರಿದರೆ, ವಿದ್ಯುಚ್ಛಕ್ತಿ ಕಾಯಿದೆ ೨೦೦೩ರ ಪರಿಚ್ಛೇದ ೧೨೬(೬) ರ ಪ್ರಕಾರ, ಬಳಕೆದಾರರು ಅಂತಹ ಹೆಚ್ಚಿನ ಬಳಕೆಯ ಬೇಡಿಕೆಗೆ (ಡಿಮ್ಯಾಂಡ್‌ಗೆ) ಪ್ರತಿ ಕೆ.ವಿ.ಎ.ಗೆ/ಪ್ರತಿ ತಿಂಗಳಿಗೆ <u>ಸಾಮಾನ್ಯ ದರದ **ಎರಡು** ಪಟ್ಟು ಹೆಚ್ಚು ಶುಲ್ಕವನ್ನು</u> ವ್ಯತ್ಯಯಿತ (ಡಿಟರೆಂಟ್) ಶುಲ್ಕವೆಂದು ಪಾವತಿಸಬೇಕಾಗುವುದು. <u>ಟೈಂ ಆಫ್ ಡೇ</u> ಮೀಟರನ್ನು ಅಳವಡಿಸಿ ಅದು ಕಾರ್ಯಾರಂಭಗೊಂಡಿದ್ದಲ್ಲಿ, ಲೈಸೆನ್ಸುದಾರರು ಗರಿಷ್ಠ ಬೇಡಿಕೆ ಹಾಗೂ ಕನಿಷ್ಠ ಬೇಡಿಕೆಯ ಅವಧಿಯನ್ನು ಘೋಷಿಸಿದ್ದರೆ, ಕನಿಷ್ಠ ಬೇಡಿಕೆಯ ಅವಧಿಯಲ್ಲಿ ಒಪ್ಪಂದ ಬೇಡಿಕೆಯ ೧.೨ ರಷ್ಟು ಅಧಿಕ ವಿದ್ಯುತ್ ಬಳಕೆಗೆ ಯಾವುದೇ ದಂಡವನ್ನು ವಿಧಿಸಲಾಗುವುದಿಲ್ಲ. ಗರಿಷ್ಠ ಬೇಡಿಕೆಯ ಅವಧಿಯಲ್ಲಿ ಬಳಸಿದ ಅಧಿಕ ವಿದ್ಯುತ್ತಿಗೆ ಹಾಗೂ ಕನಿಷ್ಠ ಬೇಡಿಕೆಯ ಅವಧಿಯಲ್ಲಿ ಒಪ್ಪಂದ ಬೇಡಿಕೆಯ ೧.೨ ಕ್ಕಿಂತ ಅಧಿಕ ಪ್ರಮಾಣದ ವಿದ್ಯುತ್ ಬಳಕೆಗೆ ಸಾಮಾನ್ಯ ದರದ <u>**ಎರಡು** ಪಟ್ಟು ಶುಲ್ಕವನ್ನು</u> ದಂಡವೆಂದು ವಿಧಿಸಲಾಗುವುದು.

ಇ. ವಿದ್ಯುತ್ ಸಂಪರ್ಕ ತೆಗೆದಿರುವ (ಡಿಸ್‌ಕನೆಕ್ಷನ್) ಅವಧಿಯಲ್ಲಿ, ಒಪ್ಪಂದಿತ ಬೇಡಿಕೆಯ (ಕಾಂಟ್ರಾಕ್ಟ್ ಡಿಮ್ಯಾಂಡ್) ಶೇಕಡ ೭೫ ಅಥವಾ ಸ್ಥಾಪನವು ವಿದ್ಯುತ್ ಸರಬರಾಜನ್ನು ಪಡೆಯುತ್ತಿದ್ದ ಸಂದರ್ಭದಲ್ಲಿನ ವಿದ್ಯುತ್ ಬಳಕೆ ಹಕ್ಕಿನ ಡಿಮ್ಯಾಂಡ್ (ಡಿಮ್ಯಾಂಡ್ ಎನ್‌ಟೈಟಲ್‌ಮೆಂಟ್) ನ ಶೇಕಡ ೭೫, ಇವುಗಳಲ್ಲಿ ಯಾವುದು ಕಡಿಮೆಯೋ ಅದು ಬಿಲ್ಲಿಂಗ್ ಡಿಮ್ಯಾಂಡ್ ಆಗಿರುತ್ತದೆ. ಸ್ಥಾಪನಕ್ಕೆ ಬಿಲ್ಲಿಂಗ್ ತಿಂಗಳಿನ ಪೂರ್ಣ ಅವಧಿಗೆ ವಿದ್ಯುತ್ ಸಂಪರ್ಕವನ್ನು ತೆಗೆದಿದ್ದರೆ ಮಾತ್ರ ಈ ಉಪಬಂಧವು ಅನ್ವಯವಾಗುತ್ತದೆ.

ಎಫ್. ವಿದ್ಯುತ್ ಬಳಕೆಯ ನಿರ್ಬಂಧ ಇದ್ದ ಅವಧಿಯಲ್ಲಿ, ಬಳಕೆದಾರರು ತಮ್ಮ ಬಳಕೆಯ ಹಕ್ಕಿನ ಬೇಡಿಕೆಯನ್ನು (ಡಿಮ್ಯಾಂಡ್ ಎನ್‌ಟೈಟಲ್‌ಮೆಂಟ್) ಕಡಿಮೆ ಮಾಡಿಸಿಕೊಳ್ಳಬಹುದು. ಆದರೆ ಅದು ವಿದ್ಯುತ್ ಬಳಕೆಯ ಶೇಕಡವಾರಿಗಿಂತ ಕಡಿಮೆ ಇರಬಾರದು (ಉದಾ: ವಿದ್ಯುತ್ ಹಕ್ಕಿನ ಬಳಕೆಯು ಶೇ. ೪೦ ಮತ್ತು ಡಿಮ್ಯಾಂಡ್ ಹಕ್ಕು ಶೇ. ೮೦ ಇದ್ದರೆ, ಬಳಕೆ ಹಕ್ಕಿನ ಡಿಮ್ಯಾಂಡ್‌ನ ಪುನರ್ ನಿಗದಿಯು ಒಪ್ಪಂದಿತ ಬೇಡಿಕೆಯ ಶೇಕಡ ೪೦ ಕ್ಕಿಂತ ಕಡಿಮೆ ಇರಬಾರದು). ಬಳಕೆದಾರರು, ತಿಂಗಳ ದಿನಾಂಕ ೧೫ ಮತ್ತು ಅದಕ್ಕೂ ಹಿಂದೆ ಕೋರಿಕೆಯನ್ನು ಸಲ್ಲಿಸಿದ್ದರೆ ಕಡಿಮೆಗೊಳಿಸಿದ ವಿದ್ಯುತ್ ಬಳಕೆ ಹಕ್ಕನ್ನು (ಡಿಮ್ಯಾಂಡ್ ಎನ್‌ಟೈಟಲ್‌ಮೆಂಟ್) ಅದೇ ತಿಂಗಳ ಮಾಪಕ ಓದುವ ದಿನಾಂಕದಿಂದ ಜಾರಿಗೆ ಬರುವಂತೆ ನೀಡಲಾಗುತ್ತದೆ. ಕೋರಿಕೆಯ ದಿನಾಂಕ ೧೬ ಮತ್ತು ಅನಂತರ ಸಲ್ಲಿಸಿದ್ದರೆ ಕಡಿಮೆ ಡಿಮ್ಯಾಂಡ್ ಎನ್‌ಟೈಟಲ್‌ಮೆಂಟ್ ಸೌಲಭ್ಯವನ್ನು ಮುಂದಿನ ತಿಂಗಳ ಮಾಪಕ ಓದುವ ದಿನಾಂಕದಿಂದ ಜಾರಿಗೆ ಬರುವಂತೆ ನೀಡಲಾಗುವುದು. ಬಳಕೆದಾರರು ಕೋರಿಕೆಯನ್ನು ರೂ.೧೦೦/– ಶುಲ್ಕದೊಡನೆ ಸಂಬಂಧಿಸಿದ ಉಪವಿಭಾಗದಲ್ಲಿ ನೋಂದಾಯಿಸಬೇಕು.

i. ಅಂತಹ ಸಂದರ್ಭಗಳಲ್ಲಿ "ಬಿಲ್ಲಿಂಗ್ ಡಿಮ್ಯಾಂಡ್", "ಪರಿಷ್ಕತ (ಆಯ್ಕೆ ಮಾಡಿಕೊಂಡ) ಬಳಕೆ ಹಕ್ಕಿನ ಡಿಮ್ಯಾಂಡ್" ಅಥವಾ "ದಾಖಲು ಮಾಡಿರುವ ಡಿಮ್ಯಾಂಡ್", ಇವುಗಳಲ್ಲಿ ಯಾವುದು ಅಧಿಕವೋ ಅದು ಆಗಿರತಕ್ಕದ್ದು. ಬಳಕೆ ಹಕ್ಕಿನ ಡಿಮ್ಯಾಂಡಿನ ಇಳಿತಾಯದ ಇಂತಹ ಆಯ್ಕೆಯನ್ನು ನಿರ್ದಿಷ್ಟ ವಿದ್ಯುತ್ ಬಳಕೆ ಕಡಿತ ಅವಧಿಯ ಸಂಪೂರ್ಣ ಕಾಲಕ್ಕೆ ಒಂದು ಸಲ ಮಾತ್ರ ಅನುಮತಿಸಲಾಗುವುದು. ಆದರೂ, ಡಿಮ್ಯಾಂಡ್ ಕಡಿತದ ಅಧಿಸೂಚನೆಯ ಮೇರೆಗೆ ಅನುಮತಿಸಬಹುದಾದ ಮಟ್ಟದವರೆಗೆ ಹೆಚ್ಚಿನ ಬಳಕೆ ಹಕ್ಕಿನ ಡಿಮ್ಯಾಂಡನ್ನು ಬಳಕೆದಾರರು ಆಯ್ಕೆ ಮಾಡಿಕೊಳ್ಳಬಹುದು ಮತ್ತು ಇದರ ಪ್ರಯೋಜನವನ್ನು ಮುಂದಿನ ಮಾಪಕ ಓದುವ ದಿನಾಂಕದಿಂದ ಕೊಡಲಾಗುವುದು. ನಿಯಮ (ಎಫ್) ಪ್ರಕಾರ, ಕಡಿಮೆಗೊಳಿಸಲ್ಪಟ್ಟ ಬೇಡಿಕೆಯನ್ನು ಬಳಕೆದಾರರು ಡಿಮ್ಯಾಂಡ್ ಹೆಚ್ಚಳಕ್ಕೆ ಆಯ್ಕೆ ಮಾಡಿಕೊಂಡ ನಂತರ ಮರು ಪರಿಷ್ಕರಣೆಗೆ ಆ ವಿದ್ಯುತ್ ಬಳಕೆ ಕಡಿತದ ಅವಧಿಯಲ್ಲಿ ಅವಕಾಶವಿರುವುದಿಲ್ಲ.

ii. ವಿದ್ಯುತ್ ಬಳಕೆ ಕಡಿತವನ್ನು ಪರಿಷ್ಕರಿಸಿದಾಗ ಇಳಿತಾಯ ಬಳಕೆ ಹಕ್ಕಿನ ಡಿಮ್ಯಾಂಡ್ (ರೆಡ್ಯೂಸ್ಡ್ ಎಂಟೈಟಲ್‌ಮೆಂಟ್) ತನಗೆ ತಾನೇ ಕೊನೆಗೊಳ್ಳುತ್ತದೆ. ಆದರೂ, ವಿದ್ಯುತ್ ಬಳಕೆ ಕಡಿತವನ್ನು (ಎನರ್ಜಿ ಕಟ್) ಪರಿಷ್ಕರಿಸಿದ ಸಂದರ್ಭದಲ್ಲಿ, ಹಿಂದಿನ ಪ್ಯಾರಾಗಳಲ್ಲಿ ಸೂಚಿಸಿರುವ ಪ್ರಕಾರ ಇಳಿತಾಯ ಮತ್ತು ಹೆಚ್ಚಳ ಮಾಡಿಕೊಳ್ಳುವ ಸೌಲಭ್ಯವನ್ನು ಬಳಕೆದಾರರು ಮತ್ತೆ ಹೊಸದಾಗಿ ಉಪಯೋಗಿಸಿಕೊಳ್ಳಬಹುದು.

ಜಿ. ಬಿಲ್ ಮಾಡುವ ಉದ್ದೇಶಕ್ಕಾಗಿ, ೦.೫ಕೆ.ವಿ.ಎ. ಮತ್ತು ಅದಕ್ಕೂ ಹೆಚ್ಚಿನ ಬಿಲ್ಲಿಂಗ್ ಡಿಮ್ಯಾಂಡನ್ನು ನಂತರದ ಕೆ.ವಿ.ಎ. ಗೆ ಪೂರ್ಣಾಂಕಗೊಳಿಸಲಾಗುವುದು ಹಾಗೂ ೦.೫ ಕೆ.ವಿ.ಎ.ಗಿಂತ ಕಡಿಮೆ ಡಿಮ್ಯಾಂಡನ್ನು ಗಣನೆಗೆ ತೆಗೆದುಕೊಳ್ಳಬಾರದು.

೨. ವಿದ್ಯುತ್ ಕಾರಕಾಂಶ **(ಪವರ್ ಫ್ಯಾಕ್ಟರ್) (ಪಿ.ಎಫ್) :**

ವಿದ್ಯುತ್ ಕಾರಕಾಂಶ (ಪವರ್ ಫ್ಯಾಕ್ಟರ್) ಕರೆಕ್ಷನ್ ಉಪಕರಣದ ಸಾಮರ್ಥ್ಯವನ್ನು ನಿರ್ಧರಿಸುವುದು ಮತ್ತು ಸರಾಸರಿ ಪವರ್ ಫ್ಯಾಕ್ಟರ್ ೦.೯೦ಕ್ಕೆ ಕಡಿಮೆ ಇರದಂತೆ ನೋಡಿಕೊಳ್ಳುವುದು ಎಚ್.ಟಿ. ಬಳಕೆದಾರರ ಹೊಣೆಯಾಗಿರುತ್ತದೆ.

i) ನಿರ್ದಿಷ್ಟಗೊಳಿಸಿರುವ ವಿದ್ಯುತ್ ಕಾರಕಾಂಶದ ಪ್ರಮಾಣ ೦.೯೦. ಪವರ್ ಫ್ಯಾಕ್ಟರ್ ನ ಪ್ರಮಾಣ ೦.೯೦ ಕ್ಕಿಂತ ಕಡಿಮೆಯಾದಲ್ಲಿ, ೦.೯೦ ಲ್ಯಾಗ್‌ಗಿಂತ ಕಡಿಮೆಯ ಪ್ರತಿ ೦.೦೧ ಪಿ.ಎಫ್. ಗೆ ಬಳಕೆಯ ಪ್ರತಿ ಯೂನಿಟ್ಟಿಗೆ ೩ ಪೈಸೆ ಮೇಲುಕರವನ್ನು (ಸರ್‌ಚಾರ್ಜ್) ವಿಧಿಸಲಾಗುತ್ತದೆ.

ii) ವಿದ್ಯುತ್ ಕಾರಕಾಂಶವನ್ನು ಕೆ.ಡಬ್ಲ್ಯೂ.ಎಚ್./ಕೆ.ವಿ.ಎ.ಎಚ್. ಅನುಪಾತದಲ್ಲಿ ಲೆಕ್ಕ ಮಾಡಿದಾಗ, ಅದನ್ನು ಮೂರು ದಶಾಂಶಗಳವರೆಗೆ ನಿರ್ಧರಿಸಲಾಗುವುದು (ದಶಾಂಶದ ಮುಂದಿನ ಅಂಕಿಗಳನ್ನು ಉಪೇಕ್ಷಿಸಿ) ಮತ್ತು ಅದನ್ನು ಈ ಕೆಳಗೆ ತೋರಿಸಿರುವಂತೆ ಹತ್ತಿರದ ಎರಡನೇ ದಶಾಂಶಕ್ಕೆ ಪೂರ್ಣಾಂಕಗೊಳಿಸಲಾಗುವುದು.

ಎ). ೦.೮೯೪ನ್ನು ೦.೮೯ ಎಂದು ಪೂರ್ಣಾಂಕಗೊಳಿಸಬೇಕು.

ಬಿ). ೦.೮೯೫ನ್ನು ೦.೯೦ ಎಂದು ಪೂರ್ಣಾಂಕಗೊಳಿಸಬೇಕು.

ಎಲೆಕ್ಟ್ರಾನಿಕ್ ಟ್ರೈವೆಕ್ಟರ್ ಮೀಟರುಗಳ ಸ್ಥಾಪನಗಳಲ್ಲಿ, ಬಿಲ್ ಮಾಡುವ ಉದ್ದೇಶಕ್ಕೆ, ಬಿಲ್ ಅವಧಿಯಲ್ಲಿ ದಾಖಲಾದ ಸರಾಸರಿ ವಿದ್ಯುತ್ ಕಾರಕಾಂಶವನ್ನು ಪರಿಗಣಿಸಲಾಗುವುದು. ಟ್ರೈವೆಕ್ಟರ್ ಮೀಟರನ್ನು ಅಳವಡಿಸದೆ ಇರುವ ಸ್ಥಾಪನಗಳಲ್ಲಿ, ಕೆ.ಡಬ್ಲ್ಯೂ.ಎಚ್./ಕೆ.ವಿ.ಎ.ಎಚ್. ಅನುಪಾತದಲ್ಲಿ ಬಿಲ್ ಮಾಡಲಾಗುವುದು.

೩. **ಹೈ ವೋಲ್ಟೇಜ್ ಸರಬರಾಜಿಗೆ ರಿಯಾಯಿತಿ:**

೧೩.೨ಕೆ.ವಿ.ಗಿಂತ ಹೆಚ್ಚಿನ ವೋಲ್ಟೇಜಿನಲ್ಲಿ ವಿದ್ಯುತ್ ಸರಬರಾಜನ್ನು ಪಡೆದುಕೊಳ್ಳುವ ಬಳಕೆದಾರರು ಈ ಕೆಳಗಿನಂತೆ ರಿಯಾಯಿತಿ ಪಡೆಯಲು ಅರ್ಹರಿರುತ್ತಾರೆ.

| **ಸರಬರಾಜು ವೋಲ್ಟೇಜ್** | **ರಿಯಾಯಿತಿ** |
|---|---|
| ಎ) ೩೩/೬೬ ಕೆ.ವಿ. | ಬಳಸಿದ ಪ್ರತಿ ಯೂನಿಟ್ಟಿಗೆ **ಎರಡು ಪೈಸೆ** |
| ಬಿ) ೧೧೦ ಕೆ.ವಿ. | ಬಳಸಿದ ಪ್ರತಿ ಯೂನಿಟ್ಟಿಗೆ **ಮೂರು ಪೈಸೆ** |
| ಸಿ) ೨೨೦ ಕೆ.ವಿ. | ಬಳಸಿದ ಪ್ರತಿ ಯೂನಿಟ್ಟಿಗೆ **ಐದು ಪೈಸೆ** |

ಈ ರಿಯಾಯಿತಿಯು ಮೇಲೆ ತಿಳಿಸಿರುವ ಎಲ್ಲಾ ವೋಲ್ಟೇಜು ಪ್ರವರ್ಗಗಳಿಗೂ ಹಾಗೂ ಹಾಲಿ ಇರುವ ಅಂತಹ ಸ್ಥಾಪನಗಳಿಗೂ ಮತ್ತು ೧೩.೨ ಕೆ.ವಿ. ಮತ್ತು ಅದಕ್ಕೂ ಕಡಿಮೆಯಿಂದ ೩೩ ಕೆ.ವಿ ಹಾಗೂ ಅದಕ್ಕೂ ಹೆಚ್ಚಿನದಕ್ಕೆ ಪರಿವರ್ತನೆಗೊಂಡ ಸ್ಥಾಪನಗಳಿಗೆ, ೩೩/೬೬ ಕೆ.ವಿ. ಯಿಂದ ೧೧೦/೨೨೦ ಕೆ.ವಿಗೆ ಪರಿವರ್ತನೆಗೊಂಡ ಸ್ಥಾಪನಗಳಿಗೂ, ಪರಿವರ್ತನೆಗೊಂಡ ದಿನಾಂಕ/ಸರ್ವೀಸ್ ನೀಡಿದ ದಿನಾಂಕ/ ಈ ವಿದ್ಯುತ್ ದರ ಪ್ರಕಟಣೆಯ ನಂತರದ ಮಾಪಕ ಓದುವ ದಿನಾಂಕದಿಂದ, ಪ್ರಕರಣಕ್ಕನುಗುಣವಾಗಿ ಲಭ್ಯವಾಗುವುದು. ಮೇಲಿನ ರಿಯಾಯಿತಿಯು, ಬಳಸಿದ ಸಾಮಾನ್ಯ ಬಳಕೆಗೆ ಹಾಗೂ ಸಮಯಾಧಾರಿತ ವಿದ್ಯುತ್ ದರದ ಅಡಿಯಲ್ಲಿ ಬಳಸಿದ ವಿದ್ಯುತ್ತಿಗೆ ಮಾತ್ರ ಅನ್ವಯವಾಗುತ್ತದೆ ಮತ್ತು ಇತರೆ ಯಾವುದೇ ಹಂಚಿಕೆ ಮತ್ತು ಬಳಕೆಯ ವಿದ್ಯುತ್ತಿಗೆ ಅಂದರೆ,

i) ಸಾಗಣೆ (ವೀಲ್) ಮಾಡಿದ ವಿದ್ಯುತ್

ii) ಸಾಮಾನ್ಯ ಹಕ್ಕಿನ ಬಳಕೆಯನ್ನು ಮೀರಿ ವಿಶೇಷವಾಗಿ ಕೊಡಲ್ಪಡುವ ವಿದ್ಯುತ್ತನ್ನೂ ಒಳಗೊಂಡು ಯಾವುದೇ ವಿದ್ಯುತ್ ಬಳಕೆಗೆ

iii) ವಿಶೇಷ ಯೋಜನೆಯ ಅಡಿಯಲ್ಲಿ ಪಡೆಯುವ ವಿದ್ಯುತ್ತಿಗೆ ಅನ್ವಯವಾಗುವುದಿಲ್ಲ.

**ರೈಲ್ವೇ ಟ್ರಾಕ್ಷನ್‌ಗೆ ಮೇಲಿನ ರಿಯಾಯಿತಿ ಅನ್ವಯವಾಗುವುದಿಲ್ಲ.**

೪. ಮುಖ್ಯ ಎಚ್.ಟಿ.ಸರಬರಾಜು ಮಾರ್ಗದಿಂದ ಸಗಟು ವಿದ್ಯುತ್ ಸರಬರಾಜು ಸೌಲಭ್ಯವನ್ನು ಹೊಂದಿರುವ ನಿವಾಸಿ ವಸತಿ ಗೃಹಗಳು ಹಾಗೂ ಕಾಲೊನಿಗಳು ಬಳಸಿದ ವಿದ್ಯುತ್ತನ್ನು ಎಚ್.ಟಿ.–೪ ದರದಲ್ಲಿ ಏಕ ಬಿಂದುವಿನಲ್ಲಿ ಬಿಲ್ ಮಾಡಲಾಗುವುದು. ಮುಖ್ಯ ಎಚ್.ಟಿ. ಮೀಟರಿನಲ್ಲಿ ದಾಖಲಾದ ಡಿಮ್ಯಾಂಡ್‌ಗೆ ಯಾವುದೇ ರಿಯಾಯಿತಿಯನ್ನು ನೀಡಲಾಗುವುದಿಲ್ಲ.

೫. ಸ್ವೀಕರಿಸಿದ ವಿದ್ಯುತ್ ಸರಬರಾಜನ್ನು, ತಮ್ಮ ತಮ್ಮ ಆವರಣದಲ್ಲಿನ ಕಚೇರಿ, ಉಗ್ರಾಣ, ಉಪಹಾರ ಗೃಹ, ಆವರಣದ ದೀಪ, ನೀರು ಸರಬರಾಜು ಮತ್ತು ಜಾಹಿರಾತಿನಂತಹ ಉದ್ದೇಶಗಳಿಗೆ ಬಳಸಿಕೊಳ್ಳಬಹುದಾಗಿದೆ.

೬. ವಿದ್ಯುತ್ತನ್ನು ತಮ್ಮ ಆವರಣದ ಒಳಗಿನ ನಿರ್ಮಾಣ, ಮಾರ್ಪಾಡು ಹಾಗೂ ವಿಸ್ತರಣೆಯಂತಹ ಉದ್ದೇಶಗಳಿಗೂ ಬಳಸಿಕೊಳ್ಳಬಹುದಾಗಿದೆ.

೭. ಎಚ್.ಟಿ.–೪ರ ಅಡಿಯಲ್ಲಿ ಬಳಸುವ ವಿದ್ಯುತ್ತನ್ನು ಕಾಲೊನಿಯ ಆವರಣದ ಒಳಗೆ ವಾಣಿಜ್ಯ ಹಾಗೂ ಉಪಹಾರ ಗೃಹ, ಕ್ಲಬ್, ಅಂಗಡಿ, ಸಭಾಂಗಣದಂತಹ ಇತರೆ ಉದ್ದೇಶಗಳಿಗೂ ಸಹ ಬಳಸಿಕೊಳ್ಳಬಹುದು. ಅಂತಹ ವಿದ್ಯುತ್ ಹೊರೆಯು ಒಪ್ಪಂದದ ಡಿಮ್ಯಾಂಡಿನ ಶೇ. ೧೦ ಕ್ಕಿಂತ ಕಡಿಮೆ ಇರಬೇಕು.

೮. ಎಚ್.ಟಿ.–೪ರ ಅಡಿಯಲ್ಲಿ ವಿದ್ಯುತ್ತನ್ನು ಪಡೆಯುವ ನಿವಾಸಿ ವಸತಿ ಗೃಹಗಳು, ಆ ವಿದ್ಯುತ್ತನ್ನು ವಾಣಿಜ್ಯ ಹಾಗೂ ಅಂಗಡಿ, ಹೋಟೆಲ್‌ಗಳಂತಹ ಇತರೆ ಉದ್ದೇಶಗಳಿಗೆ ಬಳಸಿದರೆ, ಹಾಗೆ ಬಳಸಿದ ವಿದ್ಯುತ್ತನ್ನು ಮುಖ್ಯ ಎಚ್.ಟಿ. ಸರಬರಾಜಿನ ಬಿಲ್ಲಿನಲ್ಲಿ ಕಳೆದು (ಕೇವಲ ವಿದ್ಯುತ್ ಬಳಕೆ ಶುಲ್ಕ) ಸೂಕ್ತ ವಿದ್ಯುತ್ ದರದ ಅಡಿಯಲ್ಲಿ ಬಿಲ್ ಮಾಡಲಾಗುವುದು. ಮುಖ್ಯ ಎಚ್.ಟಿ. ಮೀಟರಿನಲ್ಲಿ ದಾಖಲಾದ ಡಿಮ್ಯಾಂಡಿಗೆ ಯಾವುದೇ ರಿಯಾಯಿತಿಯನ್ನು ನೀಡಲಾಗುವುದಿಲ್ಲ. ಸಮಾನ ರೀತಿಯ ಕ್ಷೇತ್ರಗಳ ವಿದ್ಯುತ್ ಬಳಕೆಯನ್ನು, ಪ್ರಧಾನ ಬಳಕೆದಾರರ ಪ್ರವರ್ಗವನ್ನು ಅವಲಂಬಿಸಿ ಬಿಲ್ ಮಾಡಲಾಗುವುದು.

೯. **ಋತುಕಾಲಿಕ ಕೈಗಾರಿಕೆಗಳು** :

ಎ. ಋತುಕಾಲಿಕ ಕೈಗಾರಿಕೆ ಸೌಲಭ್ಯವನ್ನು ಹೊಂದಲು ಇಚ್ಛಿಸುವ ಕೈಗಾರಿಕೆಗಳು, ವಿದ್ಯುಚ್ಛಕ್ತಿ ದರಗಳ ಸಾಮಾನ್ಯ ಷರತ್ತುಗಳು ಹಾಗೂ ನಿಬಂಧನೆಗಳಲ್ಲಿನ (ಎಚ್.ಟಿ. ಹಾಗೂ ಎಲ್.ಟಿ ಎರಡಕ್ಕೂ ಅನ್ವಯಿಸುತ್ತದೆ) ಪ್ಯಾರಾ ಸಂಖ್ಯೆ ೨೪ ರ ನಿಯಮಗಳಿಗೆ ಬದ್ಧರಾಗಿರತಕ್ಕದ್ದು.

ಬಿ. ಋತುಕಾಲಿಕ ರಿಯಾಯಿತಿಯನ್ನು ಪಡೆಯಲು ಇಚ್ಛಿಸುವ ಕೈಗಾರಿಕೆಗಳು, ತಮ್ಮ ಸ್ಥಾಪನಕ್ಕೆ ಎಲೆಕ್ಟ್ರಾನಿಕ್ ಟ್ರೈವೆಕ್ಟರ್ ಮೀಟರನ್ನು ಅಳವಡಿಸಿಕೊಂಡಿರತಕ್ಕದ್ದು.

ಸಿ. ಋತುಕಾಲಿಕ ಅವಧಿಯ ತಿಂಗಳಲ್ಲಿ, ಆ ತಿಂಗಳಲ್ಲಿ ದಾಖಲಾಗಿರುವ ಗರಿಷ್ಠ ಬೇಡಿಕೆ ಅಥವಾ ಗುತ್ತಿಗೆ ಡಿಮ್ಯಾಂಡಿನ ಶೇ.೭೫, ಇವುಗಳಲ್ಲಿ ಯಾವುದು ಅಧಿಕವೋ ಅದರ ಮೇಲೆ ಡಿಮ್ಯಾಂಡ್ ಶುಲ್ಕ ಹಾಗೂ ವಿದ್ಯುತ್ ಬಳಕೆ ಶುಲ್ಕವು ಮಾಸಿಕ ಶುಲ್ಕವಾಗಿರುತ್ತದೆ.

ಡಿ. ಅಕಾಲಿಕ ಅವಧಿಯ ತಿಂಗಳಲ್ಲಿ, ಆ ತಿಂಗಳಲ್ಲಿ ದಾಖಲಾಗಿರುವ ಗರಿಷ್ಠ ಬೇಡಿಕೆ ಅಥವಾ ಗುತ್ತಿಗೆ ಡಿಮ್ಯಾಂಡಿನ ಶೇ.೫೦, ಇವುಗಳಲ್ಲಿ ಯಾವುದು ಅಧಿಕವೋ ಅದರ ಮೇಲೆ ಡಿಮ್ಯಾಂಡ್ ಶುಲ್ಕ ಹಾಗೂ ವಿದ್ಯುತ್ ಬಳಕೆ ಶುಲ್ಕ ಸೇರಿ ಮಾಸಿಕ ಶುಲ್ಕವಾಗಿರುತ್ತದೆ.

# ವಿದ್ಯುತ್ ದರ ಅನುಸೂಚಿ ಎಚ್.ಟಿ.–೧

ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ, ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ, ಇತರೆ ಸ್ಥಳೀಯ ಸಂಸ್ಥೆಗಳು, ರಾಜ್ಯ ಮತ್ತು ಕೇಂದ್ರ ಸರ್ಕಾರಗಳಿಗೆ ಸೇರಿದ ನೀರು ಸರಬರಾಜು/ ಚರಂಡಿ ಮತ್ತು ಒಳಚರಂಡಿ ನೀರಿನ ಶುದ್ಧೀಕರಣ, ಒಳಚರಂಡಿ ಪಂಪಿಂಗ್ ಸ್ಥಾಪನಗಳಿಗೆ ಅನ್ವಯಿಸುತ್ತದೆ.

**ದರ ಅನುಸೂಚಿ**

| | |
|---|---|
| **ಡಿಮ್ಯಾಂಡ್ ಶುಲ್ಕ :** | ಪ್ರತಿ ತಿಂಗಳಿಗೆ, ಬಿಲ್ಲಿಂಗ್ ಡಿಮ್ಯಾಂಡ್‌ನ ಪ್ರತಿ ಕೆ.ವಿ.ಎ.ಗೆ ರೂ.೧೮೦.೦೦ಗಳು. |
| **ವಿದ್ಯುತ್ ಬಳಕೆ ಶುಲ್ಕ :** | ಪ್ರತಿ ಯೂನಿಟ್ಟಿಗೆ ೪೧೦ ಪೈಸೆ. |

**ಗ್ರಾಹಕರ ಇಚ್ಛೆಯ ಮೇರೆಗೆ ಸಮಯಾಧಾರಿತ ವಿದ್ಯುತ್ ದರ:**

| ಸಮಯಾಧಾರಿತ ಅವಧಿ | ಅನ್ವಯಿತ ಸಾಮಾನ್ಯ ವಿದ್ಯುತ್ ದರಕ್ಕಿಂತ ಹೆಚ್ಚಿಗೆ ದರ(+) / ಕಡಿಮೆ ದರ(–) |
|---|---|
| ೨೨.೦೦ ರಿಂದ ೦೬.೦೦ ರವರೆಗೆ | ಯೂನಿಟ್ ಒಂದಕ್ಕೆ (–) ೧೨೫ ಪೈಸೆ |
| ೦೬.೦೦ ರಿಂದ ೧೮.೦೦ ರವರೆಗೆ | ೦ |
| ೧೮.೦೦ ರಿಂದ ೨೨.೦೦ ರವರೆಗೆ | ಯೂನಿಟ್ ಒಂದಕ್ಕೆ (+) ೧೦೦ ಪೈಸೆ |

**ಟಿಪ್ಪಣಿ**: ಮೇಲ್ಕಂಡ ಪ್ರವರ್ಗಕ್ಕೆ ಸಂಬಂಧಿಸಿದ ನಿವಾಸಿ ವಸತಿ ಗೃಹ ಕಾಲೊನಿಗಳಿಗೆ ಮಾಡುವ ಸಗಟು ವಿದ್ಯುತ್ ಸರಬರಾಜಿಗೆ ಪ್ರತ್ಯೇಕವಾಗಿ ಏಕ ಬಿಂದುವಿನಲ್ಲಿ ಮೀಟರನ್ನು ಅಳವಡಿಸಲಾಗುವುದು ಹಾಗೂ ಅಲ್ಲಿ ದಾಖಲಾದ ವಿದ್ಯುತ್ತಿಗೆ ಎಚ್.ಟಿ.–೪ರ ವಿದ್ಯುತ್ ದರವನ್ನು ವಿಧಿಸಲಾಗುವುದು. ಮುಖ್ಯ ಎಚ್.ಟಿ. ಮೀಟರಿನಲ್ಲಿ ದಾಖಲಾದ ಡಿಮ್ಯಾಂಡಿಗೆ ಯಾವುದೇ ರಿಯಾಯಿತಿಯನ್ನು ನೀಡಲಾಗುವುದಿಲ್ಲ.

# ವಿದ್ಯುತ್ ದರ ಅನುಸೂಚಿ ಎಚ್.ಟಿ.–೨(ಎ)

ಕೈಗಾರಿಕೆಗಳು, ಕಾರ್ಖಾನೆಗಳು, ಕಾರ್ಯಾಗಾರಗಳು, ಸಂಶೋಧನೆ ಮತ್ತು ಅಭಿವೃದ್ಧಿ ಕೇಂದ್ರಗಳು, ಕೈಗಾರಿಕಾ ಎಸ್ಟೇಟುಗಳು, ಹಾಲಿನ ಡೈರಿಗಳು, ಅಕ್ಕಿ ಗಿರಣಿಗಳು, ಅವಲಕ್ಕಿ ಮಿಲ್ಲುಗಳು, ರೋಲರ್ ಹಿಟ್ಟಿನ ಗಿರಣಿಗಳು, ವಾರ್ತಾ ಪತ್ರಿಕೆಗಳು, ಮುದ್ರಣಾಲಯಗಳು, ರೈಲ್ವೆ ಮತ್ತು ಕೆ.ಎಸ್.ಆರ್.ಟಿ.ಸಿ. ಕಾರ್ಯಾಗಾರಗಳು/ಡಿಪೊಗಳು, ಚಿತಾಗಾರಗಳು, ಶೈತ್ಯಾಗಾರಗಳು, ಐಸ್ ಮತ್ತು ಐಸ್ ಕ್ರೀಂ ತಯಾರಿಕಾ ಘಟಕಗಳು, ಸ್ಥಳೀಯ ಸಂಸ್ಥೆಗಳಿಗೆ ಸೇರಿದ ಈಜುಕೊಳಗಳು, ಕೆ.ಐ.ಎ.ಡಿ.ಬಿ. ಮತ್ತು ಇತರೆ ಕೈಗಾರಿಕೆಗಳಿಗೆ  ನೀರು ಸರಬರಾಜು ಮಾಡುವ ಸ್ಥಾಪನಗಳು, ಎಲ್ಲಾ ರಕ್ಷಣಾ ಇಲಾಖೆಗಳ ಸ್ಥಾಪನಗಳು, ಹ್ಯಾಚರಿಗಳು, ಕೋಳಿ ಸಾಕಾಣೆ ಕೇಂದ್ರಗಳು, ವಸ್ತು ಸಂಗ್ರಹಾಲಯಗಳು, ಹೂ ಬೇಸಾಯ,  ಗ್ರೀನ್ ಹೌಸ್, ಜೈವಿಕ ತಾಂತ್ರಿಕ ಪ್ರಯೋಗಾಲಯಗಳು, ಹೈಬ್ರಿಡ್ ಬೀಜ ಸಂಸ್ಕರಣ ಘಟಕಗಳು, ಸ್ಟೋನ್ ಕ್ರಷರ್, ಸ್ಟೋನ್ ಕಟ್ಟಿಂಗ್, ಬೇಕರಿ ಪದಾರ್ಥಗಳ ತಯಾರಿಕಾ ಘಟಕಗಳು, ಮೈಸೂರು ಅರಮನೆ ದೀಪಾಲಂಕಾರ, ಸಿನಿಮಾ ಸ್ಟುಡಿಯೋ, ಡಬ್ಬಿಂಗ್ ಥಿಯೇಟರ್, ಪ್ರೊಸೆಸಿಂಗ್, ಪ್ರಿಂಟಿಂಗ್, ಡೆವಲಪಿಂಗ್ ಹಾಗೂ ಧ್ವನಿಮುದ್ರಣ  ಥಿಯೇಟರ್‌ಗಳು, ಟಿಶ್ಯೂ ಕಲ್ಚರ್, ಅಕ್ವ ಕಲ್ಚರ್,

ಪ್ರಾನ್ ಕಲ್ಚರ್, ಕರ್ನಾಟಕ ಸರಕಾರ/ ಭಾರತ ಸರ್ಕಾರಗಳ ಮಾಹಿತಿ ತಂತ್ರಜ್ಞಾನ ಹಾಗೂ ಜೈವಿಕ ತಂತ್ರಜ್ಞಾನ ಇಲಾಖೆಗಳಿಂದ ಮಾನ್ಯಗೊಳಿಸಲ್ಪಟ್ಟ ಯಂತ್ರಾಂಶ ಹಾಗೂ ತಂತ್ರಾಂಶ ಅಭಿವೃದ್ಧಿಯಲ್ಲಿ ತೊಡಗಿರುವ ಮಾಹಿತಿ ತಂತ್ರಜ್ಞಾನ ಕೈಗಾರಿಕೆಗಳು, ಮಾಹಿತಿ ತಂತ್ರಜ್ಞಾನ ಆಧಾರಿತ ಸೇವೆಗಳು / ಸ್ಟಾರ್ಟ್ ಆಫ್ಸ್ / ಅನಿಮೇಶನ್ / ಗೇಮಿಂಗ್ / ಕಂಪ್ಯೂಟರ್ ಗ್ರಾಫಿಕ್ಸ್ , ಔಷಧಿ ತಯಾರಿಕಾ ಘಟಕಗಳು, ಉಡುಪು ತಯಾರಿಕಾ ಘಟಕಗಳು, ಟೈರ್ ರೀಟ್ರೇಡಿಂಗ್ ಘಟಕಗಳು, ಅಣು ವಿದ್ಯುತ್ ಉತ್ಪಾದನೆ ಯೋಜನೆಗಳ ಸ್ಥಾಪನಗಳು, ಸರ್ಕಾರ ಮತ್ತು ಸ್ಥಳೀಯ ಸಂಸ್ಥೆಗಳಿಂದ ನಿರ್ವಹಿಸಲ್ಪಡುವ ಕ್ರೀಡಾಂಗಣಗಳು, ರೈಲ್ವೆ ಕರ್ಷಣ, ಮಲಿನ ಶುದ್ಧೀಕರಣ ಸ್ಥಾವರಗಳು, ಸ್ಥಳೀಯ ಸಂಸ್ಥೆಗಳಿಗೆ ಸೇರದ ಚರಂಡಿ ನೀರಿನ ಶುದ್ಧೀಕರಣ ಸ್ಥಾವರಗಳು, ಎಲ್.ಪಿ.ಜಿ. ಬಾಟ್ಲಿಂಗ್ ಸ್ಥಾವರಗಳು ಹಾಗೂ ಪೆಟ್ರೋಲಿಯಂ ಪೈಪ್‌ಲೈನ್‌ಯೋಜನೆಗಳು, ಹಂದಿ ಸಾಕಾಣಿಕೆ ಕೇಂದ್ರ, ಖನಿಜ ವಸ್ತುಗಳ ವಿಶ್ಲೇಷಣ ಪ್ರಯೋಗಾಲಯ, ಸಾಮಿಲ್, ಆಟಿಕೆ/ ಮರದ ಕೈಗಾರಿಕೆಗಳು ಮತ್ತು ಉಪಗ್ರಹ ಸಂಪರ್ಕ ಕೇಂದ್ರಗಳು, ಮಿನರಲ್ ವಾಟರ್ ಪ್ರೋಸೆಸಿಂಗ್ ಸ್ಥಾವರಗಳು, ಕುಡಿಯುವ ನೀರಿನ ಬಾಟ್ಲಿಂಗ್ ಸ್ಥಾವರಗಳು ಇವುಗಳಿಗೆ ಅನ್ವಯಿಸುತ್ತದೆ.

**ದರ ಅನುಸೂಚಿ**

**ಎಚ್.ಟಿ.–೨(ಎ) : ಮೆಸ್ಕಾಂಗೆ ಒಳಪಡುವ ಎಲ್ಲಾ ಪ್ರದೇಶಗಳಿಗೆ ಅನ್ವಯಿಸುತ್ತದೆ.**

| | |
|---|---|
| **ಡಿಮ್ಯಾಂಡ್ ಶುಲ್ಕ :** | ಪ್ರತಿ ತಿಂಗಳಿಗೆ, ಬಿಲ್ಲಿಂಗ್ ಡಿಮ್ಯಾಂಡಿನ ಪ್ರತಿ ಕೆ.ವಿ.ಎ.ಗೆ ರೂ.೧೭೦.೦೦ ಗಳು. |
| **ವಿದ್ಯುತ್ ಬಳಕೆ ಶುಲ್ಕ :** | |
| ಮೊದಲ ಒಂದು ಲಕ್ಷ ಯೂನಿಟ್ಟುಗಳಿಗೆ | ಪ್ರತಿ ಯೂನಿಟ್ಟಿಗೆ ೫೮೫ **ಪೈಸೆ.** |
| ಉಳಿದ ಯೂನಿಟ್ಟುಗಳಿಗೆ, | ಪ್ರತಿ ಯೂನಿಟ್ಟಿಗೆ **೬೧೫ ಪೈಸೆ.** |
| **ರೈಲ್ವೆ ಟ್ರಾಕ್ಷನ್ ಮತ್ತು ಮಲಿನ ನೀರು ಶುದ್ಧೀಕರಣ ಸ್ಥಾವರಗಳು :** | |
| **ಡಿಮ್ಯಾಂಡ್ ಶುಲ್ಕ :** | ಪ್ರತಿ ತಿಂಗಳಿಗೆ, ಬಿಲ್ಲಿಂಗ್ ಡಿಮ್ಯಾಂಡಿನ ಪ್ರತಿ ಕೆ.ವಿ.ಎ.ಗೆ ರೂ.**೧೮೦.೦೦ ಗಳು.** |
| **ವಿದ್ಯುತ್ ಬಳಕೆ ಶುಲ್ಕ :** | ಪ್ರತಿ ಯೂನಿಟ್ಟಿಗೆ ೫೫೫ **ಪೈಸೆ.** |

## <u>ವಿದ್ಯುತ್ ದರ ಅನುಸೂಚಿ ಎಚ್.ಟಿ.–೨(ಬಿ)</u>

ವಾಣಿಜ್ಯ ಸಂಕೀರ್ಣಗಳು, ಚಲನಚಿತ್ರ ಮಂದಿರಗಳು, ಹೋಟೆಲ್‌ಗಳು, ಭೋಜನ ಮತ್ತು ವಸತಿ ಗೃಹಗಳು, ಮನರಂಜನಾ ಉದ್ಯಾನವನಗಳು, ದೂರವಾಣಿ ವಿನಿಮಯ ಕೇಂದ್ರಗಳು, ರೇಸ್ ಕೋರ್ಸ್, ಎಲ್ಲಾ ಕ್ಲಬ್ಬುಗಳು, ದೂರದರ್ಶನ ಕೇಂದ್ರ, ಆಕಾಶವಾಣಿ, ರೈಲು ನಿಲ್ದಾಣಗಳು, ವಿಮಾನ ನಿಲ್ದಾಣ, ಕೆ.ಎಸ್.ಆರ್.ಟಿ.ಸಿ. ಬಸ್ ನಿಲ್ದಾಣಗಳು, ಎಲ್ಲಾ ಕಚೇರಿಗಳು, ಬ್ಯಾಂಕುಗಳು, ವಾಣಿಜ್ಯ ಬಹುಮಹಡಿ ಕಟ್ಟಡಗಳು, ಎ.ಪಿ.ಎಂ.ಸಿ. ಯಾರ್ಡ್‌ಗಳು, ಸರ್ಕಾರ ಹಾಗೂ ಸ್ಥಳೀಯ ಸಂಸ್ಥೆಗಳ ನಿರ್ವಹಣೆಯಿಂದ ಹೊರತುಪಡಿಸಿದ ಕ್ರೀಡಾಂಗಣಗಳು, ನೀರಾವರಿ, ವಿದ್ಯುತ್ ಯೋಜನೆಗಳು ಹಾಗೂ ಕೊಂಕಣ ರೈಲ್ವೆ ಯೋಜನೆಗಳ ನಿರ್ಮಾಣಕ್ಕೆ ಬಳಸುವ ವಿದ್ಯುತ್, ಪೆಟ್ರೋಲ್/ಡೀಸೆಲ್ ಮತ್ತು ತೈಲ ಶೇಖರಣ ಕೇಂದ್ರಗಳು, ಮಾಹಿತಿ ತಂತ್ರಜ್ಞಾನ ಆಧಾರಿತ ಮೆಡಿಕಲ್ ಟ್ರಾನ್ಸ್‌ಕ್ರಿಪ್ಷನ್ ಕೇಂದ್ರಗಳು, ಟೆಲಿಕಾಂ, ಕಾಲ್ ಸೆಂಟರ್ಸ್, ಬಿಪಿಓ/ಕೆಪಿಓ ಗಳಿಗೆ ಅನ್ವಯಿಸುತ್ತದೆ.

### ದರ ಅನುಸೂಚಿ

**ಎಚ್.ಟಿ.–೨(ಬಿ) : ಮೆಸ್ಕಾಂಗೆ ಒಳಪಡುವ ಎಲ್ಲಾ ಪ್ರದೇಶಗಳಿಗೆ ಅನ್ವಯಿಸುತ್ತದೆ.**

| | |
|---|---|
| **ಡಿಮ್ಯಾಂಡ್ ಶುಲ್ಕ :** | ಪ್ರತಿ ತಿಂಗಳಿಗೆ, ಬಿಲ್ಲಿಂಗ್ ಡಿಮ್ಯಾಂಡಿನ ಪ್ರತಿ ಕೆ.ವಿ.ಎ.ಗೆ ರೂ.೧೯೦.೦೦ ಗಳು. |
| **ವಿದ್ಯುತ್ ಬಳಕೆ ಶುಲ್ಕ :** | |
| ಮೊದಲ ಎರಡು ಲಕ್ಷ ಯೂನಿಟ್ಟುಗಳಿಗೆ | ಪ್ರತಿ ಯೂನಿಟ್ಟಿಗೆ ೭೩೫ **ಪೈಸೆ.** |
| ಉಳಿದ ಯೂನಿಟ್ಟುಗಳಿಗೆ, | ಪ್ರತಿ ಯೂನಿಟ್ಟಿಗೆ ೭೬೫ **ಪೈಸೆ.** |

## ವಿದ್ಯುತ್ ದರ ಅನುಸೂಚಿ ಎಚ್.ಟಿ.–೨(ಸಿ)

### ದರ ಅನುಸೂಚಿ

**ಎಚ್.ಟಿ.–೨(ಸಿ)(೧) : ಸರ್ಕಾರಿ ಆಸ್ಪತ್ರೆಗಳು ಮತ್ತು ಧಾರ್ಮಿಕ ಸಂಸ್ಥೆಗಳು ನಡೆಸುವ ಆಸ್ಪತ್ರೆಗಳು ಮತ್ತು ಇ.ಎಸ್.ಐ. ಆಸ್ಪತ್ರೆಗಳು ಮತ್ತು ವಿಶ್ವವಿದ್ಯಾಲಯಗಳು, ಸರ್ಕಾರ, ಸ್ಥಳೀಯ ಸಂಸ್ಥೆಗಳು, ಅನುದಾನ ಪಡೆದ ಸಂಸ್ಥೆಗಳಿಗೆ ಸೇರಿದ ಶಿಕ್ಷಣ ಸಂಸ್ಥೆಗಳು ಮತ್ತು ಎಲ್ಲಾ ಶಿಕ್ಷಣ ಸಂಸ್ಥೆಗಳ ವಿದ್ಯಾರ್ಥಿ ನಿಲಯಗಳಿಗೆ ಅನ್ವಯಿಸುತ್ತದೆ.**

| | |
|---|---|
| **ಡಿಮ್ಯಾಂಡ್ ಶುಲ್ಕ :** | ಪ್ರತಿ ತಿಂಗಳಿಗೆ, ಬಿಲ್ಲಿಂಗ್ ಡಿಮ್ಯಾಂಡಿನ ಪ್ರತಿ ಕೆ.ವಿ.ಎ.ಗೆ ರೂ.೧೭೦.೦೦ ಗಳು. |
| **ವಿದ್ಯುತ್ ಬಳಕೆ ಶುಲ್ಕ :** | |
| ಮೊದಲ ಒಂದು ಲಕ್ಷ ಯೂನಿಟ್ಟುಗಳಿಗೆ | ಪ್ರತಿ ಯೂನಿಟ್ಟಿಗೆ ೫೬೦ **ಪೈಸೆ.** |
| ಉಳಿದ ಯೂನಿಟ್ಟುಗಳಿಗೆ, | ಪ್ರತಿ ಯೂನಿಟ್ಟಿಗೆ ೬೧೦ **ಪೈಸೆ.** |

**ಎಚ್.ಟಿ.–೨(ಸಿ)(೨) : ಎಚ್.ಟಿ.–೨(ಸಿ)(೧) ಗೆ ಒಳಪಡದ ಆಸ್ಪತ್ರೆಗಳು ಮತ್ತು ಶಿಕ್ಷಣ ಸಂಸ್ಥೆಗಳು ಮತ್ತು ಶಿಕ್ಷಣ ಸಂಸ್ಥೆಗಳ ವಿದ್ಯಾರ್ಥಿ ನಿಲಯಗಳಿಗೆ ಅನ್ವಯಿಸುತ್ತದೆ.**

| | |
|---|---|
| **ಡಿಮ್ಯಾಂಡ್ ಶುಲ್ಕ :** | ಪ್ರತಿ ತಿಂಗಳಿಗೆ, ಬಿಲ್ಲಿಂಗ್ ಡಿಮ್ಯಾಂಡಿನ ಪ್ರತಿ ಕೆ.ವಿ.ಎ.ಗೆ ರೂ.೧೭೦.೦೦ ಗಳು. |
| **ವಿದ್ಯುತ್ ಬಳಕೆ ಶುಲ್ಕ :** | |
| ಮೊದಲ ಒಂದು ಲಕ್ಷ ಯೂನಿಟ್ಟುಗಳಿಗೆ | ಪ್ರತಿ ಯೂನಿಟ್ಟಿಗೆ ೬೬೦ **ಪೈಸೆ.** |
| ಉಳಿದ ಯೂನಿಟ್ಟುಗಳಿಗೆ, | ಪ್ರತಿ ಯೂನಿಟ್ಟಿಗೆ ೭೧೦ **ಪೈಸೆ.** |

**ಟಿಪ್ಪಣಿ: ಎಚ್.ಟಿ.೨(ಎ), ಎಚ್.ಟಿ.೨(ಬಿ), ಮತ್ತು ಎಚ್.ಟಿ.೨(ಸಿ) ವಿದ್ಯುತ್ ದರ ಅನುಸೂಚಿಗೆ ಅನ್ವಯಿಸುತ್ತದೆ :**

೧. ಸರಬರಾಜಾದ ವಿದ್ಯುತ್ತನ್ನು ಸ್ಥಾಪನಗಳಿಗೆ ಸಂಬಂಧಿಸಿದ ಆವರಣದೊಳಗಿನ ಎಲ್ಲಾ ಉದ್ದೇಶಗಳಿಗೆ, ಅಂದರೆ ಕಚೇರಿ, ಉಗ್ರಾಣ, ಉಪಹಾರ ಗೃಹ, ಆವರಣ ದೀಪ, ನೀರೆತ್ತುವುದು ಮತ್ತು ಜಾಹಿರಾತುಗಳಿಗೆ ಉಪಯೋಗಿಸಬಹುದು.

೨. ಆವರಣದೊಳಗೆ ನಿರ್ಮಾಣ, ಮಾರ್ಪಾಡು ಮತ್ತು ವಿಸ್ತರಣೆ ಉದ್ದೇಶಗಳಿಗೆ ವಿದ್ಯುತ್ತನ್ನು ಉಪಯೋಗಿಸಬಹುದು.

**ಗ್ರಾಹಕರ ಇಚ್ಛೆಯ ಮೇರೆಗೆ ಸಮಯಾಧಾರಿತ ವಿದ್ಯುತ್ ದರ (ಎಚ್.ಟಿ.೨(ಎ), ಎಚ್.ಟಿ.೨(ಬಿ), ಮತ್ತು ಎಚ್.ಟಿ.೨(ಸಿ) ವಿದ್ಯುತ್ ದರ ಅನುಸೂಚಿಗೆ ಅನ್ವಯಿಸುತ್ತದೆ):**

| **ಸಮಯಾಧಾರಿತ ಅವಧಿ** | **ಅನ್ವಯಿತ ಸಾಮಾನ್ಯ ವಿದ್ಯುತ್ ದರಕ್ಕಿಂತ ಹೆಚ್ಚಿಗೆ ದರ(+) / ಕಡಿಮೆ ದರ(–)** |
|---|---|
| ೨೨.೦೦ ರಿಂದ ೦೬.೦೦ ರವರೆಗೆ | ಯೂನಿಟ್ ಒಂದಕ್ಕೆ (–) ೧೨೫ ಪೈಸೆ |
| ೦೬.೦೦ ರಿಂದ ೧೮.೦೦ ರವರೆಗೆ | ೦ |
| ೧೮.೦೦ ರಿಂದ ೨೨.೦೦ ರವರೆಗೆ | ಯೂನಿಟ್ ಒಂದಕ್ಕೆ (+) ೧೦೦ ಪೈಸೆ |

## ವಿದ್ಯುತ್ ದರ ಅನುಸೂಚಿ ಎಚ್.ಟಿ.–೩(ಎ)

**ಏತ ನೀರಾವರಿ ಯೋಜನೆಗಳು/ ಏತ ನೀರಾವರಿ ಸಂಘಗಳಿಗೆ ಅನ್ವಯಿಸುತ್ತದೆ.**

**ದರ ಅನುಸೂಚಿ**

**ಎಚ್.ಟಿ.–೩(ಎ)(i): ಸರ್ಕಾರಿ ಇಲಾಖೆಗಳು/ಸರ್ಕಾರದ ಸ್ವಾಮ್ಯಕ್ಕೊಳಪಟ್ಟ ನಿಗಮಗಳ ಏತ ನೀರಾವರಿ ಯೋಜನೆಗಳಿಗೆ ಅನ್ವಯಿಸುತ್ತದೆ.**

| | |
|---|---|
| **ವಿದ್ಯುತ್ ಬಳಕೆ ಶುಲ್ಕ / ಕನಿಷ್ಠ ಶುಲ್ಕ** | ಮಂಜೂರಾದ ವಿದ್ಯುತ್‌ನ **ಪ್ರತಿ ಅಶ್ವ ಶಕ್ತಿಗೆ** ವಾರ್ಷಿಕ ಕನಿಷ್ಠ ರೂ.**೧೦೦೦ ಗಳ** ಷರತ್ತಿಗೆ ಒಳಪಟ್ಟು ಬಳಸಿರುವ ಎಲ್ಲಾ ಯೂನಿಟ್ಟುಗಳಿಗೆ, ಪ್ರತಿ ಯೂನಿಟ್ಟಿಗೆ **೧೭೦ ಪೈಸೆಯಂತೆ.** |

**ಎಚ್.ಟಿ.–೩(ಎ)(ii): ನಗರ/ ಎಕ್ಸ್ ಪ್ರೆಸ್ ಫೀಡರುಗಳಿಗೆ ಸಂಪರ್ಕಗೊಂಡಿರುವ ಖಾಸಗಿ ಏತ ನೀರಾವರಿ ಯೋಜನೆಗಳು ಹಾಗೂ ಏತ ನೀರಾವರಿ ಸಂಘಗಳಿಗೆ ಅನ್ವಯಿಸುತ್ತದೆ.**

| | |
|---|---|
| **ನಿಗದಿತ ಶುಲ್ಕ :** | ಮಂಜೂರಾದ ಹೊರೆಯ ಪ್ರತಿ ಎಚ್.ಪಿ. ಗೆ, ಪ್ರತಿ ತಿಂಗಳಿಗೆ ರೂ.**೩೦/–** |
| **ವಿದ್ಯುತ್ ಬಳಕೆ ಶುಲ್ಕ :** | ಪ್ರತಿ ಯೂನಿಟ್ಟಿಗೆ ೧೭೦ **ಪೈಸೆಯಂತೆ.** |

**ಎಚ್.ಟಿ.–೩(ಎ)(iii): ಎಚ್.ಟಿ.–೩(ಎ)(ii)ಗೆ ಒಳಪಡದ ಇತರ ಖಾಸಗಿ ಏತ ನೀರಾವರಿ ಯೋಜನೆಗಳು ಹಾಗೂ ಏತ ನೀರಾವರಿ ಸಂಘಗಳಿಗೆ ಅನ್ವಯಿಸುತ್ತದೆ.**

| | |
|---|---|
| **ನಿಗದಿತ ಶುಲ್ಕ :** | ಮಂಜೂರಾದ ಹೊರೆಯ ಪ್ರತಿ ಎಚ್.ಪಿ. ಗೆ ಪ್ರತಿ ತಿಂಗಳಿಗೆ ರೂ.೧೦/–. |
| **ವಿದ್ಯುತ್ ಬಳಕೆ ಶುಲ್ಕ :** | ಪ್ರತಿ ಯೂನಿಟ್ಟಿಗೆ ೧೭೦ **ಪೈಸೆಯಂತೆ.** |

## ವಿದ್ಯುತ್ ದರ ಅನುಸೂಚಿ ಎಚ್.ಟಿ.–೩(ಬಿ)

**ಎಚ್.ಟಿ.–೩(ಬಿ) ನೀರಾವರಿ ಮತ್ತು ಕೃಷಿ ಫಾರಂಗಳು, ಸರ್ಕಾರದ ತೋಟಗಾರಿಕೆ ಫಾರಂಗಳು, ಖಾಸಗಿ ತೋಟಗಾರಿಕೆ ನರ್ಸರಿಗಳು, ಕಾಫಿ, ಟೀ, ರಬ್ಬರ್, ತೆಂಗು ಮತ್ತು ಅಡಿಕೆ ಬೆಳೆಗಳಿಗೆ ಅನ್ವಯಿಸುತ್ತದೆ.**

**ದರ ಅನುಸೂಚಿ**

| | |
|---|---|
| **ವಿದ್ಯುತ್ ಬಳಕೆ ಶುಲ್ಕ / ಕನಿಷ್ಠ ಶುಲ್ಕ** | ಮಂಜೂರಾದ ವಿದ್ಯುತ್ತಿನ **ಪ್ರತಿ ಅಶ್ವ ಶಕ್ತಿಗೆ** ವಾರ್ಷಿಕ ಕನಿಷ್ಠ ರೂ.೧೦೦೦ **ಗಳ** ಷರತ್ತಿಗೆ ಒಳಪಟ್ಟು ಬಳಸಿರುವ ಎಲ್ಲಾ ಯೂನಿಟ್ಟುಗಳಿಗೆ, ಪ್ರತಿ ಯೂನಿಟ್ಟಿಗೆ ೩೭೦ **ಪೈಸೆಯಂತೆ.** |

ಟಿಪ್ಪಣಿ: ಈ ಮೇಲಿನ ಸ್ಥಾಪನಗಳಿಗೆ ಪ್ರತಿ ಮೂರು ತಿಂಗಳಿಗೊಮ್ಮೆ ಬಿಲ್ ಮಾಡತಕ್ಕದ್ದು.

## ವಿದ್ಯುತ್ ದರ ಅನುಸೂಚಿ ಎಚ್.ಟಿ.–೪

ಮುಖ್ಯ ಎಚ್.ಟಿ. ಸ್ಥಾಪನದ ಆವರಣದ ಒಳಗಿರಲಿ ಅಥವಾ ಹೊರಗಿರಲಿ ಸ್ವತಂತ್ರವಾಗಿ ಅಥವಾ ಮುಖ್ಯ ಎಚ್.ಟಿ. ಮಾರ್ಗದ ಸಂಪರ್ಕದಿಂದ ವಿದ್ಯುತ್ ಸರಬರಾಜು ಪಡೆಯುತ್ತಿರುವ ನಿವಾಸಿ ಅಪಾರ್ಟ್‌ಮೆಂಟುಗಳು ಹಾಗೂ ಕಾಲೋನಿಗಳಿಗೆ ಅನ್ವಯಿಸುತ್ತದೆ. ಕಾಲೋನಿಯ ಒಳಗಿನ ನಿವಾಸಿ ಗೃಹ, ಥಿಯೇಟರುಗಳು, ಶಾಪಿಂಗ್ ಸೌಲಭ್ಯ, ಕ್ಲಬ್, ಆಸ್ಪತ್ರೆ, ಅತಿಥಿ ಗೃಹ, ಆವರಣ/ಬೀದಿ ದೀಪ ವ್ಯವಸ್ಥೆ, ಉಪಹಾರ ಗೃಹಗಳಿಗೆ ವಿದ್ಯುತ್ ಸರಬರಾಜನ್ನು ಪಡೆಯಬಹುದಾಗಿದೆ.

**ದರ ಅನುಸೂಚಿ**

**ಎಚ್.ಟಿ.–೪: ಎಲ್ಲಾ ಪ್ರದೇಶಗಳಿಗೆ ಅನ್ವಯಿಸುತ್ತದೆ.**

| | |
|---|---|
| **ಡಿಮಾಂಡ್ ಶುಲ್ಕ :** | ಬಿಲ್ಲಿಂಗ್ ಡಿಮ್ಯಾಂಡಿನ ಪ್ರತಿ ಕೆ.ವಿ.ಎ.ಗೆ ಪ್ರತಿ ತಿಂಗಳಿಗೆ ರೂ.೧೦೦.೦೦ **ಗಳು.** |
| **ವಿದ್ಯುತ್ ಬಳಕೆ ಶುಲ್ಕ :** | ಪ್ರತಿ ಯೂನಿಟ್ಟಿಗೆ **೫೫೦ ಪೈಸೆ.** |

**ಟಿಪ್ಪಣಿ :**

೧) ಮುಖ್ಯ ಎಚ್.ಟಿ.ಸ್ಥಾಪನದ ಸರಬರಾಜು ಮಾರ್ಗದಿಂದ ಸಂಪರ್ಕ ಪಡೆದು ವಿದ್ಯುತ್ ಸೌಲಭ್ಯವನ್ನು ಹೊಂದಿರುವ ನಿವಾಸಿ ಕಾಲೋನಿಗಳು ಬಳಸಿದ ವಿದ್ಯುತ್ತನ್ನು ಮೇಲೆ ತಿಳಿಸಿರುವ ವಿದ್ಯುತ್ ದರದಲ್ಲಿ ಏಕ ಬಿಂದುವಿನಲ್ಲಿ ಬಿಲ್ ಮಾಡತಕ್ಕದ್ದು. ಮುಖ್ಯ ಎಚ್.ಟಿ. ಮೀಟರಿನಲ್ಲಿ ದಾಖಲಾದ ಡಿಮ್ಯಾಂಡಿಗೆ ಯಾವುದೇ ಇಳಿತಾಯದ ಸೌಲಭ್ಯವನ್ನು ನೀಡಲಾಗುವುದಿಲ್ಲ.

೨) ಈ ವಿದ್ಯುತ್ ದರದ ಅಡಿಯಲ್ಲಿ ವಿದ್ಯುತ್ತನ್ನು, ಕಾಲೊನಿಯ ಆವರಣದೊಳಗೆ ವಾಣಿಜ್ಯ, ಉಪಹಾರ ಗೃಹ, ಕ್ಲಬ್, ಅಂಗಡಿ, ಸಭಾಂಗಣದಂತಹ ಇತರೆ ಉದ್ದೇಶಗಳಿಗೆ ಬಳಸಬಹುದು. ಆದರೆ, ಈ ವಾಣಿಜ್ಯ ವಿದ್ಯುತ್ ಹೊರೆಯು, ಒಪ್ಪಂದದ ಡಿಮ್ಯಾಂಡಿನ ಶೇ.೧೦ ಕ್ಕಿಂತ ಕಡಿಮೆ ಇರುವ ನಿಬಂಧನೆಗೆ ಒಳಪಟ್ಟಿರಬೇಕು.

೩) ಎಚ್.ಟಿ.–೪ಪ್ರವರ್ಗದಡಿಯಲ್ಲಿ ಎಚ್.ಟಿ. ವಿದ್ಯುತ್ ಸರಬರಾಜನ್ನು ಪಡೆಯುವ ನಿವಾಸಿ ವಸತಿ ಗೃಹಗಳು, ಆ ವಿದ್ಯುತನ್ನು ವಾಣಿಜ್ಯ ಹಾಗೂ ಅಂಗಡಿ, ಹೋಟೇಲ್‌ಗಳಂತಹ ಇತರೆ ಉದ್ದೇಶಗಳಿಗೆ ಬಳಸಿದರೆ, ಬಳಸಿದ ವಿದ್ಯುತ್ತನ್ನು ಮುಖ್ಯ ಎಚ್.ಟಿ. ಸರಬರಾಜಿನ ಬಿಲ್ಲಿನಲ್ಲಿ ಕಳೆದು (ಕೇವಲ ವಿದ್ಯುತ್ ಶುಲ್ಕ) ಸೂಕ್ತ ವಿದ್ಯುತ್ ದರದ ಅಡಿಯಲ್ಲಿ ಬಿಲ್ ಮಾಡಲಾಗುವುದು. ಮುಖ್ಯ ಎಚ್.ಟಿ. ಮೀಟರಿನಲ್ಲಿ ದಾಖಲಾದ

ಡಿಮ್ಯಾಂಡಿಗೆ ಯಾವುದೇ ಇಳಿತಾಯದ ಸೌಲಭ್ಯವನ್ನು ನೀಡಲಾಗುವುದಿಲ್ಲ.ಸಮಾನ ರೀತಿಯ ಕ್ಷೇತ್ರಗಳ (ಕಾಮನ್ ಏರಿಯಾ) ವಿದ್ಯುತ್ ಬಳಕೆಯನ್ನು ಪ್ರಧಾನ ಬಳಕೆದಾರರ ಪ್ರವರ್ಗವನ್ನು ಅವಲಂಭಿಸಿ ಬಿಲ್ ಮಾಡಲಾಗುವುದು.

## ವಿದ್ಯುತ್ ದರ ಅನುಸೂಚಿ ಎಚ್.ಟಿ.–೫

೬೭ ಹೆಚ್.ಪಿ. ಮತ್ತು ಮೇಲ್ಪಟ್ಟು ಕಾಂಟ್ರಾಕ್ಟ್ ಡಿಮಾಂಡ್‌ನೊಂದಿಗಿನ, ಹೋರ್ಡಿಂಗ್ ಮತ್ತು ಜಾಹಿರಾತು ಫಲಕಗಳು ಮತ್ತು ಕೈಗಾರಿಕೆಗಳ ನಿರ್ಮಾಣಕ್ಕೆ ಬಳಸುವ ವಿದ್ಯುತ್‌ಗೆ ಅನ್ವಯಿಸುತ್ತದೆ ಮತ್ತು ೬೭ ಹೆಚ್.ಪಿ. ಮತ್ತು ಮೇಲ್ಪಟ್ಟು ಕಾಂಟ್ರಾಕ್ಟ್ ಡಿಮಾಂಡ್‌ನೊಂದಿಗೆ ತಾತ್ಕಾಲಿಕ ನೆಲೆಯಲ್ಲಿ ವಿದ್ಯುತ್ ಬಳಸುವ ಎಲ್ಲಾ ಪ್ರವರ್ಗದ ಗ್ರಾಹಕರಿಗೂ ಅನ್ವಯಿಸುತ್ತದೆ. ಹೆಚ್.ಟಿ.–೨(ಬಿ) ಪ್ರವರ್ಗದಡಿಯಲ್ಲಿ ವರ್ಗೀಕರಿಸಿರುವ ನೀರಾವರಿ, ವಿದ್ಯುತ್ ಯೋಜನೆಗಳು ಹಾಗೂ ಕೊಂಕಣ ರೈಲ್ವೆ ಯೋಜನೆಗಳ ನಿರ್ಮಾಣಕ್ಕೆ ಬಳಸುವ ವಿದ್ಯುತ್‌ಗೆ ಈ ಜಕಾತಿಯು ಅನ್ವಯವಾಗುವುದಿಲ್ಲ.

**ದರ ಅನುಸೂಚಿ**

**ಎಚ್.ಟಿ.–೫: ತಾತ್ಕಾಲಿಕ ವಿದ್ಯುತ್ ಸರಬರಾಜು.**

| **೬೭ ಹೆಚ್.ಪಿ. ಮತ್ತು ಅಧಿಕ ಸಾಮರ್ಥ್ಯ:** | |
|---|---|
| **ನಿಗದಿತ ಶುಲ್ಕ/ಡಿಮಾಂಡ್ ಶುಲ್ಕ:** | **ಮಂಜೂರಾದ ಎಲ್ಲಾ ಹೊರೆ / ಕಾಂಟ್ರಾಕ್ಟ್ ಡಿಮಾಂಡ್‌ಗೆ ಪ್ರತಿ ತಿಂಗಳಿಗೆ, ಪ್ರತಿ ಹೆಚ್.ಪಿ.ಗೆ ರೂ.೨೧೦.೦೦** |
| **ವಿದ್ಯುತ್ ಬಳಕೆ ಶುಲ್ಕ :** | ಪ್ರತಿ ಯೂನಿಟ್ಟಿಗೆ **೯೦೦ ಪೈಸೆ.** |

**ಟಿಪ್ಪಣಿ :**

೧. ಕರ್ನಾಟಕ ರಾಜ್ಯದಲ್ಲಿ ವಿದ್ಯುತ್ ಸರಬರಾಜಿಗಾಗಿ ವಿತರಣಾ ಲೈಸೆನ್ಸುದಾರರ ಷರತ್ತುಗಳು, ಇದರ ಪರಿಚ್ಛೇದ ೧೨ ರಲ್ಲಿ ಕಲ್ಪಿಸಿರುವ ಅವಕಾಶಗಳ ಪ್ರಕಾರ ವಿತರಣಾ ಮಾರ್ಗದ ವಿಸ್ತರಣೆಯೊಂದಿಗೆ ಅಥವಾ ವಿಸ್ತರಣೆ ಇಲ್ಲದೆ, **ಪೂರ್ವ ಸಂದಾಯಿತ ಎನರ್ಜಿ ಮೀಟರಿನ** ಮೂಲಕ ತಾತ್ಕಾಲಿಕ ವಿದ್ಯುತ್ ಸರಬರಾಜನ್ನು ಒದಗಿಸಲಾಗುವುದು.

೨. ಒಂದು ವರ್ಷಕ್ಕಿಂತ ಕಡಿಮೆ ಅವಧಿಗೆ ಲೈಸೆನ್ಸನ್ನು ಹೊಂದಿರುವ ಸಂಚಾರಿ ಸಿನಿಮಾ ಮಂದಿರಗಳಿಗೂ ಈ ವಿದ್ಯುತ್ ದರವು ಅನ್ವಯಿಸುತ್ತದೆ.

೩. ಕರ್ನಾಟಕ ರಾಜ್ಯದಲ್ಲಿ ವಿದ್ಯುತ್ ಸರಬರಾಜಿಗಾಗಿ ವಿತರಣಾ ಲೈಸೆನ್ಸುದಾರರ ಷರತ್ತುಗಳು, ಇದರ ಪರಿಚ್ಛೇದ ೧೨ ರಲ್ಲಿ ತಿಳಿಸಿರುವ ತಾತ್ಕಾಲಿಕ ವಿದ್ಯುತ್ ಸರಬರಾಜಿನ ಎಲ್ಲಾ ನಿಯಮಗಳನ್ನು ಸಂಪರ್ಕ ನೀಡುವುದಕ್ಕೆ ಮುಂಚೆ ಪಾಲಿಸತಕ್ಕದ್ದು.

# ವಿದ್ಯುಚ್ಛಕ್ತಿ ದರಗಳು – ೨೦೧೬

## <u>ಭಾಗ – ೨</u>

# ಲೋ ಟೆನ್‌ಷನ್ ವಿದ್ಯುತ್ ಸರಬರಾಜು

(೪೦೦ ವೋಲ್ಟ್ ೩ ಫೇಸ್ ಮತ್ತು ೨೩೦ ವೋಲ್ಟ್‌ಗಳ
ಒಂದು ಫೇಸಿನ ವಿದ್ಯುತ್ ಸರಬರಾಜಿಗೆ ಅನ್ವಯಿಸುತ್ತದೆ.)

# ವಿದ್ಯುಚ್ಛಕ್ತಿ ದರಗಳು – ೨೦೧೬

## ಭಾಗ – ೨

## ಲೋ ಟೆನ್ಷನ್ ವಿದ್ಯುತ್ ಸರಬರಾಜು

### ಎಲ್.ಟಿ. ಸ್ಥಾಪನಗಳು ಹಾಗೂ ಅವುಗಳ ಬಿಲ್ಲಿಂಗ್‌ಗೆ ಅನ್ವಯಿಸುವ ಷರತ್ತುಗಳು

೧. ಎಲ್.ಟಿ.ಕೈಗಾರಿಕಾ/ವಾಣಿಜ್ಯ ಬಳಕೆದಾರರಿಗೆ ಸಂಬಂಧಿಸಿದಂತೆ, ಬಳಕೆದಾರರ ಅಪೇಕ್ಷೆಯ ಮೇರೆಗೆ **ಬೇಡಿಕೆ (ಡಿಮ್ಯಾಂಡ್) ಆಧಾರಿತ ವಿದ್ಯುತ್ ದರವನ್ನು** ಅಳವಡಿಸಿಕೊಳ್ಳಬಹುದಾಗಿದೆ. ಇಂತಹ ಸಂದರ್ಭಗಳಲ್ಲಿ ಮಂಜೂರಾದ ಹೊರೆಗಿಂತಲೂ ಹೆಚ್ಚು ಸಂಪರ್ಕಿತ ಹೊರೆಯನ್ನು ಬಳಕೆದಾರರು ಹೊಂದಲು ಅನುಮತಿಸಲಾಗಿದೆ. ಅಂತಹ ಪ್ರಕರಣಗಳಲ್ಲಿ, ಮಂಜೂರಾದ ಹೊರೆ ಅಥವಾ ಆ ತಿಂಗಳಲ್ಲಿ ಟ್ರೈವೆಕ್ಟರ್ ಮೀಟರಿನಲ್ಲಿ ದಾಖಲಾದ ಗರಿಷ್ಠ ಡಿಮ್ಯಾಂಡ್, ಇವೆರಡರಲ್ಲಿ ಯಾವುದು ಹೆಚ್ಚೋ ಅದು ಬಿಲ್ಲಿಂಗ್ ಡಿಮ್ಯಾಂಡ್ ಆಗಿರುತ್ತದೆ. ದಾಖಲಿತಗೊಂಡ ಗರಿಷ್ಠ ಡಿಮ್ಯಾಂಡ್ ಮಂಜೂರಾದ ಹೊರೆಗಿಂತ ಹೆಚ್ಚಾಗಿದ್ದಲ್ಲಿ, ಸಾಮಾನ್ಯ ದರದ **ಎರಡು ಪಟ್ಟು** ಶುಲ್ಕವು ದಂಡರೂಪದಲ್ಲಿ ಅನ್ವಯವಾಗುತ್ತದೆ.

೨. ಆ ಸ್ಥಾಪನದಲ್ಲಿ ಬಳಸಿದ ಒಟ್ಟಾರೆ ಹೊರೆಯು, ಮಂಜೂರಾದ ಹೊರೆಯನ್ನು ಮೀರದಂತೆ ಬಳಕೆದಾರರು ತಮ್ಮ ಆವರಣದೊಳಗೆ ಸದುದ್ದೇಶದ ತಾತ್ಕಾಲಿಕ ಬಳಕೆಗೆ ವಿದ್ಯುತ್ತನ್ನು ಬಳಸಿಕೊಳ್ಳಲು ಅನುಮತಿ ಇದೆ.

೩. ಖಾಯಂ ವಿದ್ಯುತ್ ಸರಬರಾಜನ್ನು ಹೊಂದಿದ್ದು, ನೆಲಹೊಳಮ ಹಾಗೂ ಒಂದೆಡೆಯಿಂದ ಮತ್ತೊಂದೆಡೆಗೆ ಸಾಗಿಸುವ ಉಪಕರಣಗಳಿಗೆ ತಾತ್ಕಾಲಿಕವಾಗಿ ವಿದ್ಯುತ್ತನ್ನು ಬಳಸುವ ಬಳಕೆದಾರರು, ತಮ್ಮ ಆವರಣದಲ್ಲಿ ಅಂತಹ ಉಪಕರಣಗಳಿಗೆ ಸೂಕ್ತ ಸಾಮರ್ಥ್ಯದ ಅರ್ಥ್‌ಲೀಕೇಜ್ ಸರ್ಕ್ಯೂಟ್ ಬ್ರೇಕರ್‌ಗಳನ್ನು ಅಳವಡಿಸಿರಬೇಕು.

೪. ಶಿಕ್ಷಣ ಸಂಸ್ಥೆಗಳಲ್ಲಿರುವ ಪ್ರಯೋಗಾಲಯ ಸ್ಥಾಪನಗಳಲ್ಲಿ, ಮಂಜೂರಾದ ಹೊರೆಯ ನಾಲ್ಕು ಪಟ್ಟು ಹೆಚ್ಚಿನ ಹೊರೆಯ ಯಂತ್ರಗಳನ್ನು ಸ್ಥಾಪಿಸಬಹುದಾಗಿದೆ. ಆದರೂ, ನಿಗದಿತ ಶುಲ್ಕವನ್ನು ಮಂಜೂರಾದ ಹೊರೆಯ ಆಧಾರದ ಮೇಲೆ ವಿಧಿಸಲಾಗುವುದು.

೫. ಸಂಯುಕ್ತ ದೀಪ ಮತ್ತು ತಾಪನಗಳಲ್ಲದೆ, ಎಲ್.ಟಿ.–೨(ಎ) ಮತ್ತು ಎಲ್.ಟಿ.–೨(ಬಿ) ಪ್ರವರ್ಗದ ಅಡಿಯಲ್ಲಿ **ಒಂದೇ ಮೀಟರಿನ ಸಂಪರ್ಕದಲ್ಲಿರುವ ಷರತ್ತಿಗೆ** ಒಳಪಟ್ಟಂತೆ ಫ್ಯಾನು, ಟಿ.ವಿ., ರೇಡಿಯೋ, ರೆಫ್ರಿಜರೇಟರ್, ಗೃಹ ಬಳಕೆಯ ವಾಟರ್ ಪಂಪು, ಹವಾ ನಿಯಂತ್ರಕ ಹಾಗೂ ಇತರೆ ಗೃಹ ಬಳಕೆ ಸಾಧನಗಳಿಗೆ ವಿದ್ಯುತ್ತನ್ನು ಬಳಸಬಹುದಾಗಿದೆ. ಹವಾ ನಿಯಂತ್ರಕಕ್ಕೆ ಪ್ರತ್ಯೇಕ ಮಾಪಕವನ್ನು ಅಳವಡಿಸಿದ್ದರೆ, ಪೂರ್ಣ ಹೊರೆಯ ಲೆಕ್ಕಾಚಾರಕ್ಕಾಗಿ ಅದನ್ನು ಒಂದೇ ಮಾಪಕಕ್ಕೆ ವಿಲೀನಗೊಳಿಸುವಂತೆ ಸಂಬಂಧಿತ ಬಳಕೆದಾರರಿಗೆ ತಿಳುವಳಿಕೆಯ ಪತ್ರವನ್ನು ಜಾರಿ

ಮಾಡತಕ್ಕದ್ದು. ಅಲ್ಲಿಯವರೆಗೆ ಹವಾ ನಿಯಂತ್ರಣದ ಬಳಕೆಯನ್ನು ವಾಣಿಜ್ಯ ವಿದ್ಯುತ್ ದರದ ಅಡಿಯಲ್ಲಿ ಬಿಲ್ ಮಾಡತಕ್ಕದ್ದು.

೬. **ಸಗಟು ಎಲ್.ಟಿ. ವಿದ್ಯುತ್ ಸರಬರಾಜು**:
ಗುಂಪಾಗಿ ಮನೆಗಳನ್ನು ಹೊಂದಿರುವ ಒಬ್ಬರೇ ಬಳಕೆದಾರರು ಗೃಹ ಬಳಕೆ ದೀಪ ಹಾಗೂ ಸಂಯುಕ್ತ ದೀಪ ಮತ್ತು ತಾಪನ [ಎಲ್.ಟಿ.–೨(ಎ)] ಪ್ರವರ್ಗದ ಅಡಿಯಲ್ಲಿ ವಿದ್ಯುತ್ತನ್ನು ಪಡೆದರೆ (ಅಂದರೆ, ಸಗಟು ಎಲ್.ಟಿ. ವಿದ್ಯುತ್ ಸರಬರಾಜನ್ನು ಪಡೆದಿರುವವರು), ಬಳಸಿದ ಎಲ್ಲಾ ವಿದ್ಯುತ್ತನ್ನು, ಇರುವ ಎಲ್ಲಾ ಮನೆಗಳ ಸಂಖ್ಯೆಯಿಂದ ಭಾಗಿಸಿ ಸಮಾನ ದರದಲ್ಲಿ ಬಿಲ್ ಮಾಡತಕ್ಕದ್ದು. ಇದರ ಜೊತೆಗೆ ಮಂಜೂರಾದ ಸಂಪೂರ್ಣ ಹೊರೆಗೆ ನಿಗದಿತ ಶುಲ್ಕವನ್ನು ದರ ಅನುಸೂಚಿಯಲ್ಲಿರುವಂತೆ ವಿಧಿಸಲಾಗುವುದು.

೭. ಎಲ್.ಟಿ.–೨(ಎ) ಪ್ರವರ್ಗದ ಅಡಿಯಲ್ಲಿ ಬರುವ ಅಂಗವಿಕಲರು, ವೃದ್ಧರು, ನಿರಾಶ್ರಿತರು ಹಾಗೂ ಅನಾಥರಿಗೆ ನಡೆಸುವ ಪುನರ್ವಸತಿ ಕೇಂದ್ರಗಳಿಗೆ/ಶಾಲೆಗಳಿಗೆ/ವಿದ್ಯಾರ್ಥಿ ನಿಲಯಗಳಿಗೆ ಪ್ರತಿ ಯೂನಿಟ್ಟಿಗೆ ೨೫ ಪೈಸೆ ರಿಯಾಯಿತಿಯನ್ನು ನೀಡತಕ್ಕದ್ದು.

೮. **ಸೌರಶಕ್ತಿ ಬಳಕೆಗೆ ರಿಯಾಯಿತಿ:** ಸೌರ ಶಕ್ತಿ ಚಾಲಿತ ವಾಟರ್ ಹೀಟರನ್ನು ಸ್ಥಾಪಿಸಿ, ಬಳಸುವ ಎಲ್.ಟಿ.–೨(ಎ)ಸ್ಥಾಪನಗಳಿಗೆ ಬಳಸಿದ ಪ್ರತಿ ಯೂನಿಟ್ಟಿಗೆ ೫೦ ಪೈಸೆಯಂತೆ ತಿಂಗಳಿಗೆ ಪ್ರತಿ ಸ್ಥಾಪನಕ್ಕೆ ಗರಿಷ್ಠ ಮಿತಿ ರೂ.೫೦/– ರಂತೆ ರಿಯಾಯಿತಿಯನ್ನು ನೀಡಲಾಗುವುದು. ವಸತಿ ಸಂಕೀರ್ಣಗಳು/ಗುಂಪು ಮನೆಗಳು ಇರುವೆಡೆ, ಪ್ರತಿ ಮನೆಗೆ ಕನಿಷ್ಠ ೧೦೦ಲೀಟರ್ ಸಾಮರ್ಥ್ಯದ ಲೆಕ್ಕದಂತೆ **ಸಮಗ್ರವಾಗಿ ಒಂದೇ ಸೌರ ಶಕ್ತಿ ಚಾಲಿತ ವಾಟರ್ ಹೀಟರನ್ನು ಸ್ಥಾಪಿಸಿ ಬಳಸಿದರೆ,** ಪ್ರತಿಯೊಂದು ಮನೆಗೂ ಸೌರ ಶಕ್ತಿ ಚಾಲಿತ ವಾಟರ್ ಹೀಟರ್ ರಿಯಾಯಿತಿಯನ್ನು ನೀಡಲಾಗುವುದು.

೯. ಎಲ್.ಟಿ.–೩ ವಿದ್ಯುತ್ ದರದ ಅಡಿಯಲ್ಲಿ, ಅಂಗವಿಕಲರು ನಡೆಸುವ ಎಸ್.ಟಿ.ಡಿ/ಐ.ಎಸ್.ಡಿ/ಫ್ಯಾಕ್ಸ್ ಸೌಲಭ್ಯವಿರುವ ಸಾರ್ವಜನಿಕ ದೂರವಾಣಿ ಬೂತುಗಳಿಗೆ ಸಂಬಂಧಿಸಿದಂತೆ ಮಾಸಿಕ ಬಿಲ್ಲಿನಲ್ಲಿ ನಿಗದಿತ ಶುಲ್ಕ ಮತ್ತು ವಿದ್ಯುತ್ ಬಳಕೆಯ ಶುಲ್ಕದ ಮೇಲೆ ಶೇಕಡಾ ೨೦ರಷ್ಟು ರಿಯಾಯಿತಿಯನ್ನು ನೀಡಲಾಗುವುದು.

೧೦. ಮಾಪಕ ಅಳವಡಿಸಿರುವ ಎಲ್ಲಾ ನೀರಾವರಿ ಪಂಪುಸೆಟ್ಟು ಸ್ಥಾಪನಗಳಲ್ಲಿ ಕರ್ನಾಟಕ ರಾಜ್ಯದಲ್ಲಿ ವಿದ್ಯುತ್ ಸರಬರಾಜಿಗಾಗಿ ವಿತರಣಾ ಲೈಸೆನ್ಸುದಾರರ ಷರತ್ತುಗಳು ಇದರ ಪರಿಚ್ಛೇದ ೨೩ರ ಪ್ರಕಾರ ಕೆಪ್ಯಾಸಿಟರುಗಳನ್ನು ಅಳವಡಿಸಿದ್ದರೆ, ಅಂತಹ ಸ್ಥಾಪನಗಳಿಗೆ ಯೂನಿಟ್ ಒಂದಕ್ಕೆ ೨ ಪೈಸೆ ರಿಯಾಯಿತಿಯನ್ನು ನೀಡಲಾಗುವುದು.

೧೧. **ವಿದ್ಯುತ್ ಕಾರಕಾಂಶ (ಪವರ್ ಫ್ಯಾಕ್ಟರ್) (ಪಿ.ಎಫ್):**
ಕರ್ನಾಟಕ ರಾಜ್ಯದಲ್ಲಿ ವಿದ್ಯುತ್ ಸರಬರಾಜಿಗಾಗಿ ವಿತರಣಾ ಲೈಸೆನ್ಸುದಾರರ ಷರತ್ತುಗಳು, ಇದರ ಪರಿಚ್ಛೇದ ೨೩ರ ಪ್ರಕಾರ ಮೋಟಿವ್ ಪವರ್ ಬಳಸುವ ಎಲ್.ಟಿ.–೩, ಎಲ್.ಟಿ.–೪, ಎಲ್.ಟಿ.–

೫ ಮತ್ತು ಎಲ್.ಟಿ.–೬ ಪ್ರವರ್ಗದ ಸ್ಥಾಪನಗಳಲ್ಲಿ ಸೂಕ್ತ ಸಾಮರ್ಥ್ಯದ ಕೆಪ್ಯಾಸಿಟರುಗಳನ್ನು ಅಳವಡಿಸತಕ್ಕದ್ದು.

i) ನಿರ್ದಿಷ್ಟಗೊಳಿಸಿರುವ ವಿದ್ಯುತ್ ಕಾರಕಾಂಶದ (ಪವರ್ ಫ್ಯಾಕ್ಟರ್) ಪ್ರಮಾಣ ೦.೮೫. ವಿದ್ಯುತ್ ಕಾರಕಾಂಶದ ಪ್ರಮಾಣ ೦.೮೫ಕ್ಕಿಂತ ಕಡಿಮೆಯಾದಲ್ಲಿ, ೦.೮೫ ಲ್ಯಾಗ್‌ಗಿಂತ ಕಡಿಮೆಯ ಪ್ರತಿ ೦.೦೧ಪಿ.ಎಫ್.ಗೆ ಬಳಕೆಯ ಪ್ರತಿ ಯೂನಿಟ್ಟಿಗೆ ೨ ಪೈಸೆ ಮೇಲು ಕರವನ್ನು (ಸರ್‌ಚಾರ್ಜ್) ವಿಧಿಸಲಾಗುವುದು. ಆದರೂ ಎಲ್.ಟಿ. ಸ್ಥಾಪನಗಳಿಗೆ ಸಂಬಂಧಿಸಿದಂತೆ ಈ ಮೇಲುಕರವು ಪ್ರತಿ ಯೂನಿಟ್ಟಿಗೆ ಗರಿಷ್ಠ ೩೦ ಪೈಸೆ ಮಿತಿಗೆ ಒಳಪಟ್ಟಿರುತ್ತದೆ.

ii) ಪವರ್ ಫ್ಯಾಕ್ಟರನ್ನು ಕೆ.ಡಬ್ಲ್ಯೂ.ಎಚ್/ಕೆ.ವಿ.ಎ.ಎಚ್. ಅನುಪಾತದಲ್ಲಿ ಲೆಕ್ಕ ಮಾಡಿದಾಗ; ಅದನ್ನು ಮೂರು ದಶಾಂಶಗಳವರೆಗೆ (ದಶಾಂಶದ ಮುಂದಿನ ಅಂಕಿಗಳನ್ನು ಉಪೇಕ್ಷಿಸಿ) ನಿರ್ಧರಿಸಲಾಗುವುದು ಮತ್ತು ಅದನ್ನು ಈ ಕೆಳಗೆ ತೋರಿಸಿರುವಂತೆ ಹತ್ತಿರದ ಎರಡನೇ ದಶಾಂಶಕ್ಕೆ ಪೂರ್ಣಾಂಕಗೊಳಿಸಲಾಗುವುದು.

(ಎ) ೦.೮೪೪೯ನ್ನು ೦.೮೪ ಎಂದು ಪೂರ್ಣಾಂಕಗೊಳಿಸಬೇಕು.

(ಬಿ) ೦.೮೪೫೧ ನ್ನು ೦.೮೫ ಎಂದು ಪೂರ್ಣಾಂಕಗೊಳಿಸಬೇಕು.

iii) ಎಲೆಕ್ಟ್ರಾನಿಕ್ ಟ್ರೈವೆಕ್ಟರ್ ಮೀಟರುಗಳ ಸ್ಥಾಪನಗಳಲ್ಲಿ, ಬಿಲ್ ಮಾಡುವ ಉದ್ದೇಶಕ್ಕೆ, ಬಿಲ್ ಅವಧಿಯಲ್ಲಿ ದಾಖಲಾದ ಸರಾಸರಿ ವಿದ್ಯುತ್ ಕಾರಕಾಂಶವನ್ನು ಪರಿಗಣಿಸಲಾಗುವುದು.

iv) ತಪಾಸಣೆಯ ಸಮಯದಲ್ಲಿ ಮೋಟಿವ್ ಪವರ್ ಇರುವ ಎಲ್.ಟಿ.–೩, ಎಲ್.ಟಿ.–೫, ಮತ್ತು ಎಲ್.ಟಿ.–೬ ಸ್ಥಾಪನಗಳಲ್ಲಿ ಅಳವಡಿಸಿರುವ ಕೆಪ್ಯಾಸಿಟರುಗಳ ಸಾಮರ್ಥ್ಯವು, ಕರ್ನಾಟಕ ರಾಜ್ಯದಲ್ಲಿ ವಿದ್ಯುತ್ ಸರಬರಾಜಿಗಾಗಿ ವಿತರಣಾ ಲೈಸೆನ್ಸುದಾರರ ಷರತ್ತುಗಳಲ್ಲಿ ಸೂಚಿಸಿರುವ ಪ್ರಮಾಣಕ್ಕಿಂತ ಕಡಿಮೆ ಇರುವುದು ಕಂಡು ಬಂದರೆ, ಪ್ರತಿ ಯೂನಿಟ್ಟಿಗೆ ೩೦ ಪೈಸೆಯಂತೆ ಮೇಲು ಕರವನ್ನು ವಿಧಿಸಲಾಗುವುದು.

v) **<u>ಎಲೆಕ್ಟ್ರಾನಿಕ್ ಟ್ರೈವೆಕ್ಟರ್ ಮೀಟರುಗಳನ್ನು ಅಳವಡಿಸದಿರುವ</u>** ಸ್ಥಾಪನಗಳಿಗೆ ಸಂಬಂಧಿಸಿದಂತೆ, ಕರ್ನಾಟಕ ರಾಜ್ಯದಲ್ಲಿ ವಿದ್ಯುತ್ ಸರಬರಾಜಿಗಾಗಿ ವಿತರಣಾ ಲೈಸೆನ್ಸುದಾರರ ಷರತ್ತುಗಳ ಪರಿಚ್ಛೇದ ೨೩.೦೧ ಮತ್ತು ೨೩.೦೩ ರ ಪ್ರಕಾರ ನಿರ್ದೇಶಿಸಿರುವಂತೆ ಕೆಪ್ಯಾಸಿಟರುಗಳನ್ನು ಅಳವಡಿಸಿದ ನಂತರವೂ ಸ್ಥಾಪನವನ್ನು ಲೈಸೆನ್ಸುದಾರರು ಕಾಲಕಾಲಕ್ಕೆ ರೇಟಿಂಗ್/ಟೆಸ್ಟಿಂಗ್ ಮಾಡಿದಾಗ ವಿದ್ಯುತ್ ಕಾರಕಾಂಶವು ೦.೮೫ ಲ್ಯಾಗ್‌ಗಿಂತ ಕಡಿಮೆ ಕಂಡು ಬಂದರೆ ಲೈಸೆನ್ಸುದಾರರು ಈ ಬಗ್ಗೆ ನೋಟೀಸು ನೀಡಿ ಮೂರು ತಿಂಗಳ ನಂತರ ಬರುವ ಬಿಲ್ಲಿಂಗ್ ತಿಂಗಳಿನಿಂದ ಮೇಲೆ ತಿಳಿಸಿರುವ ಮೇಲುಕರವನ್ನು ವಿಧಿಸತಕ್ಕದ್ದು. ಬಳಕೆದಾರರು ಹೆಚ್ಚಿನ ಕೆಪ್ಯಾಸಿಟರುಗಳನ್ನು ಅಳವಡಿಸಿ, ಈ ಬಗ್ಗೆ ಲೈಸೆನ್ಸುದಾರರಿಗೆ ಲಿಖಿತ ಮಾಹಿತಿ ನೀಡುವವರೆಗೆ ದಂಡವನ್ನು

ವಿಧಿಸಲಾಗುತ್ತದೆ. ಎಲೆಕ್ಟ್ರಾನಿಕ್ ಟ್ರೈವೆಕ್ಟರ್ ಮಾಪಕವನ್ನು ಅಳವಡಿಸಿರುವ ಎಲ್.ಟಿ. ಸ್ಥಾಪನಗಳಿಗೂ ಸಹ ಇದು ಅನ್ವಯಿಸುತ್ತದೆ.

೧೨. ಕರ್ನಾಟಕ ರಾಜ್ಯದಲ್ಲಿ ವಿದ್ಯುತ್ ಸರಬರಾಜಿಗಾಗಿ ವಿತರಣಾ ಲೈಸೆನ್ಸುದಾರರ ಷರತ್ತುಗಳ ಪರಿಚ್ಛೇದ ೨೩ ರ ಪ್ರಕಾರ, ಎಲ್ಲಾ ಹೊಸ ನೀರಾವರಿ ಪಂಪುಸೆಟ್ಟು ಬಳಕೆದಾರರು ವಿದ್ಯುತ್ ಸಂಪರ್ಕ ಪಡೆಯುವುದಕ್ಕೆ ಮುಂಚೆ ತಮ್ಮ ಸ್ಥಾಪನಗಳಿಗೆ ಅಗತ್ಯ ಸಾಮರ್ಥ್ಯದ ಕೆಪ್ಯಾಸಿಟರುಗಳನ್ನು ಅಳವಡಿಸತಕ್ಕದ್ದು.

೧೩. ಹಾಲಿ ಸಂಪರ್ಕ ಇರುವ ಎಲ್ಲಾ ನೀರಾವರಿ ಪಂಪುಸೆಟ್ಟು ಬಳಕೆದಾರರೂ ಸಹ ಕರ್ನಾಟಕ ರಾಜ್ಯದಲ್ಲಿ ವಿದ್ಯುತ್ ಸರಬರಾಜಿಗಾಗಿ ವಿತರಣಾ ಲೈಸೆನ್ಸುದಾರರ ಷರತ್ತುಗಳ ಪರಿಚ್ಛೇದ ೨೩ರ ಪ್ರಕಾರ ತಮ್ಮ ಸ್ಥಾಪನಗಳಿಗೆ ಅಗತ್ಯ ಸಾಮರ್ಥ್ಯದ ಕೆಪ್ಯಾಸಿಟರುಗಳನ್ನು ಅಳವಡಿಸತಕ್ಕದ್ದು. ತಪ್ಪಿದಲ್ಲಿ **ಪ್ರತಿ ಅಶ್ವಶಕ್ತಿಗೆ, ವಾರ್ಷಿಕ** ರೂ.೬೦/–**ರಂತೆ ಪಿ.ಎಫ್. ಮೇಲುಕರವನ್ನು** ವಿಧಿಸಲಾಗುವುದು. ಕೆಪ್ಯಾಸಿಟರುಗಳನ್ನು ಅಳವಡಿಸದಿರುವುದು/ತೆಗೆದಿರುವುದು ಕಂಡುಬಂದಲ್ಲಿ ಮೇಲೆ ತಿಳಿಸಿರುವಂತೆ ದಂಡವನ್ನು (ರೂ.೬೦/ಅ.ಶ./ವಾರ್ಷಿಕ) ವಿಧಿಸಲಾಗುವುದು.

೧೪. ಅರೆ ಖಾಯಂ ಸ್ವರೂಪದ, ಖಾಯಂ ವೈರಿಂಗ್ ಹಾಗೂ ಒಂದು ವರ್ಷಕ್ಕೆ ಕಡಿಮೆ ಇಲ್ಲದಂತೆ ಪರವಾನಗಿ (ಲೈಸೆನ್ಸ್) ಹೊಂದಿರುವ ಅರೆ ಖಾಯಂ ಚಿತ್ರಮಂದಿರಗಳನ್ನು ವಾಣಿಜ್ಯ ವಿದ್ಯುತ್ ದರದ ಅಡಿಯಲ್ಲಿ (ಅಂದರೆ ಎಲ್.ಟಿ.–೩) ಬಿಲ್ ಮಾಡಲಾಗುವುದು.

೧೫. ಊರಿಂದ ಊರಿಗೆ ಸಿನಿಮಾ ಸಲಕರಣೆಗಳನ್ನು ತೆಗೆದುಕೊಂಡು ಹೋಗಿ ಸಿನಿಮಾ ಪ್ರದರ್ಶಿಸುವ ಸಂಚಾರಿ ಸಿನಿಮಾ ಚಿತ್ರಮಂದಿರಗಳು ಹಾಗೂ ಹೊರಾಂಗಣ ಚಿತ್ರೀಕರಣ ಘಟಕಗಳಿಗೆ (ಎಲ್.ಟಿ.–೭) ತಾತ್ಕಾಲಿಕ ವಿದ್ಯುತ್ ದರವನ್ನು ವಿಧಿಸಲಾಗುವುದು.

೧೬. ನೀರಾವರಿ ಪಂಪುಸೆಟ್ಟು ವಿದ್ಯುತ್ ದರದ ಅಡಿಯಲ್ಲಿ ಸರಬರಾಜಾಗುವ ವಿದ್ಯುತ್ತನ್ನು ನೀರಾವರಿ ಪಂಪುಸೆಟ್ಟಿನ ಅರ್ಜಿ/ನೀರು ಹಕ್ಕಿನ ಪತ್ರದಲ್ಲಿ ನಮೂದಿಸಿರುವಂತೆ, ತಮ್ಮ ಸ್ವಂತ ಭೂಮಿಯ ನೀರಾವರಿಗೆ ನೀರು ಹಾಯಿಸಿಕೊಳ್ಳಲು ಹಾಗೂ ಸದುದ್ದೇಶಪೂರಿತ ಕೃಷಿ ಚಟುವಟಿಕೆಗೆ ಮಾತ್ರ ಬಳಸತಕ್ಕದ್ದು. ಈ ನಿಯಮವನ್ನು ಉಲ್ಲಂಘಿಸುವ ನೀರಾವರಿ ಪಂಪುಸೆಟ್ಟು ಬಳಕೆಯನ್ನು ಲಭ್ಯವಿರುವ ದಾಖಲಿತ ಪೂರ್ಣ ವಿದ್ಯುತ್ ಬಳಕೆಯನ್ನು ಸೂಕ್ತ ಕೈಗಾರಿಕೆ/ವಾಣಿಜ್ಯ ವಿದ್ಯುತ್ ದರದ ಅಡಿಯಲ್ಲಿ ಅಥವಾ ಕರ್ನಾಟಕ ರಾಜ್ಯದಲ್ಲಿ ವಿದ್ಯುತ್ ಸರಬರಾಜಿಗಾಗಿ ವಿತರಣಾ ಲೈಸೆನ್ಸುದಾರರ ಷರತ್ತುಗಳ ಪರಿಚ್ಛೇದ ೪೨.೦೬ ರ ಅಡಿಯಲ್ಲಿ ಒದಗಿಸಿರುವ ದರ ಪಟ್ಟಿಯ ಪ್ರಕಾರ ಗಣನೆ ಮಾಡಿ ಬಿಲ್ ಮಾಡಲಾಗುವುದು.

೧೭. ಕೃಷಿ ಉದ್ದೇಶಕ್ಕಾಗಿ ಪಂಪು ಮಾಡಿದ ನೀರನ್ನು, ಬಳಕೆದಾರರು ಸದುದ್ದೇಶದ ಕುಡಿಯುವ ಬಳಕೆಗಾಗಿ ಮತ್ತು ಕೃಷಿಯ ಜೊತೆಗೆ ಅವರಿಗೆ ಸೇರಿದ ಪ್ರಾಣಿ, ಪಕ್ಷಿ, ಕೋಳಿ ಸಾಕಾಣಿಕೆ ಕೇಂದ್ರ, ಡೈರಿ ಫಾರಂ ಹಾಗೂ ಮೀನು ಫಾರಂಗಳಿಗೂ ಉಪಯೋಗಿಸಬಹುದು.

೧೮. ಲೈಸೆನ್ಸುದಾರರ ಅನುಮೋದನೆಯೊಡನೆ ನೀರಾವರಿ ಪಂಪುಸೆಟ್ಟು ಸ್ಥಾಪನಗಳ ಮೋಟಾರನ್ನು ಕೃಷಿಯ ಇತರೆ ನಿರ್ವಹಣೆಗಳಾದ ಕಬ್ಬು ಅರೆಯುವ ಕ್ರಷರ್, ಕಾಫಿ ಪಲ್ಪಿಂಗ್ ಇತ್ಯಾದಿಗಳಿಗೆ ಉಪಯೋಗಿಸಬಹುದು. ಅಂತಹ ಕೆಲಸಕ್ಕೆ ಬಳಸಿದ ವಿದ್ಯುತ್ತನ್ನು ಪರ್ಯಾಯ ಸ್ವಿಚ್ ಮುಖಾಂತರ ಪ್ರತ್ಯೇಕವಾಗಿ ಮಾಪಕ ಅಳವಡಿಸಿ ಎಲ್.ಟಿ.ಕೈಗಾರಿಕಾ ವಿದ್ಯುತ್ ದರ ಅನುಸೂಚಿಯಂತೆ (ವಿದ್ಯುತ್ ಬಳಕೆ ಶುಲ್ಕ ಮಾತ್ರ) ಬಿಲ್ ಮಾಡಲಾಗುವುದು. ಕೃಷಿ ಹಾಗೂ ಇತರೆ ಪರ್ಯಾಯ ನಿರ್ವಹಣೆಗಳಿಗೆ ಬಳಸಿದ ವಿದ್ಯುತ್ತನ್ನು ಒಂದೇ ವಿದ್ಯುತ್ ಮೀಟರಿನಲ್ಲಿ ದಾಖಲಿಸಿದ ಸಂದರ್ಭದಲ್ಲಿ ಸದರಿ ಉಪವಿಭಾಗದ ಅಧಿಕಾರಿಯಿಂದ ದೃಢೀಕರಿಸಲ್ಪಟ್ಟಂತೆ (ಪರ್ಯಾಯ ಉಪಯೋಗದ ಆ ವಿದ್ಯುತ್ತನ್ನು ಅ ತಿಂಗಳಲ್ಲಿ ಬಳಸಿದ ಸರಾಸರಿ ನೀರಾವರಿ ಪಂಪುಸೆಟ್ಟು ಬಳಕೆಯ ಪ್ರಮಾಣದಿಂದ ಕಳೆದು) ಲೆಕ್ಕ ಮಾಡಿ ಬಿಲ್ ಮಾಡತಕ್ಕದ್ದು.

೧೯. ಪಂಪುಕೊಠಡಿ ಮತ್ತು ಬಾವಿ ಬೆಳಕಿನ ವ್ಯವಸ್ಥೆಗಾಗಿ ಪ್ರತಿ ಪಂಪುಸೆಟ್ಟಿಗೆ ೪೦ ವ್ಯಾಟ್‌ಗಳ ಮಿತಿಗೆ ಒಳಪಟ್ಟಂತೆ ೨ ಬಲ್ಬ್‌ಗಳಿಗೆ ವಿದ್ಯುತ್ ಉಪಯೋಗಿಸಿಕೊಳ್ಳಲು ಬಳಕೆದಾರರಿಗೆ ಅನುಮತಿ ಇರುತ್ತದೆ.

೨೦. ಎಲ್ಲಾ ನೀರಾವರಿ ಪಂಪುಸೆಟ್ಟು ಸ್ಥಾಪನೆಗಳಿಗೆ ಕನಿಷ್ಠ ಮೂರು ತಿಂಗಳಿಗೊಮ್ಮೆ ಬಿಲ್ ಮಾಡತಕ್ಕದ್ದು.

೨೧. ವೆಲ್ಡಿಂಗ್ ಟ್ರಾನ್ಸ್‌ಫಾರ್ಮರುಗಳಿಗೆ ಸಂಬಂಧಿಸಿದಂತೆ ಸಂಪರ್ಕಿತ ವಿದ್ಯುತ್ ಪ್ರಮಾಣವನ್ನು ಹೀಗೆ ಪರಿಗಣಿಸಬೇಕು :

(ಎ) ಐ.ಎಸ್.೧೮೫೧ ರ ಪ್ರಕಾರ ನಾಮಫಲಕದಲ್ಲಿ ನಿರ್ದಿಷ್ಟವಾಗಿ ಸೂಚಿಸಿರುವ ಕೆ.ವಿ.ಎ.ಗಳ ಗರಿಷ್ಠ ಸಾಮರ್ಥ್ಯದ ಅರ್ಧ,

ಅಥವಾ

(ಬಿ) ಲೈಸೆನ್ಸುದಾರರು ರೇಟಿಂಗ್ ಮಾಡಿದ ಸಮಯದಲ್ಲಿ ದಾಖಲು ಮಾಡಿರುವ ಕೆ.ವಿ.ಎ.ಗಳ ಗರಿಷ್ಠ ಸಾಮರ್ಥ್ಯದ ಅರ್ಧ, **ಇವುಗಳಲ್ಲಿ ಯಾವುದು ಹೆಚ್ಚಿನದೋ, ಅದು.**

೨೨. ಎಲ್.ಟಿ.–೩, ಎಲ್.ಟಿ.–೫ ವಿದ್ಯುತ್ ದರ ಅನುಸೂಚಿಯ ಅಡಿಯಲ್ಲಿ, ಕೈಗಾರಿಕಾ/ವಾಣಿಜ್ಯ ಆವರಣದಲ್ಲಿ ದೀಪ, ತಾಪನ, ಹವಾ ನಿಯಂತ್ರಣ, ಆವರಣ ದೀಪ ವ್ಯವಸ್ಥೆ ಹಾಗೂ ನೀರು ಸರಬರಾಜಿಗಾಗಿ ಉಪಯೋಗಿಸಬಹುದು.

೨೩. ಲೈಸೆನ್ಸುದಾರರ ವಿದ್ಯುದೀಕರಣ ಕಾರ್ಯಕ್ರಮದ ಅಡಿಯಲ್ಲಿ ಬರುವ ಗ್ರಾಮಗಳ ವಿದ್ಯುದೀಕರಣ ಸಂದರ್ಭದಲ್ಲಿ, ಮೊದಲ ಬಾರಿಗೆ ಬೀದಿ ದೀಪ (ಫ್ಲೋರಸೆಂಟ್ ಜೋಡಣೆ) ಗಳನ್ನು ಲೈಸೆನ್ಸುದಾರರೇ ಒದಗಿಸತಕ್ಕದ್ದು.

**ಉಳಿದ ಎಲ್ಲಾ ಪ್ರಕರಣಗಳಲ್ಲಿ ಬ್ರಾಕೆಟ್, ಹಿಡಿಕೆಗಳು ಇತ್ಯಾದಿಗಳನ್ನು ಒಳಗೊಂಡ ಜೋಡಣೆಯ ಸಂಪೂರ್ಣ ವೆಚ್ಚವನ್ನು ಮತ್ತು ಬದಲಾಯಿಸುವ, ಸೇರಿಸುವ, ಪರಿವರ್ತನೆ ಮಾಡುವ ಬಗ್ಗೆ**

**ಲೈಸೆನ್ಸುದಾರರು ನಿಗದಿಪಡಿಸಿದ ಕೂಲಿ ದರವನ್ನು ಅಂತಹ ಕೋರಿಕೆಯನ್ನು ಮಾಡುವ ಸಂಸ್ಥೆಗಳೇ ಭರಿಸತಕ್ಕದ್ದು.**

೨೪. ಫಿಟ್ಟಿಂಗ್‌ಗಳ ದೋಷಪೂರಿತ ಲ್ಯಾಂಪುಗಳು, ಫಿಟ್ಟಿಂಗುಗಳು, ಬದಲಾವಣೆಗೊಳ್ಳಬೇಕಾದಂತಹ ಭಾಗಗಳನ್ನು ಸಂಬಂಧಿತ ಗ್ರಾಮಪಂಚಾಯಿತಿ, ಪುರಸಭೆ ಅಥವಾ ಮುನಿಸಿಪಾಲಿಟಿಯೇ ಸರಬರಾಜು ಮಾಡತಕ್ಕದ್ದು.

೨೫. ಬಿಲ್ಲಿಂಗ್ ಉದ್ದೇಶಕ್ಕಾಗಿ, ಕಿ.ವಾಟ್/ಎಚ್.ಪಿ.ಯ ಭಿನ್ನಾಂಶವನ್ನು ಸಮೀಪದ (೪) ಕಿ.ವಾಟ್/ಎಚ್.ಪಿ ಗೆ ಪರಿವರ್ತಿಸಿಕೊಳ್ಳತಕ್ಕದ್ದು ಮತ್ತು ನೀರಾವರಿ ಪಂಪುಸೆಟ್ಟು ಒಳಗೊಂಡಂತೆ ಎಲ್ಲಾ ಎಲ್.ಟಿ. ಸ್ಥಾಪನಗಳಿಗೆ ಕನಿಷ್ಠ ೧ ಕಿ.ವಾಟ್/೧ ಎಚ್.ಪಿ ಗೆ ಬಿಲ್ಲು ಮಾಡತಕ್ಕದ್ದು. **ಬೀದಿ ದೀಪದ ಸ್ಥಾಪನಗಳ ಪ್ರಕರಣದಲ್ಲಿ, ಬಿಲ್ಲಿಂಗ್ ಉದ್ದೇಶಕ್ಕಾಗಿ, ಕೆ,ಡಬ್ಲ್ಯು. ಭಿನ್ನಾಂಶವನ್ನು ಸಮೀಪದ ಕಾಲು ಕಿ.ವಾಟ್‌ಗೆ ಪರಿವರ್ತಿಸಿಕೊಳ್ಳತಕ್ಕದ್ದು ಹಾಗೂ ಕನಿಷ್ಟ ಬಿಲ್ಲಿಂಗ್‌ನ್ನು** (೪) **ಕೆ,ಡಬ್ಲ್ಯು ಗೆ ಮಾಡತಕ್ಕದ್ದು.**

೨೬. **ಋತುಕಾಲಿಕ ಕೈಗಾರಿಕೆಗಳು :**

ಎ. ಋತುಕಾಲಿಕ ಕೈಗಾರಿಕೆ ಸೌಲಭ್ಯವನ್ನು ಹೊಂದಲು ಇಚ್ಛಿಸುವ ಕೈಗಾರಿಕೆಗಳು, ವಿದ್ಯುಚ್ಛಕ್ತಿ ದರಗಳ ಸಾಮಾನ್ಯ ಷರತ್ತುಗಳು ಹಾಗೂ ನಿಬಂಧನೆಗಳಲ್ಲಿನ (ಎಚ್.ಟಿ. ಮತ್ತು ಎಲ್.ಟಿ. ಎರಡಕ್ಕೂ ಅನ್ವಯಿಸುತ್ತದೆ) ಪ್ಯಾರಾ ಸಂಖ್ಯೆ ೨೪ ರ ನಿಯಮಗಳಿಗೆ ಬದ್ಧರಾಗಿರತಕ್ಕದ್ದು.

ಬಿ. ಋತುಕಾಲಿಕ ರಿಯಾಯಿತಿಯನ್ನು ಪಡೆಯಲು ಇಚ್ಛಿಸುವ ಕೈಗಾರಿಕೆಗಳು ತಮ್ಮ ಸ್ಥಾಪನಕ್ಕೆ ಎಲೆಕ್ಟ್ರಾನಿಕ್ ಟ್ರೈವೆಕ್ಟರ್ ಮೀಟರನ್ನು ಅಳವಡಿಸಿಕೊಂಡಿರತಕ್ಕದ್ದು.

ಸಿ. ಋತುಕಾಲಿಕ ಅವಧಿಯ ತಿಂಗಳಲ್ಲಿ, ನಿಗದಿತ ಶುಲ್ಕ ಹಾಗೂ ವಿದ್ಯುತ್ ಬಳಕೆ ಶುಲ್ಕವು ಮಾಸಿಕ ಶುಲ್ಕವಾಗಿರುತ್ತದೆ. ಅಕಾಲಿಕ ತಿಂಗಳಲ್ಲಿ, ನಿಗದಿತ ಶುಲ್ಕದ ಶೇ.೫೦ ಹಾಗೂ ವಿದ್ಯುತ್ ಬಳಕೆ ಶುಲ್ಕವು ಮಾಸಿಕ ಶುಲ್ಕವಾಗಿರುತ್ತದೆ.

## ವಿದ್ಯುತ್ ದರ ಅನುಸೂಚಿ ಎಲ್.ಟಿ.–೧

ಭಾಗ್ಯಜ್ಯೋತಿ ಮತ್ತು ಕುಟೀರಜ್ಯೋತಿ ಯೋಜನೆಯ ಅಡಿಯಲ್ಲಿ ವಿದ್ಯುತ್ ಸರಬರಾಜು ನೀಡಿರುವ ಸ್ಥಾಪನಗಳಿಗೆ ಅನ್ವಯಿಸುತ್ತದೆ.

**ದರ ಅನುಸೂಚಿ**

| | |
|---|---|
| **ವಿದ್ಯುತ್ ಬಳಕೆ ಶುಲ್ಕ:** (ಸೇವಾ ಮಾರ್ಗ ವೆಚ್ಚ ಸಂಬಂಧಿತ ವಸೂಲಿಯನ್ನೂ ಒಳಗೊಂಡು) | ಇಲ್ಲ (*) (ಕರ್ನಾಟಕ ಸರ್ಕಾರದಿಂದ ಸಂಪೂರ್ಣ ಅನುದಾನಕ್ಕೆ ಒಳಪಟ್ಟಿದೆ.) |

ಎಲ್.ಟಿ.–೧ ಪ್ರವರ್ಗಕ್ಕೆ ಆಯೋಗವು ನಿರ್ಧರಿಸಿರುವ ವಿದ್ಯುತ್ ದರ ಪ್ರತಿ ಯೂನಿಟ್ಟಿಗೆ ೫೪೧ ಪೈಸೆಗಳು.

**(*) ಕರ್ನಾಟಕ ಸರ್ಕಾರವು ಭಾಗ್ಯಜ್ಯೋತಿ/ಕುಟೀರಜ್ಯೋತಿ ಸ್ಥಾಪನಗಳ ವಿದ್ಯುತ್ ಸರಬರಾಜಿನ ಪೂರ್ಣ ವೆಚ್ಚವನ್ನು ಭರಿಸುವುದರಿಂದ, ಈ ಪ್ರವರ್ಗದ ಗ್ರಾಹಕರು ಪಾವತಿಸಬೇಕಾದ ವಿದ್ಯುತ್ ಬಳಕೆಯ ಶುಲ್ಕವನ್ನು ಇಲ್ಲ ಎಂದು ತೋರಿಸಲಾಗಿದೆ. ಒಂದು ವೇಳೆ ಕರ್ನಾಟಕ ಸರ್ಕಾರವು ಅನುಮೋದಿಸಿರುವ ಈ ಅನುದಾನವನ್ನು ಮುಂಗಡವಾಗಿ ಬಿಡುಗಡೆ ಮಾಡದಿದ್ದಲ್ಲಿ, ಆಯಾ ಗ್ರಾಹಕರಿಂದಲೇ ಬಳಕೆಯ ಪ್ರತಿ ಯೂನಿಟಿಗೆ ರೂ.೫.೪೧ ರಂತೆ ಮಾಸಿಕ ಕನಿಷ್ಠ ರೂ.೩೦.೦೦ ರ ಮಿತಿಗೆ ಒಳಪಟ್ಟು ವಿದ್ಯುತ್ ಬಳಕೆ ಶುಲ್ಕವನ್ನು ವಸೂಲು ಮಾಡತಕ್ಕದ್ದು.**

**ಟಿಪ್ಪಣಿ:**

ಭಾಗ್ಯಜ್ಯೋತಿ/ಕುಟೀರಜ್ಯೋತಿ ಸ್ಥಾಪನಗಳಲ್ಲಿ, ಒಂದಕ್ಕಿಂತ ಹೆಚ್ಚು ಪಾಯಿಂಟುಗಳಿದ್ದರೆ ಅಥವಾ ಮಾಸಿಕ ಬಳಕೆಯು ೧೮ ಯೂನಿಟ್ಟುಗಳನ್ನು ಮೀರಿದ್ದರೆ, ಅಂತಹ ಸ್ಥಾಪನಗಳಿಗೆ ವಿದ್ಯುತ್ ದರ ಅನುಸೂಚಿ ಎಲ್.ಟಿ. – ೨(ಎ) ಪ್ರಕಾರ ಬಿಲ್ ಮಾಡಬೇಕಾಗುತ್ತದೆ.

## ವಿದ್ಯುತ್ ದರ ಅನುಸೂಚಿ ಎಲ್.ಟಿ.–೨(ಎ)

ನಿವಾಸ ಗೃಹಗಳ ದೀಪ ಬಳಕೆ/ಸಂಯುಕ್ತ ದೀಪ. ತಾಪನ ಮತ್ತು ಮೋಟಿವ್ ಪವರ್‌ನ ಮಿಶ್ರ ವಿದ್ಯುತ್ ಹೊರೆಗಳನ್ನೊಳಗೊಂಡ ವಾಸ ಗೃಹಗಳಿಗೆ ಹಾಗೂ, ದೀಪ ಬಳಕೆ/ಮಿಶ್ರ ವಿದ್ಯುತ್ ಬಳಕೆ ಮಾಡುವ ಗೃಹಗಳಾಗಿದ್ದು, ಅದರ ಒಂದು ಭಾಗವನ್ನು ಈ ಕೆಳಗಿನ ಉದ್ದೇಶಗಳಿಗೆ ಉಪಯೋಗಿಸುತ್ತಿದ್ದರೆ:

(ಎ) ಕೈ ಮಗ್ಗದ ನೇಯ್ಗೆ (ಬಿ) ೨೦೦ ವಾಟ್‌ಗಳವರೆಗಿನ ಸಾಮರ್ಥ್ಯದ ಮೋಟಾರನ್ನು ಬಳಸುವ ಸಿಲ್ಕ್ ರೇರಿಂಗ್, ರೀಲಿಂಗ್ ಮತ್ತು ಆರ್ಟಿಸನ್ಸ್ (ಸಿ)(i) ಇಂಜಿನಿಯರಿಂಗ್, (ii) ವಾಸ್ತುಶಿಲ್ಪ (iii) ವೈದ್ಯಕೀಯ (iv) ಜ್ಯೋತಿಷ್ಯ (v) ಕಾನೂನು (vi) ಆದಾಯ ತೆರಿಗೆ (vii) ಚಾರ್ಟರ್ಡ್ ಅಕೌಂಟೆನ್ಸಿ – ವಿಷಯಗಳ ಬಗ್ಗೆ ಸಮಾಲೋಚನೆ ನಡೆಸುತ್ತಿದ್ದರೆ, (ಡಿ) ಬೆರಳಚ್ಚು ಉದ್ಯೋಗ (ಇ) ಹೊಲಿಗೆ (ಎಫ್) ಅಂಚೆ ಕಚೇರಿ (ಜಿ) ಚಿನ್ನದ ಕುಶಲ ಕೆಲಸ (ಎಚ್) ಚೌಕಿ ರೇರಿಂಗ್ (ಐ) ಅಭ್ಯಾಗತ ಅತಿಥಿ (ಜೆ) ವ್ಯಕ್ತಿಗತ ಗಣಕ ಯಂತ್ರಗಳು (ಕೆ) ಧೋಬಿ (ಎಲ್) ಕರ ನಿರ್ವಹಿತ ಮುದ್ರಣಾಲಯ (ಎಂ) ಸೌಂದರ್ಯವರ್ಧಕ ಕೇಂದ್ರಗಳು (ಎನ್) ವಸತಿ ಸಂಕೀರ್ಣಗಳಲ್ಲಿ

/ಗೃಹಗಳಲ್ಲಿ ಸದುದ್ದೇಶದಿಂದ ಬಳಸುವ ನೀರು ಸರಬರಾಜು ಮತ್ತು ಲಿಫ್ಟ್ ಸ್ಥಾಪನಗಳು (ಒ) ೧೨೦ ವಾಟ್‌ಗೆ ಮಿತಿಗೊಳಿಸಿದಂತೆ ಫಾರಂ ಹೌಸ್ ಮತ್ತು ಆವರಣ ದೀಪಗಳು (ಪಿ) ಒಂದು ಹೆಚ್.ಪಿ ಯ ಮಿತಿಗೊಳಿಸಿದಂತೆ ಮೇವು ಕತ್ತರಿಸುವ ಯಂತ್ರಗಳು ಮತ್ತು ಹಾಲು ಕರೆಯುವ ಯಂತ್ರಗಳಿಗೆ ಈ ವಿದ್ಯುತ್ ದರಗಳು ಅನ್ವಯಿಸುತ್ತವೆ.

ಜೊತೆಗೆ ಇದು ರಾಜ್ಯ/ಕೇಂದ್ರ ಸರ್ಕಾರ ಮತ್ತು ಸ್ಥಳೀಯ ಸಂಸ್ಥೆಗಳು ನಡೆಸುವ (i) ಆಸ್ಪತ್ರೆಗಳು, ಔಷಧಾಲಯಗಳು ಮತ್ತು ಆರೋಗ್ಯ ಕೇಂದ್ರಗಳ ಸ್ಥಾಪನಗಳು (ii) ಅಂಗವಿಕಲರು, ವೃದ್ಧರು, ನಿರಾಶ್ರಿತರು ಮತ್ತು ಅನಾಥರಿಗೆ ನಡೆಸುವ ಗೃಹಗಳು, ಶಾಲೆಗಳು, ವಿದ್ಯಾರ್ಥಿ ನಿಲಯಗಳು ಮತ್ತು (iii) ಧರ್ಮದತ್ತಿ ಸಂಸ್ಥೆಗಳು ನಡೆಸುವ ಪುನರ್ ವಸತಿ ಕೇಂದ್ರಗಳು ಹಾಗೂ ಏಯ್ಡ್ಸ್ ಮತ್ತು ಡ್ರಗ್ಸ್‌ಗೆ ತುತ್ತಾದವರ ಪುನರ್ ವಸತಿ ಕೇಂದ್ರಗಳು (iv) ಒಂದೇ ಮಾಪಕ ಇರುವ ರೈಲ್ವೆ ಸಿಬ್ಬಂದಿ ಗೃಹಗಳು (v) ಅಗ್ನಿ ಶಾಮಕ ಕೇಂದ್ರಗಳಿಗೆ ಈ ವಿದ್ಯುತ್ ದರಗಳು ಅನ್ವಯಿಸುತ್ತವೆ.

ಇವುಗಳ ಜೊತೆಗೆ (ಎ) ದೇವಾಲಯಗಳು, ಮಸೀದಿಗಳು, ಇಗರ್ಜಿಗಳು, ಗುರುದ್ವಾರಗಳು, ಆಶ್ರಮಗಳು, ಮಠಗಳು, ಧಾರ್ಮಿಕ ಮತ್ತು ಧರ್ಮಾದಾಯ ಸಂಸ್ಥೆಗಳು (ಬಿ) ಕ್ಷ – ಕಿರಣ ಘಟಕಗಳನ್ನೊಳಗೊಂಡ ಧರ್ಮಾದಾಯ ಸಂಸ್ಥೆಗಳಿಂದ ನಡೆಸಲ್ಪಡುವ ಆಸ್ಪತ್ರೆಗಳು, ಔಷಧಾಲಯಗಳು ಮತ್ತು ಆರೋಗ್ಯ ಕೇಂದ್ರಗಳು (ಸಿ) ಜೈಲ್‌ಗಳು ಮತ್ತು ಬಂದೀಖಾನೆಗಳು (ಡಿ) ರಾಜ್ಯ/ಕೇಂದ್ರ ಸರ್ಕಾರ, ಸ್ಥಳೀಯ ಸಂಸ್ಥೆಗಳು ನಡೆಸುವ ಶಾಲೆಗಳು, ಕಾಲೇಜುಗಳು ಮತ್ತು ಶಿಕ್ಷಣ ಸಂಸ್ಥೆಗಳು (ಇ) ಸೆಮಿನರಿಗಳು (ಎಫ್) **ಸರ್ಕಾರ, ಶಿಕ್ಷಣ ಸಂಸ್ಥೆಗಳು, ಸಾಂಸ್ಕೃತಿಕ, ವೈಜ್ಞಾನಿಕ ಹಾಗೂ ಧರ್ಮದತ್ತಿ ಸಂಸ್ಥೆಗಳು ನಡೆಸುವ ಹಾಸ್ಟೆಲುಗಳು** (ಜಿ) ಸರ್ಕಾರಿ ಕಟ್ಟಡಗಳಲ್ಲಿ ನಡೆಸುವ ಅಥವಾ ರಾಜ್ಯ/ಕೇಂದ್ರ ಸರ್ಕಾರ, ಧಾರ್ಮಿಕ/ ಧರ್ಮಾದಾಯ ಸಂಸ್ಥೆಗಳು ನಡೆಸುವ ಅತಿಥಿ ಗೃಹಗಳು/ಪ್ರವಾಸಿ ಮಂದಿರಗಳು (ಎಚ್) ಸಾರ್ವಜನಿಕ ಗ್ರಂಥಾಲಯಗಳು (ಐ) ಸಿಲ್ಕ್ ರೇರಿಂಗ್ (ಜೆ) ವಸ್ತು ಸಂಗ್ರಹಾಲಯ (ಕೆ) ಪುರಾತತ್ವ ಇಲಾಖೆಯ ಚಾರಿತ್ರಿಕ ಸ್ಮಾರಕಗಳ ಸ್ಥಾಪನಗಳು (ಎಲ್) ಅಂಗವಿಕಲರು ನಡೆಸುವ ಐ.ಎಸ್.ಡಿ/ಎಸ್.ಟಿ.ಡಿ/ಫ್ಯಾಕ್ಸ್ ಸೌಲಭ್ಯವಿಲ್ಲದ ಸಾರ್ವಜನಿಕ ದೂರವಾಣಿ ಕೇಂದ್ರಗಳು (ಎಂ) ಸುಲಭ್/ನಿರ್ಮಲ ಶೌಚಾಲಯಗಳು (ಎನ್) ವಿದ್ಯುತ್ ದೀಪ ಮಾತ್ರ ಇರುವ ವಿಶ್ವ ಶೆಡ್ಡುಗಳಿಗೆ ಈ ವಿದ್ಯುತ್ ದರಗಳು ಅನ್ವಯಿಸುತ್ತವೆ.

## ಎಲ್.ಟಿ.–೨(ಎ)(i)

## ನಗರ ಪಾಲಿಕೆ ಹಾಗೂ ನಗರ ಮುನಿಸಿಪಲ್ ಪಾಲಿಕೆಗೆ ಒಳಪಡುವ ಪ್ರದೇಶಗಳಿಗೆ ಅನ್ವಯಿಸುತ್ತದೆ.

**ದರ ಅನುಸೂಚಿ**

| **ಮಾಸಿಕ ನಿಗದಿತ ಶುಲ್ಕ:** | |
|---|---|
| ಮೊದಲ ಕಿಲೋವಾಟ್‌ಗೆ | ಪ್ರತಿ ಕಿಲೋವಾಟ್‌ಗೆ ರೂ.**೨೫/–** |
| ಪ್ರತಿ ಹೆಚ್ಚುವರಿ ಕಿಲೋವಾಟ್‌ಗೆ | ಪ್ರತಿ ಕಿಲೋವಾಟ್‌ಗೆ ರೂ.**೩೫/–** |

| **ವಿದ್ಯುತ್ ಬಳಕೆ ಶುಲ್ಕ:** | |
|---|---|
| ೦–೩೦ ಯೂನಿಟ್ಟುಗಳಿಗೆ<br>(ಜೀವನಾಧಾರ ವಿದ್ಯುತ್ ಬಳಕೆ) | ಪ್ರತಿ ಯೂನಿಟ್ಟಿಗೆ **೨೭೦ ಪೈಸೆ** |
| ೩೧–೧೦೦ ಯೂನಿಟ್ಟುಗಳು | ಪ್ರತಿ ಯೂನಿಟ್ಟಿಗೆ **೪೦೦ ಪೈಸೆ** |
| ೧೦೧–೨೦೦ ಯೂನಿಟ್ಟುಗಳು | ಪ್ರತಿ ಯೂನಿಟ್ಟಿಗೆ **೫೪೦ ಪೈಸೆ** |
| ೨೦೦ ಯೂನಿಟ್ಟುಗಳನ್ನು ಮೀರಿದ ಬಳಕೆಗೆ | ಪ್ರತಿ ಯೂನಿಟ್ಟಿಗೆ **೬೪೦ ಪೈಸೆ** |

### ಎಲ್.ಟಿ.–೨(ಎ)(ii)

### ಗ್ರಾಮ ಪಂಚಾಯಿತಿಗಳಿಗೆ ಒಳಪಡುವ ಪ್ರದೇಶಗಳಿಗೆ ಅನ್ವಯಿಸುತ್ತದೆ.

**ದರ ಅನುಸೂಚಿ**

| **ಮಾಸಿಕ ನಿಗದಿತ ಶುಲ್ಕ:** | |
|---|---|
| ಮೊದಲ ಕಿಲೋವಾಟ್‌ಗೆ | ಪ್ರತಿ ಕಿಲೋವಾಟ್‌ಗೆ ರೂ.**೧೫/–** |
| ಪ್ರತಿ ಹೆಚ್ಚುವರಿ ಕಿಲೋವಾಟ್‌ಗೆ | ಪ್ರತಿ ಕಿಲೋವಾಟ್‌ಗೆ ರೂ.**೨೫/–** |
| **ವಿದ್ಯುತ್ ಬಳಕೆ ಶುಲ್ಕ:** | |
| ೦–೩೦ ಯೂನಿಟ್ಟುಗಳಿಗೆ<br>(ಜೀವನಾಧಾರ ವಿದ್ಯುತ್ ಬಳಕೆ) | ಪ್ರತಿ ಯೂನಿಟ್ಟಿಗೆ **೨೬೦ ಪೈಸೆ** |
| ೩೧–೧೦೦ ಯೂನಿಟ್ಟುಗಳು | ಪ್ರತಿ ಯೂನಿಟ್ಟಿಗೆ **೩೭೦ ಪೈಸೆ** |
| ೧೦೧–೨೦೦ ಯೂನಿಟ್ಟುಗಳು | ಪ್ರತಿ ಯೂನಿಟ್ಟಿಗೆ **೫೧೦ ಪೈಸೆ** |
| ೨೦೦ ಯೂನಿಟ್ಟುಗಳನ್ನು ಮೀರಿದ ಬಳಕೆಗೆ | ಪ್ರತಿ ಯೂನಿಟ್ಟಿಗೆ **೫೯೦ ಪೈಸೆ** |

## ವಿದ್ಯುತ್ ದರ ಅನುಸೂಚಿ ಎಲ್.ಟಿ.–೨(ಬಿ)

ಕೇವಲ ದೀಪ ಅಥವಾ ಸಂಯುಕ್ತ ದೀಪ, ತಾಪನ ಮತ್ತು ಮೋಟೀವ್ ಪವರ್ ಹೊಂದಿರುವ ಅನುದಾನ ಸಹಿತ/ಅನುದಾನ ರಹಿತ ವಿದ್ಯಾ ಸಂಸ್ಥೆಗಳೂ ಸೇರಿದಂತೆ ಖಾಸಗಿ ವೃತ್ತಿಪರ ಮತ್ತು ಇತರ ಖಾಸಗಿ ಶೈಕ್ಷಣಿಕ ಸಂಸ್ಥೆಗಳು, ನರ್ಸಿಂಗ್ ಹೋಂಗಳು, ಖಾಸಗಿ ಆಸ್ಪತ್ರೆಗಳಿಗೆ ಅನ್ವಯಿಸುತ್ತದೆ.

### ಎಲ್.ಟಿ.–೨(ಬಿ)(i)

### ನಗರ ಪಾಲಿಕೆ, ನಗರ ಮುನಿಸಿಪಲ್ ಪಾಲಿಕೆ ಹಾಗೂ ನಗರ ಸ್ಥಳೀಯ ಸಂಸ್ಥೆಗಳಿಗೆ ಒಳಪಡುವ ಪ್ರದೇಶಗಳಿಗೆ ಅನ್ವಯಿಸುತ್ತದೆ.

**ದರ ಅನುಸೂಚಿ**

| **ಮಾಸಿಕ ನಿಗದಿತ ಶುಲ್ಕ:** | |
|---|---|
| ಮಾಸಿಕ ಕನಿಷ್ಠ ರೂ.**೬೫.00** ಕ್ಕೆ ಒಳಪಟ್ಟು, ಪ್ರತಿ ಕಿ.ವಾಟ್‌ಗೆ, ರೂ.**೩೫.00.** | |
| **ವಿದ್ಯುತ್ ಬಳಕೆ ಶುಲ್ಕ:** | |
| ೦–೨೦೦ ಯೂನಿಟ್ಟುಗಳಿಗೆ | ಪ್ರತಿ ಯೂನಿಟ್ಟಿಗೆ **೬೦೦ ಪೈಸೆ** |
| ೨೦೦ ಯೂನಿಟ್ಟುಗಳನ್ನು ಮೀರಿದ ಬಳಕೆಗೆ | ಪ್ರತಿ ಯೂನಿಟ್ಟಿಗೆ **೭೨೦ ಪೈಸೆ** |

## ಎಲ್.ಟಿ.–೨(ಬಿ)(ii)

## ಗ್ರಾಮ ಪಂಚಾಯಿತಿಗಳಿಗೆ ಒಳಪಡುವ ಪ್ರದೇಶಗಳಿಗೆ ಅನ್ವಯಿಸುತ್ತದೆ.

### ದರ ಅನುಸೂಚಿ

| | |
|---|---|
| **ಮಾಸಿಕ ನಿಗದಿತ ಶುಲ್ಕ:** | |
| ಮಾಸಿಕ ಕನಿಷ್ಠ ರೂ.**೫೦.೦೦** ಕ್ಕೆ ಒಳಪಟ್ಟು, ಪ್ರತಿ ಕಿ.ವಾಟ್‌ಗೆ, ರೂ.**೨೫.೦೦.** | |
| **ವಿದ್ಯುತ್ ಬಳಕೆ ಶುಲ್ಕ:** | |
| ೦–೨೦೦ ಯೂನಿಟ್ಟುಗಳಿಗೆ | ಪ್ರತಿ ಯೂನಿಟ್ಟಿಗೆ **೫೫೦ ಪೈಸೆ** |
| ೨೦೦ ಯೂನಿಟ್ಟುಗಳನ್ನು ಮೀರಿದ ಬಳಕೆಗೆ | ಪ್ರತಿ ಯೂನಿಟ್ಟಿಗೆ ೬೭೦ **ಪೈಸೆ** |

**ಟಿಪ್ಪಣಿ:**

**ವಿದ್ಯುತ್ ದರ ಅನುಸೂಚಿ ಎಲ್.ಟಿ.–೨(ಎ) ಮತ್ತು ಎಲ್.ಟಿ.–೨(ಬಿ) ಗೆ ಅನ್ವಯಿಸುತ್ತದೆ.**

೧. ಅಂಗವಿಕಲರು, ವೃದ್ಧರು, ನಿರಾಶ್ರಿತರು ಹಾಗೂ ಅನಾಥರಿಗೆ ಧರ್ಮಾದಾಯ ಸಂಸ್ಥೆಗಳು ನಡೆಸುವ ಗೃಹಗಳು, ಶಾಲೆಗಳು, ಹಾಸ್ಟೆಲ್‌ಗಳು ಮತ್ತು ಪುನರ್‌ವಸತಿ ಕೇಂದ್ರಗಳಿಗೆ ಪ್ರತಿ ಯೂನಿಟ್ಟಿಗೆ ೨೫ ಪೈಸೆ ರಿಯಾಯಿತಿ ಕೊಡಲಾಗುವುದು.

೨. (ಎ) ಬಳಕೆದಾರರ ಆವರಣದಲ್ಲಿ ಸದುದ್ದೇಶದ ಉಪಯೋಗಕ್ಕಾಗಿ ತಾತ್ಕಾಲಿಕ ಉದ್ದೇಶಗಳಿಗೆ ಅಗತ್ಯ ವಿದ್ಯುತ್ತನ್ನು ಉಪಯೋಗಿಸಲು ಸ್ಥಾಪನದ ಒಟ್ಟು ವಿದ್ಯುತ್ ಪ್ರಮಾಣವು ತಾತ್ಕಾಲಿಕ ವಿದ್ಯುತ್ ಪ್ರಮಾಣವೂ ಸೇರಿದಂತೆ ಮಂಜೂರಾದ ವಿದ್ಯುತ್ ಪ್ರಮಾಣವನ್ನು ಮೀರದ ಷರತ್ತಿಗೊಳಪಟ್ಟು ಅನುಮತಿಸಲಾಗಿರುತ್ತದೆ.

(ಬಿ) ಖಾಯಂ ವಿದ್ಯುತ್ ಸರಬರಾಜು ಇರುವ ಕಟ್ಟಡಗಳಲ್ಲಿ ನೆಲ ನಯನಗೊಳಿಸುವ ಉಪಕರಣ ಮತ್ತು ಅಂತಹ ಒಂದೆಡೆಯಿಂದ ಮತ್ತೊಂದೆಡೆಗೆ ಸಾಗಿಸುವ ಉಪಕರಣವನ್ನು ತಾತ್ಕಾಲಿಕವಾಗಿ ಉಪಯೋಗಿಸಲು ಉದ್ದೇಶಿಸಿದ್ದರೆ, ಬಳಕೆದಾರರು ಅಂತಹ ಉಪಕರಣಗಳಿಗೆ ಅಗತ್ಯ ಸಾಮರ್ಥ್ಯದ ಅರ್ಥ್‌ಲೀಕೇಜ್ ಸರ್ಕ್ಯೂಟ್ ಬ್ರೇಕರನ್ನು ಅಳವಡಿಸಿರಬೇಕು.

೩. ಶೈಕ್ಷಣಿಕ ಸಂಸ್ಥೆಗಳ ಪ್ರಯೋಗಾಲಯ ಸ್ಥಾಪನಗಳಲ್ಲಿ, ಮಂಜೂರಾದ ವಿದ್ಯುತ್ ಪ್ರಮಾಣದ ನಾಲ್ಕರಷ್ಟು ಸಂಪರ್ಕಿತ ಯಂತ್ರಗಳನ್ನು ಹಾಕಿಕೊಳ್ಳಲು ಅನುಮತಿ ಇದೆ. ಆದರೆ, ನಿಗದಿತ ಶುಲ್ಕಗಳು ಮಂಜೂರಾದ ವಿದ್ಯುತ್ ಪ್ರಮಾಣವನ್ನು ಅನುಸರಿಸಿ ಇರುತ್ತವೆ.

೪. ಸಂಯುಕ್ತ ದೀಪ ಮತ್ತು ತಾಪನಗಳಲ್ಲದೆ, ಈ ಪ್ರವರ್ಗದ ಅಡಿಯಲ್ಲಿ ಒಂದೇ ಮೀಟರಿನ ಸಂಪರ್ಕದಲ್ಲಿರುವ ಷರತ್ತಿಗೆ ಒಳಪಟ್ಟಂತೆ ಫ್ಯಾನು, ಟಿ.ವಿ., ರೇಡಿಯೋ, ರೆಫ್ರಿಜರೇಟರ್, ಗೃಹ ಬಳಕೆಯ ವಾಟರ್ ಪಂಪು, ಹವಾ ನಿಯಂತ್ರಕ ಹಾಗೂ ಇತರೆ ಗೃಹ ಬಳಕೆ ಸಾಧನಗಳಿಗೆ ವಿದ್ಯುತ್ತನ್ನು ಬಳಸಬಹುದಾಗಿದೆ. ಹವಾ ನಿಯಂತ್ರಣಕ್ಕೆ ಪ್ರತ್ಯೇಕ ಮಾಪಕವನ್ನು ಅಳವಡಿಸಿದ್ದರೆ, ಪೂರ್ಣ ಹೊರೆಯ ಲೆಕ್ಕಾಚಾರಕ್ಕಾಗಿ ಅದನ್ನು ಮುಖ್ಯ ಮಾಪಕಕ್ಕೆ ವಿಲೀನಗೊಳಿಸುವಂತೆ ಸಂಬಂಧಿತ ಬಳಕೆದಾರರಿಗೆ ತಿಳುವಳಿಕೆಯ ಪತ್ರವನ್ನು ಜಾರಿ ಮಾಡತಕ್ಕದ್ದು. ಅಲ್ಲಿಯವರೆಗೆ ಹವಾ ನಿಯಂತ್ರಣದ ಬಳಕೆಯನ್ನು ವಾಣಿಜ್ಯ ವಿದ್ಯುತ್ ದರದ ಅಡಿಯಲ್ಲಿ ಬಿಲ್ ಮಾಡತಕ್ಕದ್ದು.

೫. ಸೌರಶಕ್ತಿ ಚಾಲಿತ ವಾಟರ್ ಹೀಟರನ್ನು ಸ್ಥಾಪಿಸಿ, ಬಳಸುವ ಎಲ್.ಟಿ. – ೨(ಎ) ಸ್ಥಾಪನಗಳಿಗೆ ಬಳಸಿದ ಪ್ರತಿ ಯೂನಿಟ್ಟಿಗೆ ೫೦ ಪೈಸೆಯಂತೆ, ತಿಂಗಳಿಗೆ ಪ್ರತಿ ಸ್ಥಾಪನಕ್ಕೆ ಗರಿಷ್ಠ ಮಿತಿ ರೂ.೫೦/– ರಂತೆ ರಿಯಾಯಿತಿಯನ್ನು ನೀಡಲಾಗುವುದು. ವಸತಿ ಸಂಕೀರ್ಣಗಳು/ಗುಂಪು ಮನೆಗಳು ಇರುವೆಡೆ, ಪ್ರತಿ ಮನೆಗೆ ಕನಿಷ್ಠ ೧೦೦ಲೀಟರ್ ಸಾಮರ್ಥ್ಯದ ಲೆಕ್ಕದಂತೆ **<u>ಸಮಗ್ರವಾಗಿ ಒಂದೇ ಸೌರಶಕ್ತಿ ಚಾಲಿತ ವಾಟರ್ ಹೀಟರನ್ನು ಸ್ಥಾಪಿಸಿ ಬಳಸಿದರೆ</u>** , ಪ್ರತಿಯೊಂದು ಮನೆಗೂ ಸೌರಶಕ್ತಿ ಚಾಲಿತ ವಾಟರ್ ಹೀಟರ್ ರಿಯಾಯಿತಿಯನ್ನು ನೀಡಲಾಗುವುದು.

## <u>ವಿದ್ಯುತ್ ದರ ಅನುಸೂಚಿ ಎಲ್.ಟಿ.–೩</u>

ವಾಣಿಜ್ಯ ದೀಪ, ತಾಪನ ಮತ್ತು ಮೋಟೀವ್ ಪವರ್ ವಿದ್ಯುತ್ತನ್ನು ಬಳಸುವ, ಕ್ಲಿನಿಕ್‌ಗಳು, ಡಯಾಗ್ನಾಸ್ಟಿಕ್ ಕೇಂದ್ರಗಳು, ಕ್ಷ – ಕಿರಣ ಘಟಕಗಳು, ಅಂಗಡಿಗಳು, ಉಗ್ರಾಣಗಳು, ಹೋಟೆಲ್‌ಗಳು, ರೆಸ್ಟೋರೆಂಟ್‌ಗಳು, ಭೋಜನ ಮತ್ತು ವಸತಿ ಗೃಹಗಳು, ಬಾರ್‌ಗಳು, ಖಾಸಗಿ ಅತಿಥಿ ಗೃಹಗಳು, ಮೆಸ್, ಕ್ಲಬ್‌ಗಳು, ಕಲ್ಯಾಣ ಮಂಟಪಗಳು, ಛತ್ರಗಳು, ಖಾಯಂ ಚಿತ್ರ ಮಂದಿರಗಳು, ಅರೆ ಖಾಯಂ ಚಿತ್ರ ಮಂದಿರಗಳು, ರಂಗ ಮಂದಿರಗಳು, ಪೆಟ್ರೋಲ್ ಬಂಕ್‌ಗಳು, ಪೆಟ್ರೋಲ್, ಡಿಸೇಲ್ ಮತ್ತು ತೈಲ ಶೇಖರಣಾ ಘಟಕಗಳು, ಸರ್ವೀಸ್ ಸ್ಟೇಷನ್/ಗ್ಯಾರೇಜ್‌ಗಳು, ಬ್ಯಾಂಕುಗಳು, ದೂರವಾಣಿ ವಿನಿಮಯ ಕೇಂದ್ರಗಳು, ದೂರದರ್ಶನ ಕೇಂದ್ರಗಳು, ಮೈಕ್ರೋವೇವ್ ಕೇಂದ್ರಗಳು, ಆಕಾಶವಾಣಿ, ಡಿಶ್ ಆ್ಯಂಟೆನಾ, ಸಾರ್ವಜನಿಕ ದೂರವಾಣಿ, ಎಸ್.ಟಿ.ಡಿ., ಐ.ಎಸ್.ಡಿ., ಫ್ಯಾಕ್ಸ್ ಸಂಪರ್ಕ ಕೇಂದ್ರಗಳು, ಸ್ಟಡ್ ಫಾರಂಗಳು, ರೇಸ್ ಕೋರ್ಸ್, ಐಸ್ ಕ್ರೀಂ ಪಾರ್ಲರ್‌ಗಳು, ಗಣಕಯಂತ್ರ ಕೇಂದ್ರಗಳು, ಫೋಟೋ ಸ್ಟೂಡಿಯೋ, ಬಣ್ಣದ ಪ್ರಯೋಗಾಲಯಗಳು, ಜೆರಾಕ್ಸ್ ಪ್ರತಿ ತೆಗೆಯುವ ಯಂತ್ರಗಳು, ರೈಲ್ವೆ ಕಾರ್ಯಾಗಾರ ಹೊರತುಪಡಿಸಿ ರೈಲ್ವೆ ಸ್ಥಾಪನಗಳು, ಕಾರ್ಯಾಗಾರ ಮತ್ತು ಡಿಪೋವನ್ನು ಹೊರತುಪಡಿಸಿ ಕೆ.ಎಸ್.ಆರ್.ಟಿ.ಸಿ. ಬಸ್ ನಿಲ್ದಾಣಗಳು, ಎಲ್ಲಾ ಕಚೇರಿಗಳು, ಪೊಲೀಸ್ ಸ್ಟೇಷನ್ನುಗಳು, ವಾಣಿಜ್ಯ ಸಂಕೀರ್ಣಗಳು, ವಾಣಿಜ್ಯ ಸಂಕೀರ್ಣಗಳ ಲಿಫ್ಟ್‌ಗಳು, ಬ್ಯಾಟರಿ ಚಾರ್ಜಿಂಗ್ ಘಟಕಗಳು, ಟೈರ್ ವಲ್ಕನೈಸಿಂಗ್ ಕೇಂದ್ರಗಳು, ಅಂಚೆ ಕಚೇರಿಗಳು, ಬೇಕರಿ ಅಂಗಡಿಗಳು, ಸೌಂದರ್ಯ ವರ್ಧನಾಲಯಗಳು, ಸರ್ಕಾರ ಮತ್ತು ಸ್ಥಳೀಯ ಸಂಸ್ಥೆಗಳ ಕ್ರೀಡಾಂಗಣವನ್ನು ಹೊರತುಪಡಿಸಿ ಇತರೆ ಕ್ರೀಡಾಂಗಣಗಳು. ಅಲ್ಲದೆ ಎಲ್.ಟಿ.– ೬ ರಲ್ಲಿ ಒಳಗೊಂಡಿರದ ನೀರು ಸರಬರಾಜು ಪಂಪು ಹಾಗೂ ಬೀದಿ ದೀಪಗಳು, ಸೈಬರ್ ಕೆಫೆ, ಇಂಟರ್ ನೆಟ್ ಸರ್ಫಿಂಗ್ ಕೆಫೆ, ಕಾಲ್ ಸೆಂಟರ್, ಮಾಹಿತಿ ತಂತ್ರಜ್ಞಾನ ಆಧಾರಿತ ಮೆಡಿಕಲ್ ಟ್ರಾನ್ಸ್‌ಕ್ರಿಪ್ಷನ್ ಕೇಂದ್ರಗಳು, ಎಲ್.ಟಿ.–೨(ಎ)ನಲ್ಲಿ ಒಳಗೊಂಡಿಲ್ಲದ ಖಾಸಗಿ ವಿದ್ಯಾರ್ಥಿ ನಿಲಯಗಳು, ನಿರ್ದಿಷ್ಟ ಹಾಗೂ ಪ್ರತ್ಯೇಕ ಆವರಣದಲ್ಲಿ ಒದಗಿಸಿರುವ ಅಭ್ಯಾಗತ ಅತಿಥಿ (ಪೇಯಿಂಗ್ ಗೆಸ್ಟ್ ) ಸೌಲಭ್ಯ ವ್ಯವಸ್ಥೆಗೆ ಅನ್ವಯಿಸುತ್ತದೆ.

### ಎಲ್.ಟಿ.–೩(i)

**ನಗರ ಪಾಲಿಕೆ, ನಗರ ಮುನಿಸಿಪಲ್ ಪಾಲಿಕೆ ಹಾಗೂ ನಗರ ಸ್ಥಳೀಯ ಸಂಸ್ಥೆಗಳಿಗೆ ಒಳಪಡುವ ಪ್ರದೇಶಗಳಿಗೆ ಅನ್ವಯಿಸುತ್ತದೆ.**

## ದರ ಅನುಸೂಚಿ

| | |
|---|---|
| **ಮಾಸಿಕ ನಿಗದಿತ ಶುಲ್ಕ:** | ಪ್ರತಿ ಕಿ.ವಾಟ್‌ಗೆ ರೂ.೪೦.**೦೦.** |
| **ವಿದ್ಯುತ್ ಬಳಕೆ ಶುಲ್ಕ:** | |
| ೦–೫೦ ಯೂನಿಟ್ಟುಗಳಿಗೆ | ಪ್ರತಿ ಯೂನಿಟ್ಟಿಗೆ **೬೭೫ ಪೈಸೆ** |
| ೫೦ ಯೂನಿಟ್ಟುಗಳನ್ನು ಮೀರಿದ ಬಳಕೆಗೆ | ಪ್ರತಿ ಯೂನಿಟ್ಟಿಗೆ ೭೭೫ **ಪೈಸೆ** |

ಮಂಜೂರಾದ ವಿದ್ಯುತ್ ೫ ಕಿ.ವ್ಯಾಟ್‌ಗಿಂತ ಹೆಚ್ಚು, ಆದರೆ ೫೦ ಕಿ.ವ್ಯಾಟ್‌ಗಿಂತ ಕಡಿಮೆ ಇರುವ ಸ್ಥಾಪನಗಳಿಗೆ, ಬೇಡಿಕೆ (ಡಿಮ್ಯಾಂಡ್) ಆಧಾರಿತ ದರ (ಐಚ್ಛಿಕ)

| |
|---|
| **ಮಾಸಿಕ ನಿಗದಿತ ಶುಲ್ಕ:** ಪ್ರತಿ ಕಿ.ವಾಟ್‌ಗೆ ರೂ.**೫೫.೦೦.** |
| **ವಿದ್ಯುತ್ ಬಳಕೆ ಶುಲ್ಕ:** **ಮೇಲಿನಂತೆ** |

## ಎಲ್.ಟಿ.–೩(ii)

## ಗ್ರಾಮ ಪಂಚಾಯಿತಿಗಳಿಗೆ ಒಳಪಡುವ ಪ್ರದೇಶಗಳಿಗೆ ಅನ್ವಯಿಸುತ್ತದೆ.

## ದರ ಅನುಸೂಚಿ

| | |
|---|---|
| **ಮಾಸಿಕ ನಿಗದಿತ ಶುಲ್ಕ:** | ಪ್ರತಿ ಕಿ.ವಾಟ್‌ಗೆ ರೂ.೩೦.**೦೦.** |
| **ವಿದ್ಯುತ್ ಬಳಕೆ ಶುಲ್ಕ:** | |
| ೦–೫೦ ಯೂನಿಟ್ಟುಗಳಿಗೆ | ಪ್ರತಿ ಯೂನಿಟ್ಟಿಗೆ **೬೪೫ ಪೈಸೆ** |
| ೫೦ ಯೂನಿಟ್ಟುಗಳನ್ನು ಮೀರಿದ ಬಳಕೆ | ಪ್ರತಿ ಯೂನಿಟ್ಟಿಗೆ ೭೪೫ **ಪೈಸೆ** |

ಮಂಜೂರಾದ ವಿದ್ಯುತ್ ೫ ಕಿ.ವ್ಯಾಟ್‌ಗಿಂತ ಹೆಚ್ಚು, ಆದರೆ ೫೦ ಕಿ.ವ್ಯಾಟ್‌ಗಿಂತ ಕಡಿಮೆ ಇರುವ ಸ್ಥಾಪನಗಳಿಗೆ,ಬೇಡಿಕೆ(ಡಿಮ್ಯಾಂಡ್) ಆಧಾರಿತ ದರ (ಐಚ್ಛಿಕ).

| |
|---|
| **ಮಾಸಿಕ ನಿಗದಿತ ಶುಲ್ಕ:** ಪ್ರತಿ ಕಿ.ವಾಟ್‌ಗೆ ರೂ.**೪೫.೦೦.** |
| **ವಿದ್ಯುತ್ ಬಳಕೆ ಶುಲ್ಕ:** ಮೇಲಿನಂತೆ |

**ಟಿಪ್ಪಣಿ :**

೧. ಈ ಪ್ರವರ್ಗದಡಿಯಲ್ಲಿ ದೀಪ, ತಾಪನ, ಮೋಟಿವ್ ಪವರ್ ಜೊತೆಗೆ ವಿದ್ಯುತ್ತನ್ನು ಆವರಣದಲ್ಲಿ ದೀಪ ಮತ್ತು ಹವಾ ನಿಯಂತ್ರಣ ಮತ್ತು ಆವರಣದಲ್ಲಿ ನೀರು ಸರಬರಾಜಿಗೆ ಉಪಯೋಗಿಸಬಹುದು.

೨. ಅರೆ ಖಾಯಂ ಚಿತ್ರ ಮಂದಿರಗಳು, ಅರೆ ಖಾಯಂ ಸ್ವರೂಪದಿಂದ ಕೂಡಿದ್ದು, ಖಾಯಂ ವೈರಿಂಗ್ ಮತ್ತು ಒಂದು ವರ್ಷಕ್ಕೆ ಕಡಿಮೆ ಇಲ್ಲದಂತೆ ಪರವಾನಗಿ (ಲೈಸೆನ್ಸ್) ಹೊಂದಿರಬೇಕು.

೩. ಊರಿಂದ ಊರಿಗೆ ಸಿನಿಮಾ ಸಲಕರಣೆಗಳನ್ನು ತೆಗೆದುಕೊಂಡು ಹೋಗಿ ಸಿನಿಮಾ ಪ್ರದರ್ಶಿಸುವ ಸಂಚಾರಿ ಸಿನಿಮಾ ಚಿತ್ರಮಂದಿರಗಳು ಹಾಗೂ ಹೊರಾಂಗಣ ಚಿತ್ರೀಕರಣ ಘಟಕಗಳಿಗೆ (ಎಲ್.ಟಿ – ೭) ವಿದ್ಯುತ್ ದರವನ್ನು ವಿಧಿಸಬೇಕು.

೪. **ಅಂಗವಿಕಲರು ನಡೆಸುವ** ಎಸ್.ಟಿ.ಡಿ/ಐ.ಎಸ್.ಡಿ/ ಫ್ಯಾಕ್ಸ್ ಸೌಲಭ್ಯವಿರುವ ಸಾರ್ವಜನಿಕ ದೂರವಾಣಿ ಬೂತುಗಳಿಗೆ ಸಂಬಂಧಿಸಿದಂತೆ ಮಾಸಿಕ ಬಿಲ್ಲಿನಲ್ಲಿ ನಿಗದಿತ ಶುಲ್ಕ ಮತ್ತು ವಿದ್ಯುತ್ ಬಳಕೆಯ ಶುಲ್ಕದ ಮೇಲೆ ಶೇಕಡಾ ೨೦ ರಷ್ಟು ರಿಯಾಯಿತಿಯನ್ನು ನೀಡಲಾಗುವುದು.

೫. ಎಲ್.ಟಿ.ಸ್ಥಾಪನಗಳಿಗೆ ಅನ್ವಯಿಸುವ ಷರತ್ತುಗಳ ಪ್ಯಾರಾ ೧ ರಲ್ಲಿ ಸೂಚಿಸಿರುವಂತೆ, ಬಳಕೆದಾರರು ಕೋರಿಕೆಯ ಮೇರೆಗೆ **ಡಿಮ್ಯಾಂಡ್ ಆಧಾರಿತ ವಿದ್ಯುತ್ ದರವನ್ನು** ಆಯ್ಕೆ ಮಾಡಿಕೊಳ್ಳಬಹುದು.

## ವಿದ್ಯುತ್ ದರ ಅನುಸೂಚಿ ಎಲ್.ಟಿ.–೪(ಎ), (ಬಿ), & (ಸಿ)

(ಎ) ಸ್ಪ್ರಿಂಕ್ಲರುಗಳೂ ಸೇರಿದಂತೆ ಕೃಷಿ ಪಂಪುಸೆಟ್ಟುಗಳಿಗೆ, (ಬಿ)(i) ಅರಣ್ಯ ಹಾಗೂ ತೋಟಗಾರಿಕೆ ಇಲಾಖೆಗಳ ನರ್ಸರಿಗಳು (ii) ಹುಲ್ಲುಗಾವಲುಗಳು ಮತ್ತು ತೋಟಗಳು (iii) ಬೆಳೆಗಳು (ಕಾಫಿ, ಟೀ ಹೊರತುಪಡಿಸಿದಂತೆ) ಮತ್ತು ಖಾಸಗೀ ತೋಟಗಾರಿಕೆ ನರ್ಸರಿಗಳಿಗೆ ಉಪಯೋಗಿಸುವ ಪಂಪುಸೆಟ್ಟುಗಳಿಗೆ ಅನ್ವಯಿಸುತ್ತದೆ.

### ಎಲ್.ಟಿ.–೪ಎ

### ೧೦ ಎಚ್.ಪಿ. ಸೇರಿದಂತೆ, ೧೦ ಎಚ್.ಪಿ. ವರೆಗಿನ ನೀರಾವರಿ ಪಂಪುಸೆಟ್ಟು ಸ್ಥಾಪನಗಳಿಗೆ ಅನ್ವಯಿಸುತ್ತದೆ.

### ದರ ಅನುಸೂಚಿ

| | |
|---|---|
| **ನಿಗದಿತ ಶುಲ್ಕ / ವಿದ್ಯುತ್ ಬಳಕೆ ಶುಲ್ಕ:** | ಉಚಿತ |

ಎಲ್.ಟಿ.–೪(ಎ) ಪ್ರವರ್ಗಕ್ಕೆ ಆಯೋಗವು ನಿರ್ಧರಿಸಿರುವ ವಿದ್ಯುತ್ ದರ ಪ್ರತಿ ಯೂನಿಟ್ಟಿಗೆ ೪೨೫ ಪೈಸೆ.ಒಂದು ವೇಳೆ ಕರ್ನಾಟಕ ಸರ್ಕಾರವು, ಕವಿನಿ ಆಯೋಗ (ಅನುದಾನದ ಪಾವತಿಯ ವಿಧಾನ ) ನಿಬಂಧನೆಗಳು,೨೦೦೮ರಲ್ಲಿ ಅಯೋಗವು ಸೂಚಿಸಿರುವ ಪ್ರಕಾರ ಈ ಅನುದಾನವನ್ನು ಮುಂಗಡವಾಗಿ ಬಿಡುಗಡೆ ಮಾಡದಿದ್ದಲ್ಲಿ, ಆಯಾ ಗ್ರಾಹಕರಿಂದಲೇ ಬಳಕೆಯ ಪ್ರತಿ ಯೂನಿಟ್ಟಿಗೆ ೪೨೫ ಪೈಸೆಯಂತೆ ವಿದ್ಯುತ್ ಬಳಕೆ ಶುಲ್ಕವನ್ನು ವಸೂಲು ಮಾಡತಕ್ಕದ್ದು.

**ಟಿಪ್ಪಣಿ :** ಈ ದರಸೂಚಿಯು ತೆಂಗು ಮತ್ತು ಅಡಿಕೆ ಬೆಳೆಗಳಿಗೂ ಅನ್ವಯಿಸುತ್ತದೆ.

## ಎಲ್.ಟಿ.–೪ಬಿ

**೧೦ ಎಚ್.ಪಿ.ಗಿಂತ ಅಧಿಕ ಸಾಮರ್ಥ್ಯದ ನೀರಾವರಿ ಪಂಪುಸೆಟ್ಟು ಸ್ಥಾಪನಗಳಿಗೆ ಅನ್ವಯಿಸುತ್ತದೆ.**

**ದರ ಅನುಸೂಚಿ**

| | |
|---|---|
| **ಮಾಸಿಕ ನಿಗದಿತ ಶುಲ್ಕ:** | ಪ್ರತಿ ಎಚ್.ಪಿ.ಗೆ, ಪ್ರತಿ ತಿಂಗಳಿಗೆ, ರೂ.**೩೦.೦೦.** |
| **ವಿದ್ಯುತ್ ಬಳಕೆ ಶುಲ್ಕ:** | ಪ್ರತಿ ಯೂನಿಟ್ಟಿಗೆ **೨೪೦ ಪೈಸೆ.** |

## ಎಲ್.ಟಿ.–೪ಸಿ(i)

**೧೦ ಹೆಚ್.ಪಿ. ಮತ್ತು ಅದಕ್ಕಿಂತ ಕಡಿಮೆ ಸಾಮರ್ಥ್ಯದವರೆಗಿನ ಮಂಜೂರಾತಿ ಹೊರೆಯನ್ನು ಹೊಂದಿರುವ, ಖಾಸಗಿ ತೋಟಗಾರಿಕೆ ನರ್ಸರಿಗಳು, ಕಾಪಿ, ಟೀ ಮತ್ತು ರಬ್ಬರ್ ಬೆಳೆಗಳಿಗೆ ಅನ್ವಯಿಸುತ್ತದೆ**

**ದರ ಅನುಸೂಚಿ**

| | |
|---|---|
| **ಮಾಸಿಕ ನಿಗದಿತ ಶುಲ್ಕ:** | ಪ್ರತಿ ಎಚ್.ಪಿ.ಗೆ, ಪ್ರತಿ ತಿಂಗಳಿಗೆ, ರೂ.**೨೦.೦೦.** |
| **ವಿದ್ಯುತ್ ಬಳಕೆ ಶುಲ್ಕ:** | ಪ್ರತಿ ಯೂನಿಟ್ಟಿಗೆ **೨೪೦ ಪೈಸೆ.** |

## ಎಲ್.ಟಿ.–೪ಸಿ(ii)

**೧೦ ಹೆಚ್.ಪಿ.ಗಿಂತ ಅಧಿಕ ಮಂಜೂರಾತಿ ಹೊರೆಯನ್ನು ಹೊಂದಿರುವ, ಖಾಸಗಿ ತೋಟಗಾರಿಕೆ ನರ್ಸರಿಗಳು, ಕಾಪಿ, ಟೀ ಮತ್ತು ರಬ್ಬರ್ ಬೆಳೆಗಳಿಗೆ ಅನ್ವಯಿಸುತ್ತದೆ.**

**ದರ ಅನುಸೂಚಿ**

| | |
|---|---|
| **ಮಾಸಿಕ ನಿಗದಿತ ಶುಲ್ಕ:** | ಪ್ರತಿ ಎಚ್.ಪಿ.ಗೆ, ಪ್ರತಿ ತಿಂಗಳಿಗೆ, ರೂ.**೩೦.೦೦.** |
| **ವಿದ್ಯುತ್ ಬಳಕೆ ಶುಲ್ಕ:** | ಪ್ರತಿ ಯೂನಿಟ್ಟಿಗೆ **೨೪೦ ಪೈಸೆ.** |

**ಟಿಪ್ಪಣಿ :**

೧. ನೀರಾವರಿ ಪಂಪುಸೆಟ್ಟು ವಿದ್ಯುತ್ ದರದ ಅಡಿಯಲ್ಲಿ ಸರಬರಾಜಾಗುವ ವಿದ್ಯುತ್ತನ್ನು ನೀರಾವರಿ ಪಂಪುಸೆಟ್ಟಿನ ಅರ್ಜಿ/ನೀರು ಹಕ್ಕಿನ ಪತ್ರದಲ್ಲಿ ನಮೂದಿಸಿರುವಂತೆ, ತಮ್ಮ ಸ್ವಂತ ಭೂಮಿಯ ನೀರಾವರಿಗೆ ಮಾತ್ರವೇ ನೀರು ಹಾಯಿಸಿಕೊಳ್ಳಲು ಬಳಸತಕ್ಕದ್ದು. ತಪ್ಪಿದಲ್ಲಿ, ಲಭ್ಯವಿರುವ ದಾಖಲಿತ ಪೂರ್ಣ ವಿದ್ಯುತ್ ಬಳಕೆಯನ್ನು, ಅಥವಾ ಲಭ್ಯವಿರದಿದ್ದಲ್ಲಿ ಕರ್ನಾಟಕ ರಾಜ್ಯದಲ್ಲಿ ವಿದ್ಯುತ್ ಸರಬರಾಜಿಗಾಗಿ ವಿತರಣಾ ಲೈಸೆನ್ಸುದಾರರ ಷರತ್ತುಗಳು ಇದರ ಪರಿಚ್ಛೇದ ೪೨.೦೬ ರ ಪ್ರಕಾರ ಬಳಕೆಯನ್ನು ಗಣನೆ ಮಾಡಿ ಸೂಕ್ತ ಕೈಗಾರಿಕೆ / ವಾಣಿಜ್ಯ ದರದ ಅಡಿಯಲ್ಲಿ (ಎಲ್.ಟಿ.–೩ / ಎಲ್.ಟಿ. – ೫) ಬಿಲ್ ಮಾಡಲಾಗುವುದು.

೨. ಲೈಸೆನ್ಸುದಾರರ ಅನುಮೋದನೆಯೊಡನೆ ನೀರಾವರಿ ಪಂಪುಸೆಟ್ಟು ಸ್ಥಾಪನಗಳ ಮೋಟಾರನ್ನು **ಕೃಷಿಯ ಇತರೆ ನಿರ್ವಹಣೆಗಳಾದ ಕಬ್ಬು ಅರೆಯುವ ಕ್ರಷರ್, ಕಾಫಿ ಪಲ್ಪಿಂಗ್ ಇತ್ಯಾದಿಗಳಿಗೆ** ಉಪಯೋಗಿಸಬಹುದು. ಅಂತಹ ಕೆಲಸಕ್ಕೆ ಬಳಸಿದ ವಿದ್ಯುತ್ತನ್ನು ಪರ್ಯಾಯ ಸ್ವಿಚ್ ಮುಖಾಂತರ ಪ್ರತ್ಯೇಕವಾಗಿ ಮಾಪಕ ಅಳವಡಿಸಿ ಎಲ್.ಟಿ. ಕೈಗಾರಿಕಾ ವಿದ್ಯುತ್ ದರ ಅನುಸೂಚಿಯಂತೆ (ಬಳಕೆ

ಶುಲ್ಕ ಮಾತ್ರ) ಬಿಲ್ ಮಾಡಲಾಗುವುದು. ಕೃಷಿ ಹಾಗೂ ಇತರೆ ಪರ್ಯಾಯ ನಿರ್ವಹಣೆಗಳಿಗೆ ಬಳಸಿದ ವಿದ್ಯುತ್ತನ್ನು ಒಂದೇ ಮೀಟರಿನಲ್ಲಿ ದಾಖಲಿಸಿದ ಸಂದರ್ಭದಲ್ಲಿ ಸದರಿ ಉಪವಿಭಾಗದ ಅಧಿಕಾರಿಯಿಂದ ದೃಢೀಕರಿಸಲ್ಪಟ್ಟಂತೆ, (ಪರ್ಯಾಯ ಉಪಯೋಗದ ಆ ವಿದ್ಯುತ್ತನ್ನು ಆ ತಿಂಗಳಿನಲ್ಲಿ ಬಳಸಿದ ಸರಾಸರಿ ನೀರಾವರಿ ಪಂಪುಸೆಟ್ಟು ಬಳಕೆಯ ಪ್ರಮಾಣದಿಂದ ಕಳೆದು), ಲೆಕ್ಕ ಮಾಡಿ ಬಿಲ್ ಮಾಡತಕ್ಕದ್ದು.

೩. ಪಂಪುಕೊಠಡಿ ಮತ್ತು ಬಾವಿ ಬೆಳಕಿನ ವ್ಯವಸ್ಥೆಗಾಗಿ ಪ್ರತಿ ಪಂಪುಸೆಟ್ಟಿಗೆ ೪೦ವ್ಯಾಟ್‌ಗಳ ಮಿತಿಗೆ ಒಳಪಟ್ಟಂತೆ ೨ ಬಲ್ಬುಗಳಿಗೆ ವಿದ್ಯುತ್ ಉಪಯೋಗಿಸಿಕೊಳ್ಳಲು ಗ್ರಾಹಕರಿಗೆ ಅನುಮತಿ ಇರುತ್ತದೆ.

೪. ಕೃಷಿ ಉದ್ದೇಶಕ್ಕಾಗಿ ಪಂಪು ಮಾಡಿದ ನೀರನ್ನು, ಗ್ರಾಹಕರು ಸದುದ್ದೇಶದ ಕುಡಿಯುವ ಬಳಕೆಗಾಗಿ ಮತ್ತು ಕೃಷಿಯ ಜೊತೆಗೆ <u>ಅವರಿಗೆ ಸೇರಿದ</u> ಪ್ರಾಣಿ, ಪಕ್ಷಿ, ಕೋಳಿ ಸಾಕಾಣಿಕೆ ಕೇಂದ್ರ, ಡೈರಿ ಫಾರಂ ಹಾಗೂ ಮೀನು ಫಾರಂಗಳಿಗೂ ಉಪಯೋಗಿಸಬಹುದು.

೫. ಎಲ್ಲಾ ನೀರಾವರಿ ಪಂಪುಸೆಟ್ಟು ಸ್ಥಾಪನಗಳಿಗೆ ಕನಿಷ್ಠ ಮೂರು ತಿಂಗಳಿಗೊಮ್ಮೆ ಬಿಲ್ ಮಾಡತಕ್ಕದ್ದು.

೬. ಮಾಪಕ ಅಳವಡಿಸಿರುವ ಎಲ್ಲಾ ನೀರಾವರಿ ಪಂಪುಸೆಟ್ಟು ಸ್ಥಾಪನಗಳಲ್ಲಿ, ಕರ್ನಾಟಕ ರಾಜ್ಯದಲ್ಲಿ ವಿದ್ಯುತ್ ಸರಬರಾಜಿಗಾಗಿ ವಿತರಣಾ ಲೈಸೆನ್ಸುದಾರರ ಷರತ್ತುಗಳ ಪರಿಚ್ಛೇದ ೨೩ ರ ಪ್ರಕಾರ ಕೆಪ್ಯಾಸಿಟರುಗಳನ್ನು ಅಳವಡಿಸಿದ್ದರೆ, ಅಂತಹ ಸ್ಥಾಪನಗಳಿಗೆ ಯೂನಿಟ್ ಒಂದಕ್ಕೆ ೨ ಪೈಸೆ ರಿಯಾಯಿತಿಯನ್ನು ನೀಡಲಾಗುವುದು.

೭. ನೀರಾವರಿ ಪಂಪುಸೆಟ್ಟುಗಳಿಗೆ ಮೀಟರ್ ಅಳವಡಿಸಿರಲಿ ಅಥವಾ ಇಲ್ಲದಿರಲಿ, ಎಲ್.ಟಿ. – ೪(ಎ), ಎಲ್.ಟಿ. – ೪(ಬಿ), ಹಾಗೂ ಎಲ್.ಟಿ. – ೪(ಸಿ) ಪ್ರವರ್ಗದ ಅಡಿಯಲ್ಲಿ ಬರುವ ನೀರಾವರಿ ಪಂಪುಸೆಟ್ಟುಗಳ ವಿದ್ಯುತ್ ನಿಲುಗಡೆ ಅವಧಿಯಲ್ಲಿ, ಮೀಟರ್ ಅಳವಡಿಸಿರುವ ಸ್ಥಾಪನಗಳ ಬಗ್ಗೆ ವಿದ್ಯುತ್ ದರ ಷೆಡ್ಯೂಲ್‌ನಲ್ಲಿ ತಿಳಿಸಿರುವಂತೆ ಕೇವಲ ನಿಗದಿತ ಶುಲ್ಕವನ್ನು ಸಂಗ್ರಹಿಸತಕ್ಕದ್ದು.

## <u>ವಿದ್ಯುತ್ ದರ ಅನುಸೂಚಿ ಎಲ್.ಟಿ.–೫</u>

**ದೀಪ ಬಳಕೆಯೂ ಸೇರಿದಂತೆ ತಾಪನ ಮತ್ತು ಮೋಟಿವ್ ಪವರ್** ವಿದ್ಯುತ್ ಬಳಸುವ ಕೈಗಾರಿಕಾ ಘಟಕಗಳು, ಕಾರ್ಯಾಗಾರಗಳು, ಕೋಳಿ ಸಾಕಣೆ ಕೇಂದ್ರಗಳು, ಕಬ್ಬು ಅರೆಯುವ ಯಂತ್ರಗಳು, ಕಾಫಿ ಬೀಜದ ತಿಳ್ಳನ್ನು ತೆಗೆಯುವುದು (ಪಲ್ಪಿಂಗ್), ಏಲಕ್ಕಿ ಒಣಗಿಸುವುದು, ಅಣಬೆ ಬೆಳೆಯುವ ಸ್ಥಾಪನಗಳು, ಫ್ಲೋರ್, ಹಣ್ಣಿನ ಸಿಪ್ಪೆ ತೆಗೆಯುವುದು/ಸುಲಿಯುವುದು ( ಹಲ್ಲರ್ ) ಮತ್ತು ಅಕ್ಕಿ ಗಿರಣಿ, ವೆಬ್ ಗ್ರೈಂಡರುಗಳು, ಹಾಲಿನ ಡೈರಿಗಳು, **ಪ್ರತ್ಯೇಕ ಇಸ್ತ್ರಿ ಅಂಗಡಿ,** ಇತರೆ, ಒಗೆಯುವ, ಒಣಗಿಸುವ ಮತ್ತು ಐರನ್ ಮಾಡುವ ಸೌಲಭ್ಯವಿರುವ ಡ್ರೈ ಕ್ಲೀನರ್ಸ್ ಮತ್ತು ಲಾಂಡ್ರಿಗಳು, **ಪ್ರತ್ಯೇಕ ಬಟ್ಟೆ ಹೊಲಿಗೆ ಅಂಗಡಿಗಳು,** ಸಗಟು ಐಸ್‌ಕ್ರೀಂ ಮತ್ತು ಐಸ್‌ಕ್ರೀಂ ತಯಾರಿಕಾ ಘಟಕಗಳು, ಕಾಫಿ ಬೀಜ ಹುರಿಯುವುದು ( ರೋಸ್ಟಿಂಗ್) ಮತ್ತು ಪುಡಿ ಮಾಡುವುದು (ಗ್ರೈಂಡಿಂಗ್), ಶೈತ್ಯೀಕರಣ ಘಟಕಗಳು, ಬೇಕರಿ ಪದಾರ್ಥ ತಯಾರಿಸುವ ಘಟಕ, ಕೆ.ಎಸ್.ಆರ್.ಟಿ.ಸಿ. ಕಾರ್ಯಾಗಾರ/ಡಿಪೋ, ರೈಲ್ವೇ ಕಾರ್ಯಾಗಾರ, ಔಷಧಿ ತಯಾರಿಕಾ ಘಟಕಗಳು ಮತ್ತು ಪರೀಕ್ಷಾ ಪ್ರಯೋಗಾಲಯಗಳು, ಮುದ್ರಣಾಲಯಗಳು, ಉಡುಪು ತಯಾರಿಕಾ ಘಟಕಗಳು, ಸಗಟು ಹಾಲು ಮಾರಾಟದ ಬೂತುಗಳು, ಸ್ಥಳೀಯ ಸಂಸ್ಥೆಗಳಿಗೆ ಸೇರಿದ ಈಜು ಕೊಳಗಳು, ಟೈರ್ ರೀ ಟ್ರೇಡಿಂಗ್ ಘಟಕಗಳು, ಕಲ್ಲು ಪುಡಿ ಮಾಡುವುದು, ಕಲ್ಲು ತುಂಡರಿಸುವುದು, ಮೆಣಸಿನಕಾಯಿ ಗ್ರೈಂಡರುಗಳು, ಅವಲಕ್ಕಿ ಮಿಲ್ಲುಗಳು, ಪಲ್ವರೈಸಿಂಗ್ ಮಿಲ್ಲುಗಳು, ಡಿಕಾರ್ಡಿಕೇಟರುಗಳು, ಕಬ್ಬಿಣ ಮತ್ತು ರೆಡ್ ಆಕ್ಸೈಡ್ ಕ್ರಷಿಂಗ್ ಘಟಕಗಳು, ಚಿತಾಗಾರಗಳು, ಹ್ಯಾಚರಿಗಳು, ಟಿಶ್ಯೂ ಕಲ್ಚರ್, ಸಾಮಿಲ್, ಆಟಿಕೆ/ಮರದ ಕೈಗಾರಿಕೆಗಳು, ವಿಶ್ವ ಯೋಜನೆ ಮೇರೆಗೆ ಮಂಜೂರಾದ ವಿಶ್ವ ಷೆಡ್ಡುಗಳಿಗೆ ಮಿಶ್ರ ವಿದ್ಯುತ್, ಸಿನಿಮಾ ಚಟುವಟಿಕೆಗಳ ಪ್ರೋಸೆಸಿಂಗ್, ಪ್ರಿಂಟಿಂಗ್ ಡೆವಲಪಿಂಗ್, ಧ್ವನಿಮುದ್ರಣ, ಥೀಯೆಟರುಗಳು, ಕಂಠ ದಾನ (ಡಬ್ಬಿಂಗ್) ಮಂದಿರ, ಸಿನಿಮಾ ಸ್ಟುಡಿಯೋ, ಅಗರಬತ್ತಿ ತಯಾರಿಕಾ

ಘಟಕಗಳು, ಕೆ.ಐ.ಎ.ಡಿ.ಬಿ. ಮತ್ತು ಇತರೆ ಕೈಗಾರಿಕೆಗಳಿಗೆ ನೀರು ಸರಬರಾಜು ಸ್ಥಾಪನಗಳು, ರತ್ನ ಮತ್ತು ವಜ್ರ ಸಾಣೆ ಘಟಕಗಳು, ಹೂ ಬೇಸಾಯ (ಫ್ಲೋರಿಕಲ್ಚರ್), ಗ್ರೀನ್ ಹೌಸ್, ಜೈವಿಕ ತಾಂತ್ರಿಕ (ಬಯೋಟೆಕ್ನಿಕಲ್) ಪ್ರಯೋಗಾಲಯ ಹೈಬ್ರೀಡ್ ಬೀಜ ಸಂಸ್ಕರಣ ಘಟಕಗಳು, ಕರ್ನಾಟಕ ಸರ್ಕಾರ/ಭಾರತ ಸರ್ಕಾರದಿಂದ ಮಾನ್ಯಗೊಳಿಸಲ್ಪಟ್ಟ ಯಂತ್ರಾಂಶ ಹಾಗೂ ತಂತ್ರಾಂಶ ಅಭಿವೃದ್ಧಿಯಲ್ಲಿ ತೊಡಗಿರುವ ಮಾಹಿತಿ ತಂತ್ರಜ್ಞಾನ ಕೈಗಾರಿಕೆಗಳು, ಮಾಹಿತಿ ತಂತ್ರಜ್ಞಾನ ಆಧಾರಿತ ಸೇವೆಗಳು / ಸ್ಟಾರ್ಟ್ ಆಫ್ಸ್ / ಅನಿಮೇಶನ್ / ಗೇಮಿಂಗ್ / ಕಂಪ್ಯೂಟರ್ ಗ್ರಾಫಿಕ್ಸ್ , ಸಿಲ್ಕ್ ಫಿಲೇಚರ್ ಘಟಕಗಳು, ಅಕ್ವ ಕಲ್ಚರ್, ಪ್ರಾನ್ ಕಲ್ಚರ್, ಇಟ್ಟಿಗೆ ತಯಾರಿಕಾ ಘಟಕಗಳು, ಹತ್ತಿ/ರೇಷ್ಮೆಗಳಿಗೆ ಬಣ್ಣ ಹಾಕುವ ಘಟಕಗಳು, ಸರ್ಕಾರ ಮತ್ತು ಸ್ಥಳೀಯ ಸಂಸ್ಥೆಗಳ ಸ್ಟೇಡಿಯಂಗಳು, ಅಗ್ನಿ ಶಾಮಕ ಕೇಂದ್ರ, ಚಿನ್ನ/ಬೆಳ್ಳಿ ಆಭರಣ ತಯಾರಿಕಾ ಘಟಕಗಳು, ಮಲಿನ ನೀರು ಶುದ್ಧೀಕರಣ ಘಟಕ, ಚರಂಡಿ ನೀರು ಶುದ್ಧೀಕರಣ ಘಟಕ, ಎಲ್.ಪಿ.ಜಿ.ಬಾಟ್ಲಿಂಗ್ ಸ್ಥಾವರ, ಪೆಟ್ರೋಲಿಯಂ ಪೈಪ್‌ಲೈನ್ ಯೋಜನೆಗಳು, ಹಂದಿ ಸಾಕಾಣಿಕೆ ಕೇಂದ್ರಗಳು, ಖನಿಜ ವಸ್ತುಗಳ ವಿಶ್ಲೇಷಣ ಪ್ರಯೋಗಾಲಯ, ಉಪಗ್ರಹ ಸಂಪರ್ಕ ಕೇಂದ್ರಗಳು, ಖನಿಜಯುಕ್ತ ನೀರು ಪ್ರಕ್ರಿಯಾ ಸ್ಥಾವರ/ಕುಡಿಯುವ ನೀರು ಬಾಟ್ಲಿಂಗ್ ಸ್ಥಾವರ ಮತ್ತು ಸೋಡಾ ಫೌಂಟೇನ್ ಘಟಕಗಳಿಗೆ ಅನ್ವಯಿಸುತ್ತದೆ.

## ಎಲ್.ಟಿ.–೫(ಎ)

## ಮುನಿಸಿಪಲ್ ಪಾಲಿಕೆ ಒಳಪಡುವ ಪ್ರದೇಶಗಳಿಗೆ ಅನ್ವಯಿಸುತ್ತದೆ.

### ದರ ಅನುಸೂಚಿ

| **ಮಾಸಿಕ ನಿಗದಿತ ಶುಲ್ಕ:** | |
|---|---|
| ೫ ಎಚ್.ಪಿ. & ಕಡಿಮೆ ಸಾಮರ್ಥ್ಯದ ಸ್ಥಾಪನಗಳಿಗೆ | ಪ್ರತಿ ಎಚ್.ಪಿ. ಗೆ ರೂ.**೨೫/–** |
| ೫ ಎಚ್.ಪಿ.ಗಿಂತ ಅಧಿಕ ಆದರೆ ೪೦ ಎಚ್.ಪಿ.ಗಿಂತ ಕಡಿಮೆ ಸಾಮರ್ಥ್ಯದ ಸ್ಥಾಪನಗಳಿಗೆ | ಪ್ರತಿ ಎಚ್.ಪಿ. ಗೆ ರೂ.**೩೦/–** |
| ೪೦ ಎಚ್.ಪಿ. ಹಾಗೂ ಅದಕ್ಕಿಂತ ಅಧಿಕ ಆದರೆ ೬೭ ಎಚ್.ಪಿ.ಗಿಂತ ಕಡಿಮೆ ಸಾಮರ್ಥ್ಯ | ಪ್ರತಿ ಎಚ್.ಪಿ. ಗೆ ರೂ.**೩೫/–** |
| ೬೭ ಎಚ್.ಪಿ. ಮತ್ತು ಅಧಿಕ | ಪ್ರತಿ ಎಚ್.ಪಿ. ಗೆ ರೂ.೧೦೦/– |

### ಬೇಡಿಕೆ ಆಧಾರಿತ ವಿದ್ಯುತ್ ದರ (ಐಚ್ಛಿಕ):

| **ಮಾಸಿಕ ನಿಗದಿತ ಶುಲ್ಕ:** | |
|---|---|
| ೫ ಎಚ್.ಪಿ.ಗಿಂತ ಅಧಿಕ ಆದರೆ ೪೦ ಎಚ್.ಪಿ.ಗಿಂತ ಕಡಿಮೆ ಸಾಮರ್ಥ್ಯ | ಬಿಲ್ಲಿಂಗ್ ಡಿಮ್ಯಾಂಡಿನ ಪ್ರತಿ ಕಿ.ವಾಟ್‌ಗೆ ರೂ.**೪೫/–** |
| ೪೦ ಎಚ್.ಪಿ. ಹಾಗೂ ಅದಕ್ಕಿಂತ ಅಧಿಕ ಆದರೆ ೬೭ ಎಚ್.ಪಿ.ಗಿಂತ ಕಡಿಮೆ ಸಾಮರ್ಥ್ಯ | ಬಿಲ್ಲಿಂಗ್ ಡಿಮ್ಯಾಂಡಿನ ಪ್ರತಿ ಕಿ.ವಾಟ್‌ಗೆ ರೂ.**೬೦/–** |
| ೬೭ ಎಚ್.ಪಿ. ಮತ್ತು ಅಧಿಕ | ಬಿಲ್ಲಿಂಗ್ ಡಿಮ್ಯಾಂಡಿನ ಪ್ರತಿ ಕಿ.ವಾಟ್‌ಗೆ ರೂ.೧**೫**೦/– |
| **ವಿದ್ಯುತ್ ಬಳಕೆ ಶುಲ್ಕ:** | |
| ೦–೫೦೦ ಯೂನಿಟ್ಟುಗಳಿಗೆ | ಪ್ರತಿ ಯೂನಿಟ್ಟಿಗೆ ೪೭೫ **ಪೈಸೆ** |
| ೫೦೧–೧೦೦೦ ಯೂನಿಟ್ಟುಗಳು | ಪ್ರತಿ ಯೂನಿಟ್ಟಿಗೆ ೫೫೫ **ಪೈಸೆ** |
| ೧೦೦೦ ಯೂನಿಟ್ಟುಗಳನ್ನು ಮೀರಿದ ಬಳಕೆಗೆ | ಪ್ರತಿ ಯೂನಿಟ್ಟಿಗೆ ೫೮೫ **ಪೈಸೆ** |

## ಎಲ್.ಟಿ.–೫(ಬಿ)

## ಮುನಿಸಿಪಲ್ ಪಾಲಿಕೆ ಹೊರತುಪಡಿಸಿ ಉಳಿದ ಪ್ರದೇಶಗಳಿಗೆ ಅನ್ವಯಿಸುತ್ತದೆ.

### ದರ ಅನುಸೂಚಿ

| **ಮಾಸಿಕ ನಿಗದಿತ ಶುಲ್ಕ:** | |
|---|---|
| ೫ ಎಚ್.ಪಿ. & ಕಡಿಮೆ ಸಾಮರ್ಥ್ಯದ ಸ್ಥಾಪನಗಳಿಗೆ | ಪ್ರತಿ ಎಚ್.ಪಿ. ಗೆ ರೂ.**೨೫/–** |
| ೫ ಎಚ್.ಪಿ.ಗಿಂತ ಅಧಿಕ ಆದರೆ ೪೦ ಎಚ್.ಪಿ.ಗಿಂತ ಕಡಿಮೆ ಸಾಮರ್ಥ್ಯದ ಸ್ಥಾಪನಗಳಿಗೆ | ಪ್ರತಿ ಎಚ್.ಪಿ. ಗೆ ರೂ.**೩೦/–** |
| ೪೦ ಎಚ್.ಪಿ. ಹಾಗೂ ಅದಕ್ಕಿಂತ ಅಧಿಕ ಆದರೆ ೬೭ ಎಚ್.ಪಿ.ಗಿಂತ ಕಡಿಮೆ ಸಾಮರ್ಥ್ಯ | ಪ್ರತಿ ಎಚ್.ಪಿ. ಗೆ ರೂ.**೩೫/–** |
| ೬೭ ಎಚ್.ಪಿ. ಮತ್ತು ಅಧಿಕ | ಪ್ರತಿ ಎಚ್.ಪಿ. ಗೆ ರೂ.**೧೦೦/–** |

### ಬೇಡಿಕೆ ಆಧಾರಿತ ವಿದ್ಯುತ್ ದರ (ಐಚ್ಛಿಕ):

| **ಮಾಸಿಕ ನಿಗದಿತ ಶುಲ್ಕ:** | |
|---|---|
| ೫ ಎಚ್.ಪಿ.ಗಿಂತ ಅಧಿಕ ಆದರೆ ೪೦ ಎಚ್.ಪಿ.ಗಿಂತ ಕಡಿಮೆ ಸಾಮರ್ಥ್ಯ | ಬಿಲ್ಲಿಂಗ್ ಡಿಮ್ಯಾಂಡಿನ ಪ್ರತಿ ಕಿ.ವಾಟ್‌ಗೆ ರೂ.**೪೫/–** |
| ೪೦ ಎಚ್.ಪಿ. ಹಾಗೂ ಅದಕ್ಕಿಂತ ಅಧಿಕ ಆದರೆ ೬೭ ಎಚ್.ಪಿ.ಗಿಂತ ಕಡಿಮೆ ಸಾಮರ್ಥ್ಯ | ಬಿಲ್ಲಿಂಗ್ ಡಿಮ್ಯಾಂಡಿನ ಪ್ರತಿ ಕಿ.ವಾಟ್‌ಗೆ ರೂ.**೬೦/–** |
| ೬೭ ಎಚ್.ಪಿ. ಮತ್ತು ಅಧಿಕ | ಬಿಲ್ಲಿಂಗ್ ಡಿಮ್ಯಾಂಡಿನ ಪ್ರತಿ ಕಿ.ವಾಟ್‌ಗೆ ರೂ.**೧೫೦/–** |
| **ವಿದ್ಯುತ್ ಬಳಕೆ ಶುಲ್ಕ:** | |
| ೦–೫೦೦ ಯೂನಿಟ್ಟುಗಳಿಗೆ | ಪ್ರತಿ ಯೂನಿಟ್ಟಿಗೆ ೪೭೦ **ಪೈಸೆ** |
| ೫೦೧–೧೦೦೦ ಯೂನಿಟ್ಟುಗಳು | ಪ್ರತಿ ಯೂನಿಟ್ಟಿಗೆ ೫೫೦ **ಪೈಸೆ** |
| ೧೦೦೦ ಯೂನಿಟ್ಟುಗಳನ್ನು ಮೀರಿದ ಬಳಕೆಗೆ | ಪ್ರತಿ ಯೂನಿಟ್ಟಿಗೆ ೫೮೦ **ಪೈಸೆ** |

### ಗ್ರಾಹಕರ ಕೋರಿಕೆಯ ಮೇರೆಗೆ ಸಮಯಾಧಾರಿತ ವಿದ್ಯುತ್ ದರ:

| **ಸಮಯಾಧಾರಿತ ಅವಧಿ** | **ಅನ್ವಯಿತ ಸಾಮಾನ್ಯ ವಿದ್ಯುತ್ ದರಕ್ಕಿಂತ ಹೆಚ್ಚಿಗೆ ದರ(+) / ಕಡಿಮೆ ದರ(–)** |
|---|---|
| ೨೨.೦೦ ರಿಂದ ೦೬.೦೦ ರವರೆಗೆ | ಯೂನಿಟ್ ಒಂದಕ್ಕೆ (–) ೧೨೫ ಪೈಸೆ |
| ೦೬.೦೦ ರಿಂದ ೧೮.೦೦ ರವರೆಗೆ | ೦ |
| ೧೮.೦೦ ರಿಂದ ೨೨.೦೦ ರವರೆಗೆ | ಯೂನಿಟ್ ಒಂದಕ್ಕೆ (+) ೧೦೦ ಪೈಸೆ |

**ಟಿಪ್ಪಣಿ :**

೧. **ಬೇಡಿಕೆ(ಡಿಮ್ಯಾಂಡ್) ಆಧಾರಿತ ವಿದ್ಯುತ್ ದರ :**

ಎಲ್.ಟಿ. ಕೈಗಾರಿಕಾ ಗ್ರಾಹಕರಿಗೆ ಸಂಬಂಧಿಸಿದಂತೆ, ಗ್ರಾಹಕರು ಕೋರಿಕೆಯ ಮೇರೆಗೆ **ಬೇಡಿಕೆ (ಡಿಮ್ಯಾಂಡ್) ಆಧಾರಿತ ವಿದ್ಯುತ್ ದರವನ್ನು** ಆಯ್ಕೆ ಮಾಡಿಕೊಳ್ಳಬಹುದಾಗಿದೆ. ಇಂತಹ ಸಂದರ್ಭಗಳಲ್ಲಿ ಮಂಜೂರಾದ ಹೊರೆಗಿಂತಲೂ ಹೆಚ್ಚು ಸಂಪರ್ಕಿತ ಹೊರೆಯನ್ನು ಗ್ರಾಹಕರು ಹೊಂದಬಹುದು. ಅಂತಹ ಸಂದರ್ಭಗಳಲ್ಲಿ, ಮಂಜೂರಾದ ಹೊರೆ, ಅಥವಾ ಆ ತಿಂಗಳಲ್ಲಿ ಟ್ರೈವೆಕ್ಟರ್ ಮೀಟರಿನಲ್ಲಿ ದಾಖಲಾದ ಗರಿಷ್ಟ ಡಿಮ್ಯಾಂಡ್, ಇವೆರಡರಲ್ಲಿ ಯಾವುದು ಹೆಚ್ಚೋ ಅದು ಬಿಲ್ಲಿಂಗ್ ಡಿಮ್ಯಾಂಡ್ ಆಗಿರುತ್ತದೆ. ಮಂಜೂರಾದ ಹೊರೆಗಿಂತ ಗರಿಷ್ಠ ಬೇಡಿಕೆಯು ಹೆಚ್ಚಾಗಿದ್ದಲ್ಲಿ, ಸಾಮಾನ್ಯ ದರದ **ಎರಡುಪಟ್ಟು ಶುಲ್ಕವನ್ನು** ದಂಡವಾಗಿ ವಿಧಿಸಲಾಗುತ್ತದೆ.

೨. **ಋತುಕಾಲಿಕ ಕೈಗಾರಿಕೆಗಳು :**

ಋತುಕಾಲಿಕ ಸೌಲಭ್ಯವನ್ನು ಹೊಂದಲು ಇಚ್ಛಿಸುವ ಕೈಗಾರಿಕೆಗಳು, ಎಲ್.ಟಿ.ಗೆ ಅನ್ವಯಿಸುವ ವಿದ್ಯುಚ್ಛಕ್ತಿ ದರಗಳ ಸಾಮಾನ್ಯ ಷರತ್ತುಗಳು ಹಾಗೂ ನಿಬಂಧನೆಗಳಲ್ಲಿನ ಪ್ಯಾರಾ ೨೪ ರ ನಿಯಮಗಳಿಗೆ ಬದ್ಧರಾಗಿರತಕ್ಕದ್ದು.

೩. ಸ್ಥಾಪನದ ಆವರಣದಲ್ಲಿ ವಿದ್ಯುತ್‌ನ್ನು ದೀಪ, ತಾಪನ ಮತ್ತು ಹವಾ ನಿಯಂತ್ರಣದ ಸಲುವಾಗಿಯೂ ಉಪಯೋಗಿಸಬಹುದು.

೪. ವೆಲ್ಡಿಂಗ್ ಟ್ರಾನ್ಸ್‌ಫಾರ್ಮರ್‌ಗಳಿಗೆ ಸಂಬಂಧಿಸಿದಂತೆ ಸಂಪರ್ಕಿತ ವಿದ್ಯುತ್ ಪ್ರಮಾಣವನ್ನು ಹೀಗೆ ಪರಿಗಣಿಸಬೇಕು.

ಎ) ಐ.ಎಸ್.೧೮೫೧ ರ ಪ್ರಕಾರ ನಿರ್ದಿಷ್ಟಪಡಿಸಿರುವ ನಾಮಫಲಕದ ಮೇಲೆ ಸೂಚಿಸಿರುವ ಕೆ.ವಿ.ಎ.ಗಳ ಗರಿಷ್ಟ ಸಾಮರ್ಥ್ಯದ ಅರ್ಧ

**ಅಥವಾ**

ಬಿ) ಲೈಸೆನ್ಸುದಾರರು ರೇಟಿಂಗ್ ಮಾಡಿದ ಸಮಯದಲ್ಲಿ ದಾಖಲು ಮಾಡಿರುವ ಕೆ.ವಿ.ಎ.ಗಳ ಗರಿಷ್ಠ ಸಾಮರ್ಥ್ಯದ ಅರ್ಧ, **ಇವುಗಳಲ್ಲಿ ಯಾವುದು ಹೆಚ್ಚಿನದೋ ಅದು.**

## ವಿದ್ಯುತ್ ದರ ಅನುಸೂಚಿ ಎಲ್.ಟಿ. – ೬

ನೀರು ಸರಬರಾಜು ಮತ್ತು ಒಳಚರಂಡಿ ಪಂಪಿಂಗ್ ಸ್ಥಾಪನಗಳು, ಸರ್ಕಾರ ಮತ್ತು ನಗರ ಸ್ಥಳೀಯ ಸಂಸ್ಥೆಗಳು/ ಗ್ರಾಮ ಪಂಚಾಯತಿಗಳು ನಿರ್ವಹಿಸುವ ಕುಡಿಯುವ ನೀರಿನ ಶುದ್ಧೀಕರಣ ಘಟಕಗಳು ಹಾಗೂ ಗ್ರಾಮ ಪಂಚಾಯತಿಗಳು – ಪಟ್ಟಣ ಮುನಿಸಿಪಾಲಿಟಿಗಳು/ ನಗರ ಮುನಿಸಿಪಾಲಿಟಿಗಳು/ ನಗರ ಸಭೆ/ರಾಜ್ಯ ಮತ್ತು ಕೇಂದ್ರ ಸರ್ಕಾರದ/ಎ.ಪಿ.ಎಂ.ಸಿ ಹಾಗೂ ಧಾರ್ಮಿಕ ಸಂಸ್ಥೆಗಳಿಂದ ನಡೆಸಲ್ಪಡುವ **ಸಾರ್ವಜನಿಕ ದೀಪಗಳು/ಉದ್ಯಾನವನದ ದೀಪಗಳು,** ಸಂಚಾರ ನಿಯಂತ್ರಣ ಸಂಕೇತ, ಸಂಚಾರ ಸ್ಥಳಗಳಲ್ಲಿ ಅಳವಡಿಸಿರುವ ಸರ್ಕಾರದ ಇಲಾಖೆಯ ಕಣ್ಗಾವಲು ಕ್ಯಾಮೆರಾಗಳು, ಭೂತಳ ಮಾರ್ಗ (ಸಬ್‌ವೇ)ಗಳು ಹಾಗೂ ಸ್ಥಳೀಯ ಸಂಸ್ಥೆಗಳ ನೀರಿನ ಕಾರಂಜಿಗಳಿಗೆ ಅನ್ವಯವಾಗುತ್ತದೆ. ಅಲ್ಲದೆ ವಿಶ್ವವಿದ್ಯಾಲಯಗಳ ನಿವಾಸಿ ಕ್ಯಾಂಪಸ್‌ಗಳು ಹಾಗೂ ಇತರ ಶೈಕ್ಷಣಿಕ ಸಂಸ್ಥೆಗಳ ಬೀದಿ ದೀಪಗಳು, ಸ್ಥಳೀಯ ಸಂಸ್ಥೆಗಳಿಂದ/ಅಭಿವೃದ್ಧಿ ಪ್ರಾಧಿಕಾರಿಗಳಿಂದ ಅನುಮೋದನೆ ಪಡೆದ ವಾಸಗೃಹ ಕಾಲೊನಿಗಳು, ಧಾರ್ಮಿಕ ಸಂಸ್ಥೆಗಳು, ಅಧಿಸೂಚಿತ ಪ್ರದೇಶಗಳು ಮತ್ತು ಕೈಗಾರಿಕಾ ಪ್ರದೇಶಗಳು/ಎಸ್ಟೇಟುಗಳಲ್ಲಿ ಬರುವ ಬೀದಿ ದೀಪಗಳು, ಅಲ್ಲದೆ ನಿವಾಸಿ ಬಡಾವಣೆಗಳಲ್ಲಿನ ನೀರು ಸರಬರಾಜು ಸ್ಥಾಪನಗಳು, ರೈಲ್ವೇ ಹಳಿ ದಾಟುವ ಬಳಿ ಇರುವ ಗೇಟ್ ಮೇನ್ ಕೊಠಡಿಗೆ

ಪಡೆದಿರುವ ವಿದ್ಯುತ್ ಹೊರೆ, ಅಲ್ಲಿ ಅಳವಡಿಸಿರುವ ಬೀದಿದೀಪ ಮತ್ತು ಸಂಕೇತ ದೀಪಗಳಿಗೂ ಅನ್ವಯಿಸುತ್ತದೆ.

**ಎಲ್.ಟಿ.–೬ಎ – ನೀರು ಸರಬರಾಜು**

**ದರ ಅನುಸೂಚಿ**

| | |
|---|---|
| **ಮಾಸಿಕ ನಿಗದಿತ ಶುಲ್ಕ:** | ಪ್ರತಿ ಎಚ್.ಪಿ.ಗೆ, ಪ್ರತಿ ತಿಂಗಳಿಗೆ, ರೂ.**೩೫.೦೦.** |
| **ವಿದ್ಯುತ್ ಬಳಕೆ ಶುಲ್ಕ:** | ಪ್ರತಿ ಯೂನಿಟ್ಟಿಗೆ ೩೪೦ **ಪೈಸೆ.** |

**ಎಲ್.ಟಿ.–೬ಬಿ – ಸಾರ್ವಜನಿಕ ದೀಪ**

**ದರ ಅನುಸೂಚಿ**

| | |
|---|---|
| ಮಾಸಿಕ ನಿಗದಿತ ಶುಲ್ಕ: | ಪ್ರತಿ ಕಿ.ವಾಟ್‌ಗೆ ಮಾಸಿಕ ರೂ.೫೦.೦೦ ಗಳು. |
| ವಿದ್ಯುತ್ ಬಳಕೆ ಶುಲ್ಕ: | ಪ್ರತಿ ಯೂನಿಟ್ಟಿಗೆ ೫೦೦ ಪೈಸೆ. |
| **ಎಲ್ ಇ ಡಿ ಬಲ್ಬ್‌ಗಳನ್ನು ಅಳವಡಿಸಿ ಉಪಯೋಗಿಸುವ ಬಳಕೆಗೆ** | ಪ್ರತಿ ಯೂನಿಟ್ಟಿಗೆ ೪೦೦ **ಪೈಸೆ.** |

## ವಿದ್ಯುತ್ ದರ ಅನುಸೂಚಿ ಎಲ್.ಟಿ. – ೭

ತಾತ್ಕಾಲಿಕ ವಿದ್ಯುತ್ ಸರಬರಾಜು ಮತ್ತು ಹೋರ್ಡಿಂಗ್ ಮತ್ತು ಜಾಹಿರಾತು ಫಲಕಗಳಿಗೆ ಬಳಸುವ ಖಾಯಂ ವಿದ್ಯುತ್ ಸರಬರಾಜು

## ವಿದ್ಯುತ್ ದರ ಅನುಸೂಚಿ ಎಲ್.ಟಿ. – ೭(ಎ)

ಎಲ್ಲಾ ಪ್ರವರ್ಗಗಳ ತಾತ್ಕಾಲಿಕ ವಿದ್ಯುತ್ ಸರಬರಾಜು ಸ್ಥಾಪನಗಳಿಗೆ ಅನ್ವಯಿಸುತ್ತದೆ

**ದರ ಅನುಸೂಚಿ**

| | |
|---|---|
| **೬೭ ಎಚ್.ಪಿ.ಗಿಂತ ಕಡಿಮೆ:** | ಮಂಜೂರಾದ ವಿದ್ಯುತ್ ಹೊರೆಯ ಪ್ರತಿ ಕಿ.ವಾಟ್‌ಗೆ, ಪ್ರತಿ ವಾರಕ್ಕೆ ಕನಿಷ್ಠ ರೂ.**೧೬೦.೦೦ ರ** ಮಿತಿಯೊಂದಿಗೆ ಬಳಕೆಯ ಪ್ರತಿ ಯೂನಿಟ್ಟಿಗೆ **೯೦೦ ಪೈಸೆ.** |

# <u>ವಿದ್ಯುತ್ ದರ ಅನುಸೂಚಿ ಎಲ್.ಟಿ. – ೭(ಬಿ)</u>

ಹೋರ್ಡಿಂಗ್ ಮತ್ತು ಜಾಹಿರಾತು ಫಲಕಗಳು, ಜಾಹಿರಾತು ಫಲಕಗಳನ್ನು ಹೊಂದಿರುವ ಬಸ್ ಷೆಲ್ಟರ್‌ಗಳು, ಖಾಸಗಿ ಜಾಹಿರಾತು ಕಾರ್ಯಭಾರಿಗಳಿಂದ ಪ್ರಾಯೋಜನೆಗೊಂಡ ಪೋಲಿಸ್ ಕ್ಯಾನೊಪಿ ಸೂಚನಾ ಫಲಕಗಳಂತಹ ಸಾರ್ವಜನಿಕ ಹಿತಾಸಕ್ತಿಯ ಖಾಸಗಿ ಜಾಹಿರಾತು ಫಲಗಕಗಳು / ಸೂಚನಾ ಫಲಕಗಳಿಗೆ <u>ಖಾಯಂ ವಿದ್ಯುತ್ ಸಂಪರ್ಕ ಆಧಾರದಲ್ಲಿ</u> ಅನ್ವಯಿಸುತ್ತದೆ.

**ದರ ಅನುಸೂಚಿ**

| | | |
|---|---|---|
| **೬೭ ಎಚ್.ಪಿ.ಗಿಂತ ಕಡಿಮೆ:** | ಮಾಸಿಕ ನಿಗದಿತ ಶುಲ್ಕ: | ಪ್ರತಿ ಕಿ.ವ್ಯಾ.ಗೆ, ಪ್ರತಿ ತಿಂಗಳಿಗೆ, ರೂ.**೪೦.೦೦.** |
| | ವಿದ್ಯುತ್ ಬಳಕೆ ಶುಲ್ಕ: | ಪ್ರತಿ ಯೂನಿಟ್ಟಿಗೆ ೯೦೦ ಪೈಸೆ. |

**ಟಿಪ್ಪಣಿ :**

೧. ಕರ್ನಾಟಕ ರಾಜ್ಯದಲ್ಲಿ ವಿದ್ಯುತ್ ಸರಬರಾಜಿಗಾಗಿ ವಿತರಣಾ ಲೈಸೆನ್ಸುದಾರರ ಷರತ್ತುಗಳು, ಇದರ ಪರಿಚ್ಛೇದ ೧೨ ರಲ್ಲಿ ಕಲ್ಪಿಸಿರುವ ಅವಕಾಶಗಳ ಪ್ರಕಾರ ವಿತರಣಾ ಮಾರ್ಗದ ವಿಸ್ತರಣೆಯೊಂದಿಗೆ ಅಥವಾ ವಿಸ್ತರಣೆ ಇಲ್ಲದೆ, **ಪೂರ್ವ ಸಂದಾಯಿತ ಎನರ್ಜಿ ಮೀಟರಿನ** ಮೂಲಕ ತಾತ್ಕಾಲಿಕ ವಿದ್ಯುತ್ ಸರಬರಾಜನ್ನು ಒದಗಿಸಲಾಗುವುದು.

೨. ಒಂದು ವರ್ಷಕ್ಕಿಂತ ಕಡಿಮೆ ಅವಧಿಗೆ ಲೈಸೆನ್ಸನ್ನು ಹೊಂದಿರುವ ಸಂಚಾರಿ ಸಿನಿಮಾ ಮಂದಿರಗಳಿಗೂ ಈ ವಿದ್ಯುತ್ ದರವು ಅನ್ವಯಿಸುತ್ತದೆ.

೩. ಕರ್ನಾಟಕ ರಾಜ್ಯದಲ್ಲಿ ವಿದ್ಯುತ್ ಸರಬರಾಜಿಗಾಗಿ ವಿತರಣಾ ಲೈಸೆನ್ಸುದಾರರ ಷರತ್ತುಗಳು, ಇದರ ಪರಿಚ್ಛೇದ ೧೨ ರಲ್ಲಿ ತಿಳಿಸಿರುವ ತಾತ್ಕಾಲಿಕ ವಿದ್ಯುತ್ ಸರಬರಾಜಿನ ಎಲ್ಲಾ ನಿಯಮಗಳನ್ನು ಸಂಪರ್ಕ ನೀಡುವುದಕ್ಕೆ ಮುಂಚೆ ಪಾಲಿಸತಕ್ಕದ್ದು.

# <u>ವಿದ್ಯುತ್ ತೆರಿಗೆ</u>

ಕರ್ನಾಟಕ ಸರ್ಕಾರದ ಅಧಿಸೂಚನೆ ಸಂಖ್ಯೆ: ಸಂವ್ಯಶಾಇ ೬೮ ಶಾಸನ ೨೦೧೨ ದಿನಾಂಕ ೧೧.೦೩.೨೦೧೩ ರ ಪ್ರಕಾರ.

## Section 3 of the Karnataka Electricity (Taxation on Consumption) (Amendment) Act, 2013 reads as follows;

**(1)** Subject to the provisions of this Act, there shall be levied and paid to the State Government electricity tax on advolorem basis at six percent on the charges payable on electricity by licensee or non-licensee through licensee or otherwise;

Provided that when the consumer consumes electricity at concessional rate or free of charge the consumer shall be liable to pay on the rate of charges of electricity levied by the licensees to other consumers.

except,-

(i) the consumers under agricultural (irrigation pump sets upto and inclusive of ten horse power);

(ii) Bhagya Jyothi and kutira jyothi categories upto the extent of free consumption allowed by the State Government from time to time; and

(iii) the consumers covered under sub-section (2).

**(2)** Subject to the provisions of this Act, there shall be levied and paid to the State Government by every non licensee electricity tax on all the units of electricity consumed by himself at such rates specified by the State Government, by notification, from time to time but not exceeding the rates specified below namely:-

(a) electricity tax not exceeding 50 paise per unit on captive consumption:

electricity tax not exceeding 25 paise per unit on auxiliary consumption in a generating station whether Captive Generating Plant or cogeneration plant or otherwise, for the auxiliary loads exceeding 50 Kilo Watts.

## ಇಂಧನ ಹೊಂದಾಣಿಕೆ ವೆಚ್ಚ

ಜಕಾತಿ ಆದೇಶ ದಿನಾಂಕ ೩೦ನೇ ಏಪ್ರಿಲ್ ೨೦೧೨ ರಲ್ಲಿ ಆಯೋಗವು ಇಂಧನ ಹೊಂದಾಣಿಕೆ ವೆಚ್ಚವನ್ನು ಗ್ರಾಹಕರಿಂದ ವಸೂಲು ಮಾಡಲು ಅನುವಾಗುವಂತೆ ಸೂಕ್ತ ವಿಧಾನವನ್ನು ಅಳವಡಿಸಲು ನಿರ್ಧರಿಸಿತ್ತು. ಆ ಪ್ರಕಾರ, ಆಯೋಗವು ದಿನಾಂಕ ೨೨ ನೇ ಮಾರ್ಚ್ ೨೦೧೩ ರಂದು ನಿಯಮಾವಳಿಗಳನ್ನು ಅಧಿಸೂಚನೆಗೊಳಿಸಿರುತ್ತದೆ. ಇಂಧನ ಹೊಂದಾಣಿಕೆ ವೆಚ್ಚಗಳು ೧ನೇ ಜುಲೈ ೨೦೧೩ ರಂದು ಮೊದಲ್ಗೊಳ್ಳುವ ಬಿಲ್ಲಿಂಗ್ ಕ್ವಾರ್ಟರ್‌ನಿಂದ ಜಾರಿಗೆ ಬರುತ್ತದೆ. ತದನಂತರ, ಆಯೋಗವು ಸದರಿ ನಿಯಮಾವಳಿಗಳಿಗೆ ತಿದ್ದುಪಡಿ ಆದೇಶವನ್ನು ದಿನಾಂಕ ೩ನೇ ಡಿಸೆಂಬರ್ ೨೦೧೩ ರಲ್ಲಿ ಅಧಿಸೂಚನೆಗೊಳಿಸಿರುತ್ತದೆ. ಈ ಪ್ರಕಾರ ಆಯೊಗವು ತ್ರೈಮಾಸಿಕವಾಗಿ ಎಲ್ಲಾ ಕಂಪನಿಗಳ ಇಂಧನ ಹೊಂದಾಣಿಕೆ ವೆಚ್ಚಗಳ ಬೇಡಿಕೆಯನ್ನು ಪರಿಗಣಿಸಿ ಪ್ರತ್ಯೇಕ ಆದೇಶವನ್ನು ಹೊರಡಿಸುತ್ತದೆ.

## ಗ್ರೀನ್ ಪವರ್ ಟಾರಿಫ್

**(ಜಕಾತಿ ಆದೇಶ–೨೦೧೫ ರ ಪ್ಯಾರಾ ೬.೫ ರಿಂದ)**

ರಾಜ್ಯದಲ್ಲಿ ಹಸಿರು ವಿದ್ಯುತ್‌ನ ಉತ್ಪಾದನೆ ಮತ್ತು ಬಳಕೆಯನ್ನು ಪ್ರೋತ್ಸಾಹಿಸಲು ಆಯೋಗವು, "ಗ್ರೀನ್ ಟಾರಿಫ್" ಗೆ ಹಾಲಿ ಇರುವ ದರ ರೂ. ೦.೫೦ ಪ್ರತಿ ಯೂನಿಟ್‌ಗೆ ಮುಂದುವರೆಸಿದೆ. ಹೆಚ್.ಟಿ. ಬಳಕೆದಾರರು "ಗ್ರೀನ್ ಟಾರಿಫ್" ಅಳವಡಿಸಿಕೊಂಡಲ್ಲಿ ಪ್ರತಿ ಯೂನಿಟ್ ಬಳಕೆಗೆ ಸಾಮಾನ್ಯ ದರಕ್ಕಿಂತ ರೂ.೦.೫೦ ಹೆಚ್ಚು ಪಾವತಿಸಬೇಕಾಗುತ್ತದೆ.

# ಜಕಾತಿ ಆದೇಶ–೨೦೧೫ ರ ಆಯ್ದ ಭಾಗಗಳು

## ಓಪನ್ ಆಕ್ಸೆಸ್/ವೀಲಿಂಗ್ ವ್ಯವಹಾರಗಳಿಗಾಗಿ ವೀಲಿಂಗ್ ದರಗಳು

(ಜಕಾತಿ ಆದೇಶ–೨೦೧೫ ರ ಪ್ಯಾರಾ ೬.೬ ರಿಂದ)

| ವಿದ್ಯುತ್ ಜಾಲ | ನಗದು ರೂಪದ ಶುಲ್ಕ | ತಾಂತ್ರಿಕ ನಷ್ಟ ಪರಿಹಾರ ರೂಪದ ಶುಲ್ಕ |
|---|---|---|
| ಹೆಚ್.ಟಿ. | ೨೧ ಪೈಸೆ ಪ್ರತಿ ಯೂನಿಟ್‌ಗೆ | ೪.೦೧% |
| ಎಲ್.ಟಿ. | ೪೯ ಪೈಸೆ ಪ್ರತಿ ಯೂನಿಟ್‌ಗೆ | ೬.೩೯% |

ಮೇಲೆ ತಿಳಿಸಿರುವ ವೀಲಿಂಗ್ ದರಗಳು, ರಾಜ್ಯದಲ್ಲಿ ಎನ್.ಸಿ.ಇ. ಮೂಲಗಳಿಂದ ವೀಲ್ ಮಾಡಿದ ವಿದ್ಯುತ್‌ನ್ನು ಹೊರತುಪಡಿಸಿ, ಮ.ವಿ.ಸ.ಕಂ. ಜಾಲವನ್ನು ಉಪಯೋಗಿಸುವ ಎಲ್ಲಾ ಓಪನ್ ಆಕ್ಸೆಸ್ / ವೀಲಿಂಗ್ ವ್ಯವಹಾರಗಳಿಗಾಗಿ ಅನ್ವಯಿಸುತ್ತದೆ.

ಪವನ ವಿದ್ಯುತ್, ಕಿರು ಜಲ ವಿದ್ಯುತ್, ಕಬ್ಬಿನ ಸಿಪ್ಪೆಯನ್ನು ಬಳಸಿ ಉತ್ಪಾದಿಸುವ ವಿದ್ಯುತ್ ಮತ್ತು ಬೈಯೋಮಾಸ್ ಯೋಜನೆಯಿಂದ ಉತ್ಪಾದಿಸುವ ವಿದ್ಯುತ್ ಬಳಕೆಗೆ ಸಂಬಂಧಿಸಿದಂತೆ ಶುಲ್ಕವನ್ನು ಮತ್ತು ದಿನಾಂಕ ೩೧.೦೩.೨೦೧೮ ರೊಳಗೆ ಕಾರ್ಯಾರಂಭ ಮಾಡಿದ ಘಟಕಗಳ ವಾಯಿದೆಯು ಕಾರ್ಯಾರಂಭ ಮಾಡಿದ ೧೦ ವರ್ಷದವರೆಗೆ ಚಾಲ್ತಿಯಲ್ಲಿರುವ ಬಗ್ಗೆ ಆಯೋಗವು ದಿನಾಂಕ ೦೪.೦೭.೨೦೧೪ ರ ಆದೇಶವನ್ನು ಹೊರಡಿಸಿದ್ದು ಈ ಸಂಬಂಧ ದಿನಾಂಕ ೧೨.೦೯.೨೦೧೪ ರ ಸ್ಪಷ್ಟೀಕರಣ ಆದೇಶವನ್ನು ಆಯೋಗವು ಹೊರಡಿಸಿದ್ದು ಸದರಿ ಆದೇಶವು ಚಾಲ್ತಿಯಲ್ಲಿದೆ.
ಸೌರಶಕ್ತಿ ಯೋಜನೆಗಳಿಗೆ ಸಂಬಂಧಿಸಿದಂತೆ ಆಯೋಗವು ದಿನಾಂಕ ೧೮.೦೮.೨೦೧೪ ರಲ್ಲಿ ಹೊರಡಿಸಿರುವ ಆದೇಶವು ಚಾಲ್ತಿಯಲ್ಲಿದೆ.

ರಾಜ್ಯದಿಂದ ಹೊರ ರಾಜ್ಯದ ಗ್ರಾಹಕರಿಗೆ / ಇತರರಿಗೆ ವೀಲ್ ಮಾಡಲಾಗುವ ನವೀಕರಿಸಬಹುದಾದ ವಿದ್ಯುತ್ ಮೂಲಗಳ ವಿದ್ಯುತ್‌ಗೆ ಪ್ಯಾರಾ ೬.೬.೧ ಮತ್ತು ೬.೬.೨ ಲ್ಲಿ ತಿಳಿಸಿರುವ ಸಾಮಾನ್ಯ ವೀಲಿಂಗ್ ದರಗಳು ಅನ್ವಯವಾಗುತ್ತದೆ. ಕ್ಯಾಪ್ಟಿವ್ ಜನರೇಟರ ರು ನವೀಕರಿಸಬಹುದಾದ ಇಂಧನ ದೃಢೀಕರಣಕ್ಕೆ ಇಚ್ಚಿಸಿದಲ್ಲಿ ಆಯೋಗವು ದಿನಾಂಕ ೦೯.೧೦.೨೦೧೩ ರಲ್ಲಿ ನೀಡಿದ ಆದೇಶದಲ್ಲಿರುವಂತೆ ಕರಾರು ಮತ್ತು ನಿಬಂಧನೆಗಳು, ದರಗಳು ಅನ್ವಯಿಸುತ್ತದೆ.

## ಓಪನ್ ಆಕ್ಸೆಸ್/ವೀಲಿಂಗ್ ವ್ಯವಹಾರಗಳಿಗಾಗಿ ಕ್ರಾಸ್ ಸಬ್ಸಿಡಿ ದರಗಳು

(ಜಕಾತಿ ಆದೇಶ–೨೦೧೫ ರ ಪ್ಯಾರಾ ೬.೭(ii) ರಿಂದ)

| ವೋಲ್ಟೇಜ್ ಮಟ್ಟ | ಹೆಚ್.ಟಿ.೨(ಎ) | ಹೆಚ್.ಟಿ.೨(ಬಿ) | ಹೆಚ್.ಟಿ.೨(ಸಿ) | ಹೆಚ್.ಟಿ.೪ | ಹೆಚ್.ಟಿ.೫ |
|---|---|---|---|---|---|
| ೬೬ ಕೆ.ವಿ & ಮೇಲ್ಪಟ್ಟು | ೯೮ ಪೈಸೆ / ಯಾನಿಟ್ | ೧೯೪ ಪೈಸೆ / ಯಾನಿಟ್ | ೧೨೯ ಪೈಸೆ / ಯಾನಿಟ್ | ೭೧ ಪೈಸೆ / ಯಾನಿಟ್ | ೫೮೩ ಪೈಸೆ / ಯಾನಿಟ್ |
| ಹೆಚ್.ಟಿ. ಮಟ್ಟ – ೧೧ ಕೆ.ವಿ. / ೩೩ ಕೆ.ವಿ. | ೬೩ ಪೈಸೆ / ಯಾನಿಟ್ | ೧೫೯ ಪೈಸೆ / ಯಾನಿಟ್ | ೯೪ ಪೈಸೆ / ಯಾನಿಟ್ | ೩೭ ಪೈಸೆ/ ಯಾನಿಟ್ | ೫೪೮ ಪೈಸೆ / ಯಾನಿಟ್ |

## ಬಳಕೆದಾರರಿಗೆ ಉಪಯುಕ್ತವಾಗುವ ಅಂಶಗಳು

- ಅವಶ್ಯಕತೆ ಇಲ್ಲದಿದ್ದಾಗ ವಿದ್ಯುತ್ ದೀಪ ಹಾಗೂ ಇತರೆ ವಿದ್ಯುತ್ ಉಪಕರಣಗಳನ್ನು ಆಫ್ ಮಾಡಿ.
- ಸೂರ್ಯನ ಬೆಳಕು ಉಚಿತ. ಹಗಲಿನಲ್ಲಿ ಅದರ ಗರಿಷ್ಠ ಬಳಕೆ ಮಾಡಿ. ಹಗಲಿನಲ್ಲಿ ಕೃತಕ ಬೆಳಕಿನ ಬಳಕೆಯನ್ನು ತಪ್ಪಿಸಿ.
- ಕೊಳವೆ ದೀಪಗಳು ಕಡಿಮೆ ವಿದ್ಯುತ್ತನ್ನು ಬಳಸಿಕೊಳ್ಳುತ್ತವೆ, ಹೆಚ್ಚಿನ ಬೆಳಕನ್ನು ನೀಡುತ್ತವೆ ಹಾಗೂ ದೀರ್ಘ ಕಾಲ ಬಾಳಿಕೆ ಬರುತ್ತವೆ.
- ಅನಾವಶ್ಯಕವಾಗಿ ರೆಫ್ರಿಜರೇಟರಿನ ಬಾಗಿಲನ್ನು ತೆರೆದಿರಬೇಡಿ.
- ಅಲಂಕಾರಿಕ ಹಾಗೂ ಕನ್‌ಸೀಲ್ಡ್ ದೀಪ ವ್ಯವಸ್ಥೆಯನ್ನು ತಪ್ಪಿಸಿ.
- ಶೈತೀಕರಣ ಹಾಗೂ ಹವಾನಿಯಂತ್ರಣ ಉಪಕರಣಗಳನ್ನು ಮಿತವಾಗಿ ಬಳಸಿ.
- ಕಟ್ಟಡದಲ್ಲಿ ಜನರು ಇಲ್ಲದಾಗ ರಕ್ಷಣಾ ದೀಪಗಳ ಹೊರತು ಮಿಕ್ಕೆಲ್ಲಾ ದೀಪಗಳನ್ನು ಆರಿಸಿ.
- ಮೋಟಾರುಗಳು ಜಖಂಗೊಳ್ಳುವುದನ್ನು ತಪ್ಪಿಸಲು, ಕೆ.ವಿ.ಎ. ಶುಲ್ಕಗಳನ್ನು ಕಡಿಮೆಗೊಳಿಸಲು ಮೋಟಾರುಗಳಿಗೆ ಶಂಟ್ ಕೆಪಾಸಿಟರುಗಳನ್ನು ಬಳಸಿ.
- ಸಡಿಲತೆಯಿಂದ ಆಗುವ ವಿದ್ಯುತ್ ನಷ್ಟವನ್ನು ನಿವಾರಿಸಲು ನಿಯಮಿತ ಮಧ್ಯಂತರಗಳಲ್ಲಿ ಬೆಲ್ಟ್ ಮತ್ತು ಪುಲ್ಲಿಗಳನ್ನು ಬಿಗಿಗೊಳಿಸಿ.
- ನಿಮ್ಮ ಅವಶ್ಯಕತೆಗೆ ತಕ್ಕಂತೆ ಮೋಟಾರುಗಳನ್ನು ಆಯ್ಕೆ ಮಾಡಿಕೊಳ್ಳಿ. ಹೆಚ್ಚು ಸಾಮರ್ಥ್ಯದ ಮೋಟಾರಿನಿಂದ ವಿದ್ಯುತ್ ನಷ್ಟ. ಹೆಚ್ಚು ದಕ್ಷತೆಯುಳ್ಳ ಮೋಟಾರುಗಳನ್ನು ಬಳಸಿ.
- ಕಡಿಮೆ ತಡೆಯುಳ್ಳ ಫುಟ್ ವಾಲ್ವ್‌ಗಳ ಶೇಕಡಾ ೧೦ ರವರೆಗೂ ವಿದ್ಯುತ್ತನ್ನು ಉಳಿಸುತ್ತವೆ.
- ಗಟ್ಟಿಯಾದ ಪಿ.ವಿ.ಸಿ.ಯ ನೀರೆಳೆಯುವ ಪೈಪುಗಳ ಶೇಕಡಾ ೧೦ ರವರೆಗೂ ವಿದ್ಯುತ್ತನ್ನು ಉಳಿಸುತ್ತವೆ.
- ನೀರಿನ ಏರು ಮತ್ತು ವಿಸರ್ಜನೆಯ ಎತ್ತರಕ್ಕೆ ತಕ್ಕ ಸಾಮರ್ಥ್ಯದ ಪಂಪ್ ಸೆಟ್‌ಗಳನ್ನು ಬಳಸಿ.
- ವಿದ್ಯುತ್ ಬಿಲ್ಲಿನ ಮೊತ್ತವನ್ನು ಕಡಿಮೆಗೊಳಿಸಲು ಸೋಲಾರ್ ವಿದ್ಯುತ್ತನ್ನು ಬಳಸಿ.